Editor: **NITYANANDASWAMI** Publisher: **U. BASAVARAJA** RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

ದುಡಿಯುವ ಜನರ ಪ್ರಾಣಮಿತ್ರ

JANASHAKTHI KANNADA VARA PATRIKE


ಸಂಪುಟ–17 ಸಂಚಿಕೆ–4 ಜನವರಿ 23–29, 2023 ಪುಟ 16 ರೂ. 10/–
Volume-17 Issue-4 January 23-29, 2023 Pages:16 Price: 10/-



17ನೇ ಸಿಐಟಿಯು
ಅಖಿಲ ಭಾರತ
ಸಮ್ಮೇಳನ
ಬೆಂಗಳೂರು । 18-22 ಜನವರಿ 2023
ಜನಪರ ನೀತಿಗಳಿಗಾಗಿ ಐಕ್ಯತೆ ಮತ್ತು ಹೋರಾಟ

ಪ್ರತಿರೋಧ ಮತ್ತು ಉಲ್ಲಂಘನೆ

ಹೋರಾಟದ ಹೊಸ ಸ್ವರೂಪಕ್ಕೆ ಕಾರ್ಮಿಕ ವರ್ಗದ ನಿರ್ಧಾರ



ದಿಗ್ಬಂಧನಗಳನ್ನು ಸವಾಲಾಗಿ ಸ್ವೀಕರಿಸಿದ ಕ್ಯೂಬಾ


"ಒಗ್ಗಟ್ಟಿನ ಎದುರು ಮಾತ್ರ ಅನ್ಯಾಯ, ಅಸಮಾನತೆಗಳು ನಡುಗುತ್ತವೆ"

– ನಾಗರಿಕ ಸನ್ಮಾನದಲ್ಲಿ ಅಲಿಡಾ ಚೆಗೆವಾರ

ನಮ್ಮ ಗಣರಾಜ್ಯ ದುರ್ಬಲಗೊಳ್ಳುತ್ತಿದೆ

‘ವೀರ’ ಸಾವರ್ಕರ್–ಏಳು ಮಿಥ್ಯೆಗಳು

ಮಿಥ್ಯೆಗಳನ್ನು ಸತ್ಯಸಂಗತಿಗಳಿಂದ ಬೇರ್ಪಡಿಸುವ ಒಂದು ಪ್ರಾಮಾಣಿಕ ಆಕಾಂಕ್ಷೆಯಿಂದ ರಚಿಸಿರುವ ಡಾ.ಶಮ್ಸುಲ್ ಇಸ್ಲಾಮ್ ರವರ ‘ಸಾವರ್ಕರ್ ಅನ್‌ಮಾಸ್ಕ್ಡ್’ ಸಾವರ್ಕರ್‌ರವರನ್ನು ಕುರಿತ ಏಳು ಮಿಥ್ಯೆಗಳನ್ನು ದಾಖಲೆಗಳ ಬೆಳಕಿನಲ್ಲಿ ಪರಿಶೀಲಿಸುತ್ತದೆ.



ಭಾಗ–13

ಡಾ.ಶಮ್ಸುಲ್‌ಇಸ್ಲಾಂ
ಅನು: ಟಿ.ಸುರೇಂದ್ರರಾವ್

ಮೊದಲ ಮಿಥ್ಯೆ ‘ಸಾವರ್ಕರ್ ಒಬ್ಬ ದಂತಕತೆಯಾದ ಸ್ವಾತಂತ್ರ್ಯ ಹೋರಾಟಗಾರ’! ಎಂಬುದು. ಇದುವರೆಗೆ ಈ ಮಿಥ್ಯೆ ಎಂತಹ ಅರೆ ಸತ್ಯಗಳು ಮತ್ತು ಸುಳ್ಳುಗಳಿಂದ ಕೂಡಿದೆ ಎಂಬುದನ್ನು ಓದಿದ್ದೀರಿ. ಇದರಲ್ಲಿ, ಭಾರತವು ಹಿಂದೂ ಮತ್ತು ಮುಸ್ಲಿಮರ ನಡುವಿನ ಘರ್ಷಣೆಯ ಕಣವಾಗಿತ್ತು ಎಂಬ ವಾದವನ್ನಾಗಲೀ ಅಥವಾ ಹಿಂದೂಗಳು ಮಾತ್ರ ಭಾರತದ ಸಹಜ ದೇಶಪ್ರೇಮಿಗಳು ಎಂಬ ನಂಬಿಕೆಯನ್ನಾಗಲೀ ಹೊಂದಿರದಿದ್ದ, ಕೋಮು ಸಾಮರಸ್ಯದ ಸ್ವತಂತ್ರ ಭಾರತದ ಆದರ್ಶಕ್ಕಾಗಿ ತುಡಿಯುತ್ತಿದ್ದ ಕ್ರಾಂತಿಕಾರಿಯಾಗಿದ್ದ ಸಾವರ್ಕರ್‌ರವರ ರಾಜಕೀಯ ಜೀವನದ ಮೊದಲ ಘಟ್ಟವನ್ನು ಮತ್ತು ಸೆಲ್ಯುಲರ್ ಜೈಲಿನಲ್ಲಿನ ಕಾರಾಗೃಹವಾಸ ಮತ್ತು ಅಲ್ಲಿನ ಘೋರ ಯಾತನೆಯಿಂದ ಸಂಪೂರ್ಣವಾಗಿ ಕುಗ್ಗಿ, ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿನ ಹಿಂದೂ–ಮುಸ್ಲಿಂ ಐಕ್ಯತೆಯಿಂದ ಆತಂಕಿತರಾಗಿದ್ದ ಬ್ರಿಟಿಷ್ ದೊರೆಗಳಿಗೆ ಕ್ಷಮಾಯಾಚನೆಯ ಅರ್ಜಿ ಸಲ್ಲಿಸುವುದರೊಂದಿಗೆ ಆರಂಭಿಸಿದ ರಾಜಕೀಯ ಬದುಕಿನ ಎರಡನೇ ಘಟ್ಟವನ್ನು ಸ್ಪಷ್ಟವಾಗಿ ಗುರುತಿಸಿದ ಲೇಖಕರು, ಹೇಗೆ ಸಾವರ್ಕರ್ ಬ್ರಿಟಿಷ್ ದೊರೆಗಳ ಆವಶ್ಯಕತೆಯನ್ನು ಈಡೇರಿಸಿದರು ಎಂಬುದನ್ನು ಓದಿದ್ದೀರಿ. ಬ್ರಿಟಿಷರ ಒಡೆದು ಆಳುವ ಯೋಜನೆಯಲ್ಲಿ ಅವರು ಎಷ್ಟು ಮುಖ್ಯವಾಗಿದ್ದರು, ಅಲ್ಪಸಂಖ್ಯಾತರದ್ದು ‘ದೇಶಾತೀತ ಸ್ವಾಮಿನಿಷ್ಠೆ’ ಎಂದು ದೂಷಿಸಿದ್ದ ಅವರೇ ವಾಸ್ತವವಾಗಿ ಹೇಗೆ ಧರ್ಮದ ಹೆಸರಿನಲ್ಲಿ ದೇಶಾತೀತ ಸ್ವಾಮಿನಿಷ್ಠೆಯನ್ನು ಪ್ರದರ್ಶಿಸಿದ್ದರು, ಒಂದೆಡೆಯಲ್ಲಿ ರಾಷ್ಟ್ರೀಯ ಆಂದೋಲನ ಅಂಗೀಕರಿಸಿದ್ದ ತ್ರಿವರ್ಣ ಬಾವುಟದ ಕಡು ವಿರೋಧಿಯಾಗಿದ್ದರೆ, ಇನ್ನೊಂದೆಡೆಯಲ್ಲಿ ಹೇಗೆ ಬ್ರಿಟಿಷರ ಬಂಟರಾಗಿದ್ದ ಹಿಂದೂ ರಾಜರುಗಳ ಮಹಾಸಮರ್ಥಕರಾಗಿದ್ದರು ಎಂಬುದನ್ನು ಓದಿದ್ದೀರಿ.
ಸಾವರ್ಕರ್ ತಮ್ಮ ಬದುಕಿನ ಬಹುಭಾಗವನ್ನು ಅಂಡಮಾನಿನ ಸೆಲ್ಯುಲರ್ ಜೈಲಿನಲ್ಲಿ ಕಳೆದರು ಎಂದು ಹಿಂದುತ್ವ ಪ್ರಚಾರಕರು ಹರಡಿರುವ ಎರಡನೇ ಮಿಥ್ಯೆಯ ಪರಿಶೀಲನೆ ಈ ಸಂಚಿಕೆಯಿಂದ ಆರಂಭವಾಗುತ್ತಿದೆ.. ..

50 ವರ್ಷಗಳ ಶಿಕ್ಷೆಯಲ್ಲಿ ಬ್ರಿಟಿಷ್ ದೊರೆಗಳ ಕೃಪೆಯಿಂದ 37 ವರ್ಷಗಳ ಮಾಫಿ!

ಸಾವರ್ಕರ್ ಅವರು ಬ್ರಿಟಿಷ್ ಆಳ್ವಿಕೆಯಲ್ಲಿ ಎರಡು ಜೀವಾವಧಿ ಶಿಕ್ಷೆ (50 ವರ್ಷಗಳು) ಅನುಭವಿಸಿದರು ಎಂದು ಉದ್ದೇಶಪೂರ್ವಕವಾದ ತಪ್ಪು ಮಾಹಿತಿಯನ್ನು ನೀಡುವ ವ್ಯವಸ್ಥಿತ ಪ್ರಯತ್ನ ನಡೆಯುತ್ತಿದೆ. ಅವರು ‘ತಮ್ಮ ಬದುಕಿನ ಅತ್ಯುತ್ತಮ ಸಮಯವನ್ನು–ಕಾಲು ಶತಮಾನಗಳ ಕಾಲ ಬ್ರಿಟಿಷರ ಜೈಲಿನಲ್ಲಿ ಕಳೆದಿದ್ದಾರೆ’ ’ಎಂದೂ ಕೆಲವರು ಹೇಳುವುದುಂಟು.

ವಾಸ್ತವಾಂಶಗಳು

ಸಾವರ್ಕರ್ ಅವರಿಗೆ ಎರಡು ಬಾರಿ ಜೀವಾವಧಿ ಶಿಕ್ಷೆ ವಿಧಿಸಿದ್ದಾರಾದರೂ, ಅವರು ಅಂಡಮಾನಿನ ಕರಿ ನೀರಿನ ಭಯಾನಕ ಜೈಲಿನಲ್ಲಿ ಕಳೆದಿದ್ದು ಕೇವಲ 10 ವರ್ಷಗಳು ಮಾತ್ರ ಮತ್ತು ಬ್ರಿಟಿಷರ ಬಂಧನದಲ್ಲಿ ಒಟ್ಟು 13 ವರ್ಷಗಳಿಗಿಂತಲೂ ಕಡಿಮೆ ಶಿಕ್ಷೆ ಅನುಭವಿಸಿದ್ದಾರೆ ಅಷ್ಟೆ. ಆದರೆ ಹಿಂದುತ್ವ ಪಡೆಯು ಸತ್ಯವನ್ನು ತಿರುಚಿ ತಮ್ಮ ಮನಸ್ಸಿಗೆ ಬಂದ ಹಾಗೆ ಸುಳ್ಳುಗಳನ್ನು ಹೇಳುವುದರ ಮೂಲಕ ದೊಡ್ಡ ವಂಚನೆ ಮಾಡುತ್ತಿದೆ. ಆದ್ದರಿಂದ ನಾವು ಈಗ ಸತ್ಯ ಏನು ಎನ್ನುವುದನ್ನು ಚರಿತ್ರೆಯ ಪುಟಗಳಿಂದ ತಿಳಿದುಕೊಳ್ಳೋಣ.

ಅಪರಾಧಿಯಾಗಿ ಸಾವರ್ಕರ್

ಮಾರ್ಚ್ 13, 1910 ರಂದು ಲಂಡನ್ ನಲ್ಲಿ ಬಂಧಿಸಲ್ಪಟ್ಟ ಸಾವರ್ಕರ್ ಅವರನ್ನು ಜುಲೈ 1, 1910 ರಂದು ವಿಚಾರಣೆಗಾಗಿ ಭಾರತ ಸರ್ಕಾರಕ್ಕೆ ಒಪ್ಪಿಸಲಾಯಿತು. ಎರಡು ವಿಶೇಷ ಟ್ರಿಬುನಲ್‌ಗಳು ಅನುಕ್ರಮವಾಗಿ ಡಿಸೆಂಬರ್ 23, 1910 ಮತ್ತು ಜನವರಿ 30, 1911 ರಂದು ತೀರ್ಪು ನೀಡಿ ಎರಡು ಜೀವಾವಧಿ ಗಡಿಪಾರು ಶಿಕ್ಷೆಯನ್ನು ನೀಡಿದವು. ಒಟ್ಟು 50 ವರ್ಷಗಳ ಎರಡು ಶಿಕ್ಷೆಗಾಗಿ ಅವರನ್ನು ಅಂಡಮಾನ್ ಜೈಲಿಗೆ ಜುಲೈ 4, 1911 ರಂದು ಕಳಿಸಲಾಯಿತು. ಆದರೆ ಕೇವಲ 10 ವರ್ಷಗಳ ಒಳಗಡೆಯೇ ಅವರನ್ನು ಅವರ ಸೋದರ ಬಾಬಾರಾವ್‌ರೊಂದಿಗೆ ಪಶ್ಚಿಮ ಭಾರತದ ರತ್ನಗಿರಿ ಮತ್ತು ಯೆರವಾಡಾ ಜೈಲಿಗೆ ಸ್ಥಳಾಂತರಿಸಲಾಯಿತು. ಜನವರಿ 6, 1924 ರಂದು ಕೆಲವು ಷರತ್ತುಗಳೊಂದಿಗೆ ಅವರನ್ನು ಬಿಡುಗಡೆ ಮಾಡಲಾಯಿತು. ಆದರೆ, ರತ್ನಗಿರಿಯ ಹಿಂದೂ ಮಹಾಸಭಾದ ಜಗಳಗಂಟ ವಾಮನ್ ರಾವ್ ಚವಾಣ್ ಎನ್ನುವವರು ಬ್ರಿಟಿಷ್ ಮಿಲಿಟರಿ ಅಧಿಕಾರಿ ಸ್ವೀಟ್ ಲ್ಯಾಂಡ್ ಎಂಬವರ ಮೇಲೆ ಗುಂಡಿನಿಂದ ಹೊಡೆದ ಪ್ರಕರಣದಲ್ಲಿ ಸಾವರ್ಕರ್ ಅವರನ್ನು 1934 ರ ಮೇ ತಿಂಗಳಲ್ಲಿ ಎರಡು ವಾರಗಳ ಕಾಲ ಬಂಧನದಲ್ಲಿ ಇರಿಸಲಾಯಿತು. ಅವನಿಗೂ ತನಗೂ ಯಾವುದೇ ಸಂಬಂಧವಿಲ್ಲವೆಂದು ಹೇಳಿಕೆ ನೀಡಿ, ಇನ್ನು ಮುಂದೆ ಯಾವುದೇ ರಾಜಕೀಯ ಚಳವಳಿಯಿಂದ ದೂರವಿರುವುದಾಗಿ ಮುಚ್ಚಳಿಕೆ ಬರೆದುಕೊಟ್ಟು ಅಲ್ಲಿಂದ ಬಿಡುಗಡೆ ಪಡೆದರು.

ಮೇ 10, 1937 ರಂದು ಅವರ ಬಿಡುಗಡೆಗೆ ಇದ್ದ ಎಲ್ಲಾ ಷರತ್ತುಗಳನ್ನು ಕೂಡ ಹಿಂದಕ್ಕೆ ಪಡೆಯಲಾಯಿತು. ಹೀಗೆ ಒಟ್ಟಿನಲ್ಲಿ 50 ವರ್ಷಗಳ ಜೈಲು ಶಿಕ್ಷೆಯಲ್ಲಿ ಅವರು 13 ವರ್ಷಗಳು ಮಾತ್ರ ಜೈಲಿನಲ್ಲಿದ್ದರು. ಅಂದರೆ ಬ್ರಿಟಿಷ್ ದೊರೆಗಳೊಂದಿಗೆ ಸನ್ನಡತೆಯ ಆಧಾರದಲ್ಲಿ ಬಿಡುಗಡೆ ಪಡೆಯುವಲ್ಲಿ 37 ವರ್ಷಗಳ ಅವಧಿಯ ಜೈಲು ವಾಸದಿಂದ ಮಾಫಿ ಪಡೆಯಲು ಸಾವರ್ಕರ್‌ಗೆ ಸಾಧ್ಯವಾಯಿತು. 1924 ರಲ್ಲಿ ಬಿಡುಗಡೆಯಾದ ನಂತರ ಸಾಮ್ರಾಜ್ಯಶಾಹಿ–ವಿರೋಧಿ ಹೋರಾಟದಿಂದ ಅವರು ದೂರ ಉಳಿದರು.

ಮಾನಿನಿ ಚಟರ್ಜಿ ಅವರ ಪ್ರಕಾರ ‘ಬಹಳ ಶೋಚನೀಯ ಸಂಗತಿಯೆಂದರೆ’ ಅಂಡಮಾನಿನ ಸೆಲ್ಯುಲರ್ ಜೈಲಿನಲ್ಲಿ ನಿಜವಾದ ಹೋರಾಟಗಾರರು ಮತ್ತು ಹುತಾತ್ಮರಿಗೆ ಇತಿಹಾಸದ ಪುಟಗಳಲ್ಲಿ ಅವರ ಸ್ಥಾನ ನೀಡದೆ ವಂಚಿಸಲಾಗಿದೆ. ರಾಮ ನಾಯ್ಕ್ ಹಾಗೂ ಒಟ್ಟಾರೆ ಸಂಘ ಪರಿವಾರದವರಿಗೆ, ಸೆಲ್ಯುಲರ್ ಜೈಲಿನಲ್ಲಿ ಮಡಿದ ಹಾಗೂ ಬಿಡುಗಡೆಯಾದ ಸಾವಿರಾರು ಹೋರಾಟಗಾರರ ನಡುವೆ ವಿನಾಯಕ್ ದಾಮೋದರ್ ಸಾವರ್ಕರ್ ಒಬ್ಬ ಮಾತ್ರ ಸ್ಮರಣಾರ್ಹ ನಾಯಕ ಎನ್ನುವುದು ತೀರಾ ದುಃಖಕರ ವಿಷಯ. ಜೈಲಿನಲ್ಲಿನ ಅಮಾನವೀಯ ಪರಿಸ್ಥಿತಿಯಿಂದಾಗಿ ಗಧರ್ ಕ್ರಾಂತಿಕಾರಿಗಳು ಅಥವಾ ಬಂಗಾಳದ ‘ಭಯೋತ್ಪಾದಕರು’ ಬ್ರಿಟಿಷರಿಂದ ದಯಾ ಭಿಕ್ಷೆ ಬೇಡಿದ್ದರು. ಆದರೆ ಅವರಲ್ಲಿ ಯಾರೂ ಕೂಡ ತಮ್ಮ ಬಿಡುಗಡೆಗೆ ವಿನಿಮಯವಾಗಿ ಭಾರತದ ವಿಮೋಚನೆಗಾಗಿನ ಅವರ ಹೋರಾಟವನ್ನು ನಿಲ್ಲಿಸಲು ಒಪ್ಪಲಿಲ್ಲ. ಕೇವಲ 9 ವರ್ಷ 10 ತಿಂಗಳು ಮಾತ್ರ ಜೈಲಿನಲ್ಲಿದ್ದು ದಯಾ ಭಿಕ್ಷೆ ಬೇಡಿ ಹೊರಬಂದು ಸ್ವಾತಂತ್ರ್ಯ ಚಳುವಳಿಗೆ ದ್ರೋಹ ಬಗೆದ ಸಾವರ್ಕರ್ ಮಾತ್ರ ಸಂಘ ಪರಿವಾರದವರಿಗೆ ಮಹಾನ್ ಸ್ವಾತಂತ್ರ್ಯ ಹೋರಾಟಗಾರ! ಎಂದು ಮಾನಿನಿ ಚಟರ್ಜಿ ವ್ಯಥೆಪಟ್ಟರು.

ವಸಾಹತುಶಾಹಿ ದೊರೆಗಳನ್ನು ಧಿಕ್ಕರಿಸಿದ ಕ್ರಾಂತಿಕಾರಿಗಳು

1857ರ ಆರಂಭದಲ್ಲಿ ತಲೆ ಬಗ್ಗಿಸದ ಹಲವಾರು ಮಹಾಸಾಹಸಿಗಳು ಹಾಗೂ ಮಹಾನ್ ಕ್ರಾಂತಿಕಾರಿಗಳು ಮತ್ತು ವಹಾಬಿ ಖೈದಿಗಳು ಸೆಲ್ಯುಲರ್ ಜೈಲಿನಲ್ಲಿ ಹುತಾತ್ಮರಾದರು. ಅಂತಹ ಕ್ರಾಂತಿಕಾರಿಗಳ ಸಾಹಸಗಾಥೆಗಳ ಬಗ್ಗೆ ಹೆಚ್ಚು ಮಾಹಿತಿ ಲಭ್ಯವಿಲ್ಲ. ಆದರೆ ಸಾವರ್ಕರ್ ಅವರ ಸಮಕಾಲೀನರಲ್ಲಿ ಬಿಡುಗಡೆ ಪಡೆಯುವಲ್ಲಿ ಹತಭಾಗ್ಯರಾದ ಕ್ರಾಂತಿಕಾರಿಗಳ ದೊಡ್ಡ ಪಟ್ಟಿಯೇ ಸಿಗುತ್ತದೆ. ನೂರಾರು ಯುವಜನರು ಸೆಲ್ಯುಲರ್ ಜೈಲಿನಲ್ಲಿ ಅಕಾಲಿಕ ವೃದ್ಧರಾದವರು, ಜೈಲಿನಲ್ಲಿ ಉಪವಾಸ ಮುಷ್ಕರ ಮಾಡಿದವರು, ಜೈಲಿನಲ್ಲಿ ಉತ್ತಮ ಸೌಲಭ್ಯಗಳಿಗಾಗಿ ದಿಟ್ಟವಾಗಿ ಹೋರಾಡಿದವರು, ಜೈಲಿನಲ್ಲಿ ತಮ್ಮದೇ ವಾಚನಾಲಯ ಮತ್ತು ಅಸಾಮಾನ್ಯ ಪರಿಸ್ಥಿತಿಯ ಎದುರು ‘ಒಂದು ವಿಶ್ವವಿದ್ಯಾಲಯ’ವನ್ನೇ ಆರಂಭಿಸಿದವರ ಬಹು ದೊಡ್ಡ ಪಟ್ಟಿ ಇದೆ.5 ಇನ್ನೂ ಕೆಲವರು ಸೆಲ್ಯುಲರ್ ಜೈಲಿನಲ್ಲಿ ಅಮಾನವೀಯ ವರ್ತನೆ ಇದ್ದಾಗ್ಯೂ ತಮ್ಮ ಸಿದ್ಧಾಂತವನ್ನು ಬಿಟ್ಟುಕೊಡಲಿಲ್ಲ ಹಾಗೂ ಕ್ಷಮಾ ಭಿಕ್ಷೆ ಬೇಡಲಿಲ್ಲ. ಅಂಥವರ ಒಬ್ಬರ ಹೆಸರೂ ಸಾವರ್ಕರ್ ಭಕ್ತರಿಗೆ ಗೊತ್ತಿರಲು ಸಾಧ್ಯವಿಲ್ಲ. ಅಂಥಹ ಕೆಲವು ಸಾಹಸಿಗಳನ್ನು ನೆನಪು ಮಾಡಿಕೊಳ್ಳುವುದು ಯೋಗ್ಯ.

ನಿರ್ಮಾಣ ಕಂಪನಿಗಳ ದುರಾಸೆ ಮತ್ತು ಸರಕಾರಗಳ ಬೇಜವಾಬ್ದಾರಿತನಕ್ಕೆ ಜನರು ಬಲಿಪಶು
‘ನಮ್ಮ ಮೆಟ್ರೊ’ ಪಿಲ್ಲರ್ ಕುಸಿತದ ಬಗ್ಗೆ ಎಐಆರ್‌ಟಿಡಬ್ಲ್ಯುಎಫ್

ಬೆಂಗಳೂರು ಮೆಟ್ರೋ ಪಿಲ್ಲರ್ ಕುಸಿದು ಯುವತಿ ಹಾಗೂ ಆಕೆಯ ಮಗು ಸಾವನ್ನಪ್ಪಿರುವ ಘಟನೆಗೆ ಅಖಿಲ ಭಾರತ ರಸ್ತೆ ಸಾರಿಗೆ ಕಾರ್ಮಿಕರ ಒಕ್ಕೂಟ(ಎಐಆರ್‌ಟಿಡಬ್ಲ್ಯುಎಫ್) ಆಘಾತ ವ್ಯಕ್ತಪಡಿಸಿದೆ. ಈ ದುರಂತಕ್ಕೆ ಕೇಂದ್ರ ಸರ್ಕಾರ ಮತ್ತು ಕರ್ನಾಟಕ ರಾಜ್ಯ ಸರ್ಕಾರವೇ ಹೊಣೆಯಾಗಬೇಕು. 20 ಲಕ್ಷ ಪರಿಹಾರ ಘೋಷಿಸಿದ ಮಾತ್ರಕ್ಕೆ ರಾಜ್ಯ ಸರ್ಕಾರ ತನ್ನ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ನಿರ್ಮಾಣದ ಸಮಯದಲ್ಲಿ ಸೇತುವೆಗಳು ಕುಸಿಯುವುದು ಸಾಮಾನ್ಯ ಸಂಗತಿಯಗಿ ಬಿಟ್ಟಿದೆ. ಕೋಲ್ಕತ್ತಾದ ಸೇತುವೆ, ಹೈದರಾಬಾದ್‌ನ ಫ್ಲೈಓವರ್, ಗುಜರಾತ್‌ನ ತಂತಿ ಸೇತುವೆ ಮತ್ತು ಇತ್ತೀಚಿನ ಬೆಂಗಳೂರು ಮೆಟ್ರೋ ಪಿಲ್ಲರ್ ಕುಸಿತ ಇದಕ್ಕೆ ಜೀವಂತ ಉದಾಹರಣೆಗಳು. ಟೆಂಡರ್ ಪಡೆದಿರುವ ಲಾಭದ ದುರಾಸೆಯ ಕಂಪನಿಗಳು, ಗುಣಮಟ್ಟ ಇತ್ಯಾದಿಗಳನ್ನು ಗಮನಿಸದಿರುವುದು ಜನರನ್ನು ಇದಕ್ಕೆ ಬಲಿಪಶುಗಳನ್ನಾಗಿ ಮಾಡುತ್ತಿದೆ. ಟೆಂಡರ್‌ಗಳು ಮುಗಿದ ನಂತರ ಪ್ರತಿ ಹಂತದಲ್ಲೂ ನಿರ್ಮಾಣದ ಮೇಲ್ವಿಚಾರಣೆಯನ್ನು ಸರ್ಕಾರಿ ಕನ್‌ಸ್ಟ್ರಕ್ಷನ್ ಎಂಜಿನಿಯರ್‌ಗಳು ನಿಭಾಯಿಸುವಂತೆ ಮಾಡುವ ಜವಾಬ್ದಾರಿಯನ್ನು ಸರ್ಕಾರಗಳು ತೆಗೆದುಕೊಳ್ಳುತ್ತಿಲ್ಲ. ಮೆಟ್ರೋ ನಿರ್ಮಾಣ ಕಂಪನಿಯ ಆದೇಶವನ್ನು ರದ್ದುಪಡಿಸಿ ಅದನ್ನು ಕಪ್ಪು ಪಟ್ಟಿಗೆ ಸೇರಿಸಬೇಕು ಮತ್ತು ಕೂಡಲೇ ಕಂಪನಿ ಮಾಲೀಕರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು ಎಂದು ಎಐಆರ್‌ಟಿಡಬ್ಲ್ಯುಎಫ್ ಕರ್ನಾಟಕ ಸರ್ಕಾರವನ್ನು ಆಗ್ರಹಿಸಿದೆ.

ಜನಶಕ್ತಿ ಕನ್ನಡ ವಾರಪತ್ರಿಕೆ
ಚಂದಾ ವಿವರ
ವಾರ್ಷಿಕ ಚಂದಾ : ರೂ.500.00
ದ್ವೈವಾರ್ಷಿಕ ಚಂದಾ : ರೂ.1000.00
ಚಂದಾದಾರರು ಸಂರ್ಕಿಸಿ :
ಕ್ರಿಯಾ ಪ್ರಕಾಶನ, ಸೂರಿ ಭವನ
ನಂ.40/5, 2ನೇ ‘ಬಿ’ ಮುಖ್ಯರಸ್ತೆ, 16ನೇ
ಅಡ್ಡರಸ್ತೆ, ಸಂಪಂಗಿರಾಮನಗರ,
ಬೆಂಗಳೂರು 560027
ಕಛೇರಿ ದೂರವಾಣಿ : 080–22234369
ಫೋನ್ : 9448578021, 9483966467

ಸಂಪಾದಕೀಯ

ದೇಶ ಉಳಿಸುವ ಶ್ರಮಿಕ ವರ್ಗದ ಮಹಾ ಕಾರ್ಯಾಚರಣೆಗೆ ಬಲ ತುಂಬ ಬೇಕು

ದೇಶವು ಹಿಂದೆಂದಿಗಿಂತಲೂ ಹೆಚ್ಚು ಆಂತರಿಕ ಬಿಕ್ಕಟ್ಟಿನಲ್ಲಿ ನರಳುತ್ತಿದೆ. ತೀವ್ರವಾದ ಅಸಮಾನತೆಯಿಂದ ದುಡಿಯುವ ವರ್ಗದ ಜನತೆಯು ಬಡತನಕ್ಕೆ ತಳ್ಳಲ್ಪಟ್ಟರೆ, ಕಾರ್ಪೋರೇಟ್ ಕಂಪನಿಗಳು ಜಾಗತಿಕ ಶ್ರೀಮಂತಿಕೆಯ ವೇಗದಲ್ಲಿ ಮುಂಚೂಣಿಯಲ್ಲಿದ್ದಾರೆ. ನವ ಉದಾರವಾದ ನೀತಿಗಳನ್ನು ಬಿಜೆಪಿಯು ತೀವ್ರವಾಗಿ ಜಾರಿಗೊಳಿಸುತ್ತಿರುವುದು ಇದಕ್ಕೊಂದು ಪ್ರಮುಖ ಕಾರಣವಾಗಿದೆ. ಕೇಂದ್ರದಲ್ಲಿ ಅಧಿಕಾರದಲ್ಲಿರುವ 'ಡಬಲ್ ಎಂಜಿನ್' ಸರಕಾರವು 'ಡಬಲ್ ಅಪಾಯಕಾರಿ'ಯಾಗಿ ಮಾರ್ಪಟ್ಟಿದೆ. ಕೃಷಿಕರನ್ನು ಕೃಷಿಯಿಂದ ಬೇರ್ಪಡಿಸಿ ಕಂಪನಿ ಕೃಷಿಗೆ ಉತ್ತೇಜನ ಕೊಡುತ್ತಿದೆ. ರಾಷ್ಟ್ರೀಯ ಶಿಕ್ಷಣ ನೀತಿಯ ಮೂಲಕ ಶಿಕ್ಷಣವನ್ನು ಖಾಸಗೀಕರಣ ಮಾತ್ರವಲ್ಲ, ಕೋಮುವಾದದ ಮನುಸ್ಮೃತೀಕರಣ ಮಾಡುತ್ತಿದೆ. ಇದರಿಂದಾಗಿ ದಲಿತ, ಆದಿವಾಸಿ, ದಮನಿತ, ಮಹಿಳೆ ಹೀಗೆ ಶ್ರಮಿಕ ವರ್ಗದ ಜನತೆಗೆ ಶಿಕ್ಷಣದ ಹಕ್ಕಿನಿಂದ ವಂಚಿತರನ್ನಾಗಿಸಲಾಗುತ್ತಿದೆ. ಇನ್ನೊಂದು ಕಡೆ ಅಸಂಘಟಿತ ಕಾರ್ಮಿಕರನ್ನು ಸಂಪೂರ್ಣ ಅಭದ್ರತೆಯತ್ತ ದೂಡಲಾಗಿದೆ. ಇದೇ ಸಂದರ್ಭದಲ್ಲಿ ದೇಶದಾದ್ಯಂತ ಜನರನ್ನು ತಮ್ಮ ದಿನನಿತ್ಯದ ಸಮಸ್ಯೆಗಳಿಂದ ವಿಮುಖರನ್ನಾಗಿಸಲು ಕೋಮುವಾದಿ ದ್ವೇಷ ಹುಯಿಲೆಬ್ಬಿಸಲಾಗುತ್ತಿದೆ. ಕೋಮು ಪ್ರಚೋದನೆಗೆ ಸರಕಾರವೇ ನೇತೃತ್ವ ಕೊಡುತ್ತಿದೆ. ಹೀಗೆ ಕಾರ್ಪೋರೇಟ್‌ಗಳ ಸುಲಿಗೆ, ಲೂಟಿ ಮತ್ತು ಕೋಮುವಾದ ಈ ಎರಡು ಅಪಾಯಗಳನ್ನು ಎದುರಿಸುತ್ತಿದೆ.

ದೇಶವು ಈ ರೀತಿಯಲ್ಲಿ ಸಂಕಟ ಎದುರಿಸುವ ಹೊತ್ತಿನಲ್ಲಿ ಭಾರತೀಯ ಕಾರ್ಮಿಕ ಸಂಘಟನೆಗಳ ಕೇಂದ್ರ–ಸಿ.ಐ.ಟಿ.ಯು.ವಿನ 17ನೆಯ ಅಖಿಲ ಭಾರತ ಸಮ್ಮೇಳನವು ಕರ್ನಾಟಕದ ಬೆಂಗಳೂರಿನಲ್ಲಿ ನಡೆಯುತ್ತಿದೆ. ಸಮಸ್ತ ಶ್ರಮಿಕರನ್ನು ಸಂಘಟಿಸಿ ಅವರ ಹಕ್ಕುಗಳಿಗಾಗಿ ಸಮರಧೀರ ಹೋರಾಟ ನಡೆಸುತ್ತಿರುವ ಈ ಸಂಘಟನೆಯು ತನ್ನ ಸಮ್ಮೇಳನದಲ್ಲಿ ನಿರ್ಣಯವನ್ನು ಅಂಗೀಕರಿಸಿದೆ. ಕಾರ್ಮಿಕರಿಗೆ ಮಾಸಿಕ ರೂ.26000 ಕನಿಷ್ಠ ವೇತನ ಮತ್ತು ರೂ.10000 ಪಿಂಚಣಿ ದೊರಕಬೇಕೆಂದು, ಅಗ್ನಿಪಥ್ ಸ್ಕೀಮ್ ರದ್ದುಗೊಳಿಸಲು, ರೈತರ ಬೆಳೆಗೆ ಬೆಂಬಲ ಬೆಲೆ ಪ್ರಶ್ನೆಯನ್ನು ಕಾಯ್ದೆಯಾಗಿಸಲು, 60 ವಯಸ್ಸು ಮೇಲ್ಪಟ್ಟ ರೈತರು ಮತ್ತು ಕೃಷಿ ಕೂಲಿಕಾರ್ಮಿಕರಿಗೆ ಮಾಸಿಕ ಪಿಂಚಣಿ ಸೌಲಭ್ಯಕ್ಕಾಗಿ, ಕಾರ್ಮಿಕ ಕೋಡ್ ಮತ್ತು ವಿದ್ಯುತ್ ಬಿಲ್ ರದ್ದತಿಗಾಗಿ, ಉದ್ಯೋಗ ಖಾತ್ರಿ ಕಾಯ್ದೆಯು 200 ದಿನಗಳಿಗೆ ವಿಸ್ತರಿಸಿ ರೂ.600 ವೇತನ ಹೆಚ್ಚಳಕ್ಕಾಗಿ ಮತ್ತು ನಗರ ಉದ್ಯೋಗ ಖಾತ್ರಿ ಕಾಯ್ದೆ ತರಲು ಆಗ್ರಹಿಸಿ, ಸಾರ್ವಜನಿಕ ಸೇವೆಗಳು ಮತ್ತು ಸಾರ್ವಜನಿಕ ವಲಯದ ಉದ್ದಿಮೆಗಳ ಖಾಸಗೀರಕರಣ ವಿರೋಧಿಸಿ, ಬೆಲೆ ಏರಿಕೆ ತಡೆಗಟ್ಟಿ, ಜೀವನಾವಶ್ಯಕ ವಸ್ತುಗಳ ಮೇಲಿನ ಜಿ.ಎಸ್.ಟಿ. ಹಿಂಪಡೆಯಲು ಒತ್ತಾಯಿಸಿ, 14 ಜೀವನಾಶ್ಯಕ ದವಸ ಧಾನ್ಯ ವಸ್ತುಗಳನ್ನೊಳಗೊಂಡು ಸಾರ್ವಜನಿಕ ವಿತರಣಾ ವ್ಯವಸ್ತೆಯನ್ನು ಸಾರ್ವತ್ರಿಕಗೊಳಿಸಲು ಒತ್ತಾಯಿಸಿ, ತೆರಿಗೆಯಾಚೆಗಿನ ಎಲ್ಲ ಕುಟುಂಬಗಳಿಗೆ ಆಹಾರ ಮತ್ತು ಆದಾಯ ಭದ್ರತೆಗಾಗಿ, ಅರಣ್ಯ ರಕ್ಷಣಾ ಕಾಯ್ದೆ ತಿದ್ದುಪಡಿ ಕೈಬಿಡಲು ಅಸಗ್ರಹಿಸಿ, ದಲಿತ ದಮನಿತರ ಮೇಲಿನ ದೌರ್ಜನ್ಯ ತಡೆಗಟ್ಟಿ ಸಾಮಾಜಿಕ ನ್ಯಾಯ ಖಾತರಿಗೊಳಿಸಲು, ಎಲ್ಲರಿಗೂ ಗುಣಮಟ್ಟದ ಶಿಕ್ಷಣ ಮತ್ತು ಆರೋಗ್ಯಕ್ಕಾಗಿ, ಹೊಸ ರಾಷ್ಟ್ರೀಯ ಶಿಕ್ಷಣ ನೀತಿ–2020 ರದ್ಧತಿಗಾಗಿ, ವಸತಿರಹಿತರಿಗೆ ವಸತಿ ಕಲ್ಪಿಸಲು ಮತ್ತು ಸಂಪತ್ತಿನ ಮೇಲಿನ ತೆರಿಗೆಗಾಗಿ, ಕಾರ್ಪೋರೆಟ್ ತೆರಿಗೆ ಹೆಚ್ಚಳಕ್ಕಾಗಿ ಆಗ್ರಹಿಸಿ ಇದೇ 5 ಎಪ್ರಿಲ್ ನಲ್ಲಿ 2023 ರಂದು ದೇಶದಾದ್ಯಂತ ಮಜದೂರ್–ಕಿಸಾನ್ ಸಂಘರ್ಷ ರ್‍ಯಾಲಿ ನಡೆಸಲು ತೀರ್ಮಾನ ಮಾಡಲಾಗಿದೆ. ದೇಶವನ್ನು ರಕ್ಷಿಸಲು, ಭಾರತದ ಒಕ್ಕೂಟ ವ್ಯವಸ್ಥೆಯನ್ನು ಬಲಪಡಿಸಲು ಕಾರ್ಮಿಕ ರೈತರ ಸಖ್ಯತೆಯು ಇಂದಿನ ಅಗತ್ಯವಾಗಿದೆ. ಕಳೆದ ವರ್ಷ ಸೆಪ್ಟೆಂಬರ್ 2,2022 ರಂದು ದೇಶದಾದ್ಯಂತ ರೈತ ಕಾರ್ಮಿಕರು ಹೋರಾಟದಂಗಳಕ್ಕೆ ಧುಮುಕಿದ್ದರು. ಜನತೆಯು ಘನತೆಯ, ಸಮತೆಯ, ನೆಮ್ಮದಿಯ ಜೀವನ ನಡೆಸಲು ಮೇಲಿನ ಹಕ್ಕೊತ್ತಾಯಗಳಿಗಾಗಿ ದನಿ ಎತ್ತಲೇ ಬೇಕಿದೆ. ಸಿಐಟಿಯು ಅಖಿಲ ಭಾರತ ಸಮ್ಮೇಳನದ ಈ ನಿರ್ಣಯವು ಅತ್ಯಂತ ಮಹತ್ವದ್ದಾಗಿದ್ದು ವಿದ್ಯಾರ್ಥಿ, ಯುವಜನ, ಮಹಿಳೆ, ರೈತರು, ಕೃಷಿ ಕೂಲಿಕಾರ್ಮಿಕರು, ನಾಗರೀಕರು ಐಕ್ಯತೆಯಿಂದ ಸಂಘಟಿತರಾಗಿ ಎಪ್ರಿಲ್ 5 ರ ಹೋರಾಟವನ್ನು ಯಶಸ್ವಿಗೊಳಿಸಬೇಕಿದೆ. ಅದಕ್ಕಾಗಿ ಬೇಕಾದ ಸಿದ್ಧತೆ ಈಗಿನಿಂದಲೇ ಮಾಡಿಕೊಳ್ಳಬೇಕಿದೆ. ಸರಕಾರವು ಕಾರ್ಪೋರೇಟ್ ಮತ್ತು ಕೋಮುವಾದಿಗಳ ಸಖ್ಯತೆಯೊಂದಿಗೆ ದೇಶದ ಮೇಲೆ ಎರಗುತ್ತಿದೆ. ಬೆಲೆ ಏರಿಕೆ, ನಿರುದ್ಯೋಗ, ಹಸಿವು ಮತ್ತು ಕ್ರೂರ ಬಡತನಕ್ಕೆ ದೇಶವನ್ನು ತಳ್ಳುವಾಗ ರೈತ–ಕಾರ್ಮಿಕರು ಐಕ್ಯತೆಯಿಂದ ದೇಶವನ್ನು ಉಳಿಸಲು ಹೋರಾಟಕ್ಕೆ ಸಜ್ಜುಗೊಳಿಸಲು ಸಿಐಟಿಯು ತೆಗೆದುಕೊಂಡ ನಿರ್ಣಯವು ಜಾರಿಗೊಳಿಸುವ ಹೊಣೆ ಹೊರುವ ಜವಾಬ್ದಾರಿ ಎಲ್ಲ ವಿವೇಕವಂತರದ್ದಾಗಿದೆ.



ನಮ್ಮ ಗಣರಾಜ್ಯ ದುರ್ಬಲಗೊಳ್ಳುತ್ತಿದೆ

ನಿತ್ಯಾನಂದಸ್ವಾಮಿ

ದೇಶ 74ನೇ ಗಣರಾಜ್ಯೋತ್ಸವವನ್ನು ಆಚರಿಸುತ್ತಿದೆ. ಗಣರಾಜ್ಯವೆಂದರೆ ಹಲವು ಗಣಗಳ ರಾಜ್ಯ. 1947ರಲ್ಲಿ ದೇಶವು ಸ್ವಾತಂತ್ರ್ಯವನ್ನು ಪಡೆದಾಗ ಭಾರತ ಎಂಬ ಉಪಖಂಡದಲ್ಲಿ ಸುಮಾರು 600 ಅರಸೊತ್ತಿಗೆಗಳು ಇದ್ದವು. ಅವುಗಳನ್ನೆಲ್ಲ ರದ್ದು ಮಾಡಿ ಇಡೀ ದೇಶವನ್ನು ಒಂದೇ ಆಡಳಿತಕ್ಕೆ ಒಳಪಡಿಸಲಾಯಿತು. ಆಗ ದೇಶಕ್ಕೆ ಒಂದೇ ಸಂವಿಧಾನ, ಒಂದೇ ಗಡಿ, ಒಂದೇ ರಾಷ್ಟ್ರಗೀತೆ, ಒಂದೇ ರಾಷ್ಟ್ರಧ್ವಜ, ಒಂದೇ ರಾಷ್ಟ್ರ ಲಾಂಚನ ಲಭಿಸುವಂತಾಯಿತು. ಇದರೊಂದಿಗೆ ಭಾರತ ಒಂದು ಗಣರಾಜ್ಯ ಎಂದು ಘೋಷಿಸಲ್ಪಟ್ಟಿತು.

ನಮ್ಮ ದೇಶದ ಸಂವಿಧಾನದ ಪ್ರಸ್ತಾವನೆ **(Preamble)**ಯಲ್ಲಿ ಹೀಗೆ ಹೇಳಲಾಗಿದೆ. "ಭಾರತದ ಪ್ರಜೆಗಳಾದ ನಾವು, ಭಾರತವನ್ನು ಒಂದು ಸಾರ್ವಭೌಮ, ಸಮಾಜವಾದಿ, ಧರ್ಮನಿರಪೇಕ್ಷ, ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ ರೂಪಿಸಲು ದೃಢ ಸಂಕಲ್ಪ ಮಾಡುತ್ತೇವೆ". ಹೀಗೆ ನಮ್ಮ ಸಂವಿಧಾನವೇ ನಮ್ಮ ದೇಶವು ಒಂದು ಗಣರಾಜ್ಯ ಎಂದು ಸಾರುತ್ತದೆ.

ಗಣರಾಜ್ಯ ಎಂದರೇನು? ಹೊಸ ಆಕ್ಸ್ ಫರ್ಡ್ ನಿಘಂಟು ಪ್ರಕಾರ ಗಣರಾಜ್ಯ(Republic) ಎಂದರೆ ಪರಮಾಧಿಕಾರ ಪ್ರಜೆಗಳ ಕೈಯಲ್ಲಿ ಇರುವ ವ್ಯವಸ್ಥೆ. ಈ ಅರ್ಥದಲ್ಲಿ ಭಾರತ ಒಂದು ಗಣರಾಜ್ಯ. ಆದರೆ ಈ ಅರ್ಥದಲ್ಲಿ ಇಂಗ್ಲೆಂಡ್ ಒಂದು ಗಣರಾಜ್ಯವಲ್ಲ. ಇಂಗ್ಲೆಂಡ್ ನಲ್ಲಿ ಪರಮಾಧಿಕಾರ ಜನರ ಕೈಯಲ್ಲಿ ಇರುವುದಿಲ್ಲ. ಇಲ್ಲಿ ರಾಷ್ಟ್ರದ ಮುಖ್ಯಸ್ಥರಾದ ರಾಜ ಅಥವ ರಾಣಿ ಜನರಿಂದ ಆಯ್ಕೆ ಆಗಿರುವುದಿಲ್ಲ. ಇಲ್ಲಿ ಪರಮಾಧಿಕಾರ ರಾಜ ಅಥವ ರಾಣಿಯ ಕೈಯಲ್ಲಿ ಇರುತ್ತದೆ. ಇಂಗ್ಲೆಂಡ್ ಒಂದು ಪ್ರಜಾಪ್ರಭುತ್ವ ರಾಷ್ಟ್ರವೇ ಹೊರತು ಅದು ಗಣರಾಜ್ಯವಲ್ಲ.

ಅಮೆರಿಕಾ ಭಾರತದಂತೆ ಒಂದು ಗಣರಾಜ್ಯವಾಗಿದೆ. ಏಕೆಂದರೆ, ಅಮೆರಿಕಾದಲ್ಲಿ ಪರಮಾಧಿಕಾರ ರಾಷ್ಟ್ರದ ಅಧ್ಯಕ್ಷರ ಕೈಯಲ್ಲಿ ಕೇಂದ್ರೀಕೃತವಾಗಿದ್ದರೂ ಅವರು ಅದನ್ನು ಜನತೆಯಿಂದ ಪಡೆಯಬೇಕು. ಅಮೆರಿಕಾದ ಅಧ್ಯಕ್ಷ ಜನರಿಂದ ಚುನಾಯಿಸಲ್ಪಡುತ್ತಾನೆ/ಳೆ. ನಮ್ಮ ಗಣರಾಜ್ಯದಲ್ಲಿ ಅಂತಿಮ ಅಧಿಕಾರ ಇರುವುದು ಪ್ರಜೆಗಳ ಕೈಯಲ್ಲಿ. ಆದ್ದರಿಂದ ಅದನ್ನು ಪ್ರಜಾರಾಜ್ಯ ಎಂತಲೂ ಕರೆಯಲ್ಪಡುತ್ತದೆ. ಒಂದು ಗಣರಾಜ್ಯದಲ್ಲಿ ಚುನಾಯಿತ ಪ್ರತಿನಿಧಿಗಳು ಪ್ರಜೆಗಳ ಪರಮಾಧಿಕಾರವನ್ನು ಚಲಾಯಿಸುತ್ತಾರೆ. ರಾಷ್ಟ್ರದ ಮುಖ್ಯಸ್ಥರು ಪ್ರಜೆಗಳಿಂದ ಚುನಾಯಿತರಾಗುವ ಪದ್ದತಿಯೇ ರಿಪಬ್ಲಿಕ್ ಪದ್ಧತಿ.

ಆದರೆ ನಮ್ಮ ಗಣರಾಜ್ಯವು ಹೆಚ್ಚೆಚ್ಚು ದುರ್ಬಲಗೊಳ್ಳುತ್ತಿರುವದು ಆತಂಕದ ಬೆಳವಣಿಗೆಯಾಗಿದೆ. ಚುನಾವಣೆಗಳೇನೋ ನಡೆಯುತ್ತಿವೆ. ಆದರೆ ಪ್ರಜೆಗಳಿಗೆ ತಮ್ಮ ಪ್ರತಿನಿಧಿಗಳನ್ನು ಸ್ವತಂತ್ರವಾಗಿ ಆಯ್ಕೆಮಾಡಲು ಸಾಧ್ಯವಾಗುತ್ತಿಲ್ಲ. ಚುನಾವಣೆಗಳು ಹಣಬಲ, ಜಾತಿಬಲ, ತೋಳ್ಬಲಗಳಿಗೆ ಬಲಿಯಾಗುತ್ತಿವೆ, ಇಲ್ಲವೇ ಆಪರೇಷನ್ ಕಮಲದಂತಹ ಚುನಾವಣಾ ಅಕ್ರಮಗಳು ಎಗ್ಗಿಲ್ಲದೆ ಜರುಗುತ್ತಿವೆ. ಜನಾಧಿಕಾರ ಕುಸಿಯುತ್ತಿದೆ. ಹೀಗೆ ನಮ್ಮ ಗಣರಾಜ್ಯ ಕ್ಷೀಣಿಸುತ್ತಾ ಹೋಗುತ್ತಿದೆ. ಪ್ರಜಾಪ್ರಭುತ್ವದ ಮರೆಯಲ್ಲಿ ಸರ್ವಾಧಿಕಾರ ತಲೆ ಎತ್ತುತ್ತಿದೆ. ನಮ್ಮ ಸಂವಿಧಾನ ಪ್ರಜೆಗಳಿಗೆ ನೀಡಿರುವ ಹತ್ತು ಹಲವು ಹಕ್ಕುಗಳು ಕಾಣೆಯಾಗುತ್ತಿವೆ.

ಗಣರಾಜ್ಯದಲ್ಲಿ ಪ್ರಜೆಗಳಿಗೆ ಸಂವಿಧಾನದ ಮೂಲಕ ವಿಭಿನ್ನ ಅಭಿಪ್ರಾಯಗಳನ್ನು ಹೊಂದಲು ಮತ್ತು ವ್ಯಕ್ತಪಡಿಸಲು ಹಕ್ಕಿದೆ. ಆದರೆ ನಮ್ಮ ದೇಶದಲ್ಲಿ ಸರ್ಕಾರದ ಅತಿರೇಕಗಳನ್ನು ಪ್ರಶ್ನಿಸುವವರ ಮೇಲೆ ರಾಷ್ಟ್ರ ದ್ರೋಹದ ಆರೋಪ ಹೊರಿಸಿ ದಂಡಿಸಲಾಗುತ್ತದೆ. ಪ್ರಜೆಗಳ ಟೀಕೆಯನ್ನು ಸಹಿಸದ ಸರ್ಕಾರ ಸರ್ವಾಧಿಕಾರಿ ಸರ್ಕಾರ ಆಗಿರುತ್ತದೆ. ದೇಶದಲ್ಲಿ ಅಂತಹ ಒಂದು ಸರ್ಕಾರ ಬೆಳೆದು ಬರುತ್ತಿರುವುದು ಆತಂಕದ ವಿಷಯವಾಗಿದೆ. ನಮ್ಮ ಗಣರಾಜ್ಯ ಪದ್ಧತಿ ಪ್ರಜೆಗಳಿಗೆ ಧಾರ್ಮಿಕ ಸ್ವಾತಂತ್ರ್ಯವನ್ನು ನೀಡುತ್ತದೆ. ಅಂದರೆ ಪ್ರಜೆಗಳು ತಮಗೆ ಇಷ್ಟವಾಗುವ ಮತಧರ್ಮವನ್ನು ಹೊಂದಬಹುದು, ಅದನ್ನು ಆಚರಿಸಬಹುದು ಮತ್ತು ಅದನ್ನು ಯಾವುದೇ ಆಮಿಷ ಒಡ್ಡದೆ ಪ್ರಚಾರ ಮಾಡಬಹುದು. ಆದರೆ ಪ್ರಜೆಗಳ ಧಾರ್ಮಿಕ ಹಕ್ಕು ಬರಬರುತ್ತಾ ಕಿತ್ತುಕೊಳ್ಳಲಾಗುತ್ತಿದೆ.

ನಮ್ಮ ಸಂವಿಧಾನವು ನಮಗೆ ಸಮಾನತೆಯ ಭರವಸೆ ನೀಡುತ್ತದೆ. ಇಲ್ಲಿ ಜಾತಿ, ಮತಧರ್ಮ, ಲಿಂಗ, ಭಾಷೆ ಮೊದಲಾದ ವಿಷಯಗಳಲ್ಲಿ ತಾರತಮ್ಯ ಅನುಸರಿಸುವಂತಿಲ್ಲ. ಅಸ್ಪೃಶ್ಯತೆ ಆಚರಿಸುವಂತಿಲ್ಲ. ಆದರೆ ನಮ್ಮ ಗಣರಾಜ್ಯ ದುರ್ಬಲಗೊಳ್ಳುತ್ತಿರುವುದರಿಂದ ಈ ಸಾಂವಿಧಾನಿಕ ಹಕ್ಕುಗಳನ್ನು ಕಿತ್ತುಕೊಳ್ಳಲಾಗುತ್ತಿದೆ.

ಗಣರಾಜ್ಯದಲ್ಲಿ ಸರ್ಕಾರ ಚರ್ಚೆಯ ಮೂಲಕ ನಡೆಯಬೇಕಾದ ಸರ್ಕಾರವಾಗಿದೆ. ಆದರೆ ನಮ್ಮ ದೇಶದ ಇಂದಿನ ಸರ್ಕಾರ ಸಂಸತ್ತಿನಲ್ಲಿಯೂ ಚರ್ಚೆಗಳಿಗೆ ಆಸ್ಪದ ಕೊಡುತ್ತಿಲ್ಲ. ಪ್ರಜಾ ಪ್ರತಿನಿಧಿಗಳ ಚರ್ಚೆಯೇ ನಡೆಯದೆ ಇಲ್ಲಿ ಮಸೂದೆಗಳು ಅಂಗೀಕರಿಸ್ಪಡುತ್ತವೆ. ಲ್ಯಾಟಿನ್ ಭಾಷೆಯಲ್ಲಿ ಗಣರಾಜ್ಯಕ್ಕೆ "Res Publica" ಅನ್ನುತ್ತಾರೆ. Res Publica ಅಂದರೆ Public Sphere. ಗಣರಾಜ್ಯ ಅಂದರೆ ಮುಕ್ತವಾದ ಸ್ಥಳ. ಇಲ್ಲಿ ಪ್ರಜೆಗಳು ತಮ್ಮ ವಿಚಾರಗಳನ್ನು ವಿನಿಮಯ ಮಾಡಿಕೊಳ್ಳುತ್ತಾರೆ. ಇಂತಹ ಚರ್ಚೆಯ ಮೂಲಕ ಉತ್ತಮವಾದ ಶಾಸನಗಳ ರಚನೆಯಾಗುತ್ತದೆ. ಈ ಉದಾತ್ತ ವಿಚಾರಗಳನ್ನು ನಮ್ಮ ಗಣರಾಜ್ಯ ಪ್ರತಿಪಾದಿಸುತ್ತದೆ. ಆದ್ದರಿಂದ ಅದನ್ನು ಕಾಪಾಡುವ ಮತ್ತು ಬಲಪಡಿಸುವ ಕರ್ತವ್ಯ ನಮ್ಮದಾಗಿದೆ.

ಸಾರಾ ಅಬೂಬಕರ್‌ಗೆ ನಾಗರಿಕ ನುಡಿನಮನ

ನಾಡಿನ ಖ್ಯಾತ ಸಾಹಿತಿ, ಹಿರಿಯ ಲೇಖಕಿ ನಾಡೋಜ ಸಾರಾ ಅಬೂಬಾಕರ್ ಅವರಿಗೆ ನಾಗರಿಕ ನುಡಿನಮನ ಕಾರ್ಯಕ್ರಮ ಜನವರಿ 15 ರಂದು ನಗರದ ಬಲ್ಮಠ ಸಹೋದಯ ಸಭಾಂಗಣದಲ್ಲಿ ನಡೆಯಿತು.

ಸರಕಾರ ಕಡೆಗಣಿಸಿದರೂ ನಾವು ಗೌರವಿಸುತ್ತೇವೆ ಮತ್ತು ನೆನಪುಗಳನ್ನು ಶಾಶ್ವತಗೊಳಿಸುತ್ತೇವೆ ಎಂಬ ಘೋಷಣೆಯೊಂದಿಗೆ ಸಮುದಾಯ ಮಂಗಳೂರು, ವಿಚಾರವಾದಿ ವೇದಿಕೆ, ಕರಾವಳಿ ವಾಚಕಿಯರ ಲೇಖಕಿಯರ ಸಂಘ, ದಸಂಸ, ದಲಿತ ಹಕ್ಕುಗಳ ಸಮಿತಿ, ಡಿವೈಎಫ್‌ಐ, ಎಐವೈಎಫ್‌ಐ, ಎಸ್‌ಎಫ್‌ಐ, ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ, ಜನವಾದಿ ಮಹಿಳಾ ಸಂಘಟನೆ, ಭಾರತೀಯ ಮಹಿಳಾ ಒಕ್ಕೂಟ, ಪ್ರಗತಿಪರ ಚಿಂತಕರ ವೇದಿಕೆ, ದೇಶಪ್ರೇಮಿ ಸಂಘಟನೆಗಳ ಒಕ್ಕೂಟ, ಅಖಿಲ ಭಾರತ ವಕೀಲರ ಸಂಘ ಹಾಗೂ ಸಮಾನ ಮನಸ್ಕರ ಸಹಭಾಗಿತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಮುಖರು ಸಾರಾ ಅವರ ವ್ಯಕ್ತಿತ್ವವನ್ನು ತೆರೆದಿಟ್ಟರು.

ಖ್ಯಾತ ಲೇಖಕಿ ಬಿ.ಎಂ. ರೋಹಿಣಿ ಮಾತನಾಡಿ, ಸಾರಾ ಅಬೂಬಾಕರ್ ಸೃಜನೇತರ ಸಾಹಿತ್ಯಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಪ್ರಭುತ್ವದ, ಪೊಲೀಸರ, ಪುರೋಹಿತಾಶಾಹಿಯ ವಿರುದ್ಧ ಅವರು ಧ್ವನಿಯೆತ್ತಿದ್ದರು. ನಾವು ನಮ್ಮ ಸುತ್ತ ಎಂದೂ ಬೇಲಿ ಹಾಕಿಕೊಳ್ಳಬಾರದು. ಅನ್ಯಾಯದ ವಿರುದ್ಧ ಧ್ವನಿ ಎತ್ತಬೇಕು ಎನ್ನುತ್ತಿದ್ದರು. ನುಡಿದಂತೆಯೇ ಅವರು ನಡೆದರು ಎಂದರು.

ರಾಷ್ಟ್ರೀಯ ವಿಚಾರವಾದಿಗಳ ವೇದಿಕೆಯ ಅಧ್ಯಕ್ಷ ಪ್ರೊ. ನರೇಂದ್ರ ನಾಯಕ್ ಮಾತನಾಡಿ, ಸಾರಾ ಪ್ರತೀ ಶಬ್ದವನ್ನು ತೂಕ ಮಾಡಿ ಬರೆಯುತ್ತಿದ್ದರು. ಅವರದ್ದು ಆತ್ಮೀಯ ನಡೆನುಡಿ. ಮನೆಗೆ ಹೋದವರಿಗೆಲ್ಲಾ ತಾನು ರಚಿಸಿದ ಕೃತಿಯನ್ನು ಗೌರವ ಕಾಣಕೆಯಾಗಿ ನೀಡುತ್ತಿದ್ದರು ಎಂದರು.

ಡಿವೈಎಫ್‌ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ ಮಾತನಾಡಿ ನಾನು ಸಾಮಾಜಿಕ ಚಳವಳಿಯಲ್ಲಿ ತೊಡಗಿಸಿಕೊಂಡಾಗ ಸಾರಾ ಅಬೂಬಕರ್ ಜೊತೆ ನಿಕಟವಾಗಿ ಬೆರೆಯುವ ಅವಕಾಶ ಸಿಗತೊಡಗಿತು. ಅವರ ವ್ಯಕ್ತಿತ್ವವು ಅನಾವರಣಗೊಳ್ಳತೊಡಗಿತು. ಜನನುಡಿ ಕಾರ್ಯಕ್ರಮ ನಡೆಸುವಾಗ ಸಾರಾ ನಮಗೆ ಧೈರ್ಯ ತುಂಬಿದ್ದರು ಎಂದರು.

ಕರಾವಳಿ ಲೇಖಕಿಯರು, ವಾಚಕಿಯರ ಸಂಘದ ಅಧ್ಯಕ್ಷೆ ಜ್ಯೋತಿ ಚೇಳ್ಯಾರು ಮಾತನಾಡಿ ಕರಾವಳಿ ಲೇಖಕಿಯರ ವಾಚಕಿಯರ ಸಂಘದ ಸ್ಥಾಪಕ ಸದಸ್ಯೆಯಾಗಿದ್ದ, ಅಧ್ಯಕ್ಷೆಯಾಗಿದ್ದ ಸಾರಾ ಅವರು ಸಂಘದ ಘನತೆ ಗೌರವ ಹೆಚ್ಚಿಸಿದ್ದರು ಎಂದರು.

ನಿವೃತ್ತ ಪ್ರಾಚಾರ್ಯ ಡಾ. ಇಸ್ಮಾಯಿಲ್ ಮಾತನಾಡಿದರು. ಸಮುದಾಯದ ವಾಸುದೇವ ಉಚ್ಚಿಲ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.





ಕುಂದಾಪುರದಲ್ಲಿ ಅಂಬೇಡ್ಕರ್ ಓದು ಕಾರ್ಯಕ್ರಮ ಉದ್ಘಾಟನೆ

ಅಂಬೇಡ್ಕರ್ ಅವರನ್ನು ಅರಿಯುವುದರಿಂದ ಮಾತ್ರ ನಿಜ ವ್ಯಕ್ತಿತ್ವ ಸಿದ್ಧಾಂತ ತಿಳಿಯುತ್ತದೆ. ಅಂಬೇಡ್ಕರ್ ಒಂದು ಸಮುದಾಯದಲ್ಲಿ ಜನಿಸಿದರೂ ಅವರ ಕೊಡುಗೆ ವ್ಯಕ್ತಿತ್ವ ಸಾಧನೆ ಕೇವಲ ಒಂದು ಸಮುದಾಯಕ್ಕೆ ಸೀಮಿತವಾಗಿರಲಿಲ್ಲ. ದೇಶದ ಆಡಳಿತದಲ್ಲಿ ಅಂಬೇಡ್ಕರ್‌ತನ ಹಾಸು ಹೊಕ್ಕಾಗಿದೆ ಎಂದು ದಲಿತ ಮುಖಂಡ ಮಂಜುನಾಥ ಗಿಳಿಯಾರು ಹೇಳಿದ್ದರು.

ಸಮುದಾಯ ಕುಂದಾಪುರ ಸಾಂಸ್ಕೃತಿಕ ಸಂಘಟನೆ ನೇತೃತ್ವದಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ, ಬುದ್ದಿಸ್ಟ್ ಸೊಸೈಟಿ ಆಫ್ ಇಂಡಿಯಾದ ಸಹಯೋಗದೊಂದಿಗೆ ಕುಂದಾಪುರದ ಅಂಬೇಡ್ಕರ್ ಭವನದಲ್ಲಿ ಆಯೋಜಿಸಿದ ಉಡುಪಿ ಜಿಲ್ಲಾ ಮಟ್ಟದ ಅಂಬೇಡ್ಕರ್ ಓದು ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಮುದಾಯ ಕುಂದಾಪುರದ ಅಧ್ಯಕ್ಷ ಸದಾನಂದ ಬೈಂದೂರು ಸ್ವಾಗತಿಸಿದರು. ರವಿ ಕಟ್ಕರೆ ವಂದಿಸಿದರು. ಕಾರ್ಯದರ್ಶಿ ವಾಸುದೇವ ಗಂಗೇರ ಕಾರ್ಯಕ್ರಮ ನಿರೂಪಿಸಿದರು.



ಬ್ರೆಜಿಲ್‌ನಲ್ಲಿ ಪ್ರಜಾಪ್ರಭುತ್ವದ ಮೇಲೆ ಬಲಪಂಥೀಯರ ದಾಳಿ: ಎಐಪಿಎಸ್‌ಒ ಖಂಡನೆ

ಅಖಿಲ ಭಾರತ ಶಾಂತಿ ಮತ್ತು ಸೌಹಾರ್ದ ಸಂಘಟನೆ (ಎಐಪಿಎಸ್‌ಒ) ಬ್ರೆಜಿಲ್‌ನಲ್ಲಿ ಇತ್ತೀಚೆಗೆ ಚುನಾಯಿತರಾದ ಅಧ್ಯಕ್ಷ ಲೂಲಾ ಸರ್ಕಾರವನ್ನು ಅಸ್ಥಿರಗೊಳಿಸುವ ಬಲಪಂಥೀಯ ಪ್ರಯತ್ನಗಳನ್ನು ಖಂಡಿಸಿದೆ. ಬ್ರೆಜಿಲ್‌ನಲ್ಲಿ ಇತ್ತೀಚೆಗೆ ನಡೆದ ಅಧ್ಯಕ್ಷೀಯ ಚುನಾವಣೆಯಲ್ಲಿ ಪರಾಜಯಗೊಂಡ ಜೈರ್ ಬೋಲ್ಸನಾರೊ ಅವರ ಬಲಪಂಥೀಯ ಬೆಂಬಲಿಗರು ಬ್ರೆಜಿಲ್‌ನಲ್ಲಿ ಸಂಸತ್ತು, ನ್ಯಾಯಾಂಗ ಮತ್ತು ಕಾರ್ಯಕಾರಿ ಕಟ್ಟಡಗಳನ್ನು ಆಕ್ರಮಿಸಿಕೊಳ್ಳಲು ಪ್ರಯತ್ನಿಸಿದರು. ಸಾಂವಿಧಾನಿಕವಾಗಿ ಚುನಾಯಿತ ಸರ್ಕಾರವನ್ನು ಅಧಿಕಾರದಿಂದ ತೆಗೆದುಹಾಕಲು ಮತ್ತು ದಂಗೆ ನಡೆಸಲು ಅವರು ಬಯಸಿದ್ದರು.

ಲೂಲಾ ಆಡಳಿತ ಮತ್ತು ಬ್ರೆಜಿಲ್ ಜನರ ಸಮಯೋಚಿತ ಮಧ್ಯಪ್ರವೇಶವು ಈ ಪ್ರಯತ್ನಗಳನ್ನು ವಿಫಲಗೊಳಿಸಿತು. ಜನಪರರಾಗಿರುವ ಲೂಲಾ ಅಧ್ಯಕ್ಷರಾಗಿ ಆಯ್ಕೆಯಾದಾಗಿನಿಂದ, ಬಲಪಂಥೀಯ ಶಕ್ತಿಗಳು ಜನಾದೇಶವನ್ನು ಸ್ವೀಕರಿಸಲು ನಿರಾಕರಿಸುತ್ತಿವೆ ಮತ್ತು ಸರ್ಕಾರವನ್ನು ಅಸ್ಥಿರಗೊಳಿಸುವ ಬೆದರಿಕೆ ಹಾಕುತ್ತಿವೆ, ಅದನ್ನು ಅವರು ಈಗ ಮಾಡಲು ಪ್ರಯತ್ನಿಸಿದ್ದಾರೆ. ಅವರ ಕ್ರಮಗಳು ಜನವರಿ 6, 2020 ರಂದು ಯುಎಸ್‌ನಲ್ಲಿ ಡೊನಾಲ್ಡ್ ಟ್ರಂಪ್ ಅವರ ಬೆಂಬಲಿಗರು ಯುಎಸ್ ಕಾಂಗ್ರೆಸ್ ಮೇಲೆ ದಾಳಿ ಮಾಡಿದಾಗ ಕಂಡುಬಂದದ್ದನ್ನು ಹೋಲುತ್ತದೆ. ಪ್ರಜಾಪ್ರಭುತ್ವದ ಮೇಲಿನ ಇಂತಹ ದಾಳಿಗಳು ಜಗತ್ತಿನ ಎಲ್ಲೆಡೆ ನಡೆದರೂ ಖಂಡಿಸಲೇಬೇಕು ಎಂದು ಎಐಪಿಎಸ್‌ಒ ಹೇಳಿದೆ.

ಬ್ರೆಜಿಲ್‌ನಲ್ಲಿ ಪ್ರಜಾಪ್ರಭುತ್ವದ ಮೇಲಿನ ದಾಳಿಯನ್ನು ಖಂಡಿಸುತ್ತ ಎಐಪಿಎಸ್‌ಒ ಜನಮತದಿಂದ ಚುನಾಯಿತರಾದ ಅಧ್ಯಕ್ಷ ಲೂಲಾ ಅವರನ್ನು ಬೆಂಬಲಿಸಲು ಅಣಿನೆರೆಯುತ್ತಿರುವ ಬ್ರೆಜಿಲ್ ಜನರೊಂದಿಗೆ ತನ್ನ ಸೌಹಾರ್ದವನ್ನು ವ್ಯಕ್ತಪಡಿಸಿದೆ. ■

ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಮೌಲಾನಾ ಆಜಾದ್ ರಾಷ್ಟ್ರೀಯ ಫೆಲೋಶಿಪ್ ರದ್ಧತಿ: ಎಸ್‌ಎಫ್‌ಐ ಪ್ರತಿಭಟನೆ

ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಮೌಲಾನಾ ಆಜಾದ್ ರಾಷ್ಟ್ರೀಯ ಫೆಲೋಶಿಪ್ (ಎಂಎಎನ್‌ಎಫ್) ಅನ್ನು ಸ್ಥಗಿತಗೊಳಿಸುವ ಕೇಂದ್ರ ಸರ್ಕಾರದ ನಿರ್ಧಾರವನ್ನು ವಿರೋಧಿಸಿ ಹತ್ತಾರು ವಿದ್ಯಾರ್ಥಿಗಳು ಸೋಮವಾರ ನವದೆಹಲಿಯಲ್ಲಿ ಅಲ್ಪಸಂಖ್ಯಾತ ವ್ಯವಹಾರಗಳ ಸಚಿವಾಲಯದ ಕಚೇರಿಯ ಮುಂದೆ ಪ್ರತಿಭಟನೆ ನಡೆಸಿದರು.



ಕಳೆದ ವಾರ ಲೋಕಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಲಿಖಿತ ಉತ್ತರದಲ್ಲಿ ಅಲ್ಪಸಂಖ್ಯಾತ ವ್ಯವಹಾರಗಳ ಸಚಿವೆ ಸ್ಮೃತಿಇರಾನಿ ಅವರು ಮೌಲಾನಾ ಆಜಾದ್ ರಾಷ್ಟ್ರೀಯ ಫೆಲೋಶಿಪ್ ಅನ್ನು 2022–23ರ ಶೈಕ್ಷಣಿಕ ಅಧಿವೇಶನದಿಂದ ಸ್ಥಗಿತಗೊಳಿಸುವ ನಿರ್ಧಾರವನ್ನು ಪ್ರಕಟಿಸಿದರು, ಇದು ಉನ್ನತ ಶಿಕ್ಷಣಕ್ಕಾಗಿ ವಿವಿಧ ಫೆಲೋಶಿಪ್ ಯೋಜನೆಗಳನ್ನು ಅತಿಕ್ರಮಿಸುತ್ತದೆ ಎಂದು ಅವರು ಕಾರಣ ಹೇಳಿದರು.

ಈ ನಿರ್ಧಾರದ ವಿರುದ್ಧ ಎಸ್‌ಎಫ್‌ಐನ ದೆಹಲಿ ಘಟಕವು ಈ ಹಿಂದೆಯೂ ಶಿಕ್ಷಣ ಸಚಿವಾಲಯದ ಹೊರಗೆ ಪ್ರತಿಭಟನೆ ನಡೆಸಿತು. ಈ ಹಿಂದೆಯೂ ತಾವು ಇದನ್ನು ಪ್ರತಿಭಟಿಸಿದ್ದೆವು, ಆಗ ತಮ್ಮನ್ನು ಬಂಧಿಸಲಾಗಿತ್ತು ಎಂದು ಈ ಪ್ರತಿಭಟನೆಯಲ್ಲಿ ಭಾಗವಹಿಸಿದ ಕಾರ್ಯಕರ್ತರು ಹೇಳುತ್ತಾರೆ.

ಎಸ್‌ಎಫ್‌ಐ ದೆಹಲಿಯ ಉಪಾಧ್ಯಕ್ಷೆ ಮತ್ತು ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದ (ಜೆಎನ್‌ಯು) ವಿದ್ಯಾರ್ಥಿ ಸಂಘದ ಅಧ್ಯಕ್ಷೆ ಆಯಿಷೆ ಘೋಷ್ "ಅಲ್ಪ ಸಂಖ್ಯಾತ ಸಮುದಾಯಗಳ ವಿದ್ಯಾರ್ಥಿಗಳಿಗೆ ಫೆಲೋಶಿಪ್ ಸಂಜೀವಿನಿಯಾಗಿದೆ. ಇಂತಹ ಯೋಜನೆಗಳಿಂದ ಮಾತ್ರ ಹಲವಾರು ಅಲ್ಪಸಂಖ್ಯಾತ ವಿದ್ಯಾರ್ಥಿಗಳು ಮತ್ತು ಆರ್ಥಿಕವಾಗಿ ದುರ್ಬಲರಾಗಿರುವ ಹಿನ್ನೆಲೆಯ ವಿದ್ಯಾರ್ಥಿಗಳು ಉನ್ನತ ಶಿಕ್ಷಣಕ್ಕೆ ಪ್ರವೇಶವನ್ನು ಪಡೆಯಲು ಸಾಧ್ಯ" ಎಂದು ಹೇಳಿದರು.

ಎಸ್‌ಎಫ್‌ಐ ದೆಹಲಿ ರಾಜ್ಯ ಸಮಿತಿಯ ಸದಸ್ಯರಾದ ಅಭಿಷೇಕ್, ಎಂಎಎನ್‌ಎಫ್ ನಂತಹ ವಿದ್ಯಾರ್ಥಿ ವೇತನಗಳು ಅಲ್ಪಸಂಖ್ಯಾತ ಸಮುದಾಯಗಳಿಂದ ಬರುವ ವಿದ್ಯಾರ್ಥಿಗಳು ತಮ್ಮ ಪಿಎಚ್‌ಡಿಗಳನ್ನು ಮುಂದುವರಿಸಲು ಹೇಗೆ ಸಹಾಯ ಮಾಡಿದೆ ಎಂಬುದನ್ನು ಎತ್ತಿ ತೋರಿಸಿದರು.

ಎಂಎಎನ್‌ಎಫ್ ಮತ್ತು ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನಗಳನ್ನು ಲಂಗುಲಗಾಮು ಇಲ್ಲದಂತೆ ರದ್ದು ಮಾಡುತ್ತಿರುವುದನ್ನು ತಾವು ವಿರೋಧಿಸುತ್ತೇವೆ ಮತ್ತು ಈ ವಿದ್ಯಾರ್ಥಿ ವೇತನಗಳನ್ನು ತಕ್ಷಣವೇ ಮರುಸ್ಥಾಪಿಸಬೇಕು ಎಂದು ಆಗ್ರಹಿಸುತ್ತೇವೆ ಎಂದು ಎಸ್‌ಎಫ್‌ಐ ಹೇಳಿದೆ.

ದೆಹಲಿಯ ವಿವಿಧ ಕ್ಯಾಂಪಸ್‌ಗಳ ಆರು ವಿದ್ಯಾರ್ಥಿಗಳ ನಿಯೋಗ ಜನವರಿ 9 ರಂದು ಅಲ್ಪಸಂಖ್ಯಾತ ವ್ಯವಹಾರಗಳ ಸಚಿವಾಲಯದ ಉಪ ಕಾರ್ಯದರ್ಶಿಯನ್ನು ಭೇಟಿ ಮಾಡಿ ಮನವಿ ಪತ್ರವನ್ನು ಸಲ್ಲಿಸಿತು. ●



ದಿಗ್ಬಂಧನ ಸವಾಲಾಗಿ ಸ್ವೀಕರಿಸಿದ ಕ್ಯೂಬಾ:

"ಒಗ್ಗಟ್ಟಿನ ಎದುರು ಅನ್ಯಾಯ, ಅಸಮಾನತೆಗಳು ನಡುಗುತ್ತವೆ"

–ನಾಗರೀಕ ಸನ್ಮಾನದಲ್ಲಿ ಡಾ. ಅಲಿಡಾ ಚೆಗುವಾರ

ಜಗತ್ತಿನ ಕ್ರಾಂತಿಕಾರಿಗಳ ನೆಚ್ಚಿನ ನಾಯಕ, ಕ್ಯೂಬಾದ ಕ್ರಾಂತಿಕಾರಿ ಚೆಗೆವಾರ ಅವರ ಮಗಳು ಮತ್ತು ಮೊಮ್ಮಗಳು ಕರ್ನಾಟಕಕ್ಕೆ ಬಂದಿದ್ದರು. ಚೆ ಅವರ ಮಗಳು ಖ್ಯಾತ ಶಿಶುವೈದ್ಯೆ ಹಾಗೂ ಜನಪರ ವೈದ್ಯೆ ಡಾ ಅಲಿಡಾ ಗೆವಾರ, ಚೆ ಅವರ ಮೊಮ್ಮಗಳು ಹವಾನಾ ವಿಶ್ವವಿದ್ಯಾಲಯದಲ್ಲಿ ಅರ್ಥಶಾಸ್ತ್ರಜ್ಞೆ ಡಾ. ಎಸ್ತೆಫಾನಿಯಾ (Estefania Guevara) ಅವರಿಗೆ 2023ರ ಜನವರಿ 19 ರಂದು ಬೆಂಗಳೂರು ನಗರದ ಕೊಂಡಜ್ಜಿ ಬಸಪ್ಪ ಸಭಾಂಗಣದಲ್ಲಿ 'ಪ್ರಗತಿಪರ ಸಂಘಟನೆಗಳು' ಹಾಗೂ 'ಕ್ಯೂಬಾ ಸೌಹಾರ್ದತಾ ಸಮಿತಿ'ಗಳಿಂದ 'ನಾಗರೀಕ ಸನ್ಮಾನ' ಕಾರ್ಯಕ್ರಮ ಆಯೋಜಿಸಿದ್ದರು. ಡಾ.ಅಲಿಡಾ ಹಾಗೂ ಡಾ.ಎಸ್ತೆ ಫಾನಿಯಾ ರವರನ್ನು ಶಾಂತಿನಗರದ ನೃತ್ಯ ತಂಡದ ಮಕ್ಕಳು ಹೂವುಗಳನ್ನು ಎರಚಿ ಸಂಭ್ರಮದಿಂದ ಸ್ವಾಗತಿಸಿದರೆ, ಯುವ ಚೇತನಗಳು ಘೋಷಣೆಗಳನ್ನು ಮೊಳಗಿಸಿ ಸ್ವಾಗತಿಸಿದರು.

ಕಾರ್ಯಕ್ರಮ ವಿಭಿನ್ನವಾಗಿತ್ತು. ಹಾಡುಗಳು ಕವಿತಾವಾಚನ, ನಾಟಕ, ಪುಸ್ತಕ, ಗ್ರೀಟಿಂಗ್ ಕಾರ್ಡ್ ಬಿಡುಗಡೆ, ಮಾತುಗಳು ಹೀಗೆ ವೈವಿಧ್ಯಮಯವಿತ್ತು. ಸಮಾಜದ ಎಲ್ಲಾ ರಂಗಗಳ ಪ್ರಮುಖರು ಹೋರಾಟದ ಕಣದಲ್ಲಿರುವ ನಾಯಕರು, ಕಾರ್ಯಕರ್ತರು ಕಿಕ್ಕಿರಿದು ತುಂಬಿ ತುಳುಕಿದ್ದು ವಿಶೇಷ. ಆರಂಭದಲ್ಲಿ ನಾಡೋಜ ಬರಗೂರು ರಾಮಚಂದ್ರಪ್ಪನವರು ಅಭಿನಂದನೆಯ ನುಡಿಗಳನ್ನು ಆಡಿದರು. ಹಾಗೆ ನಂತರದಲ್ಲಿ ವೇದಿಕೆಯಲ್ಲಿದ್ದ ಕೆಲವರ ಮಾತುಗಳು.

ಚೆ ಬದುಕಿನ ಅಪರೂಪದ ಪುಟ ತೆರೆದಿಟ್ಟ ಅಲಿಡಾ:

ತಮ್ಮ ಮಾತುಗಳ ಪ್ರಾರಂಭದಲ್ಲೇ ಅಲಿಡಾ ಅವರು ತಮ್ಮ ತಂದೆಯ 'ಸಿಗಾರ್' ಕುರಿತ ಕತೆ ಹೇಳಿದ್ದು ಹೀಗೆ, 'ಇವತ್ತು ಕರ್ನಾಟಕದಲ್ಲಿ ಕ್ರಾಂತಿಕಾರಿ ಚೆಗುವೆರಾರ ಸಿಗಾರ್ ವಿಷಯ ಚರ್ಚೆ ಆಗುತ್ತಿತ್ತು. ವಾಸ್ತವವಾಗಿ ನನ್ನ ತಂದೆ ಚೆ ಗುವೇರ ಅವರು ವೈದ್ಯರಾಗಿದ್ದು, ಅವರಿಗೆ ಅಸ್ತಮಾ ಇತ್ತು ಎನ್ನುವುದು ನಿಜ. ಹಾಗಾಗಿ ಹೆಚ್ಚು ತಂಬಾಕು ಸೇದಬೇಡಿ ಎಂದು ಚೆ ಗುವೆರಾ ಅವರಿಗೆ ವೈದ್ಯರು ಹೇಳಿದ್ದರು. ಚೆ ಗುವೆರಾ ಅವರು ಇನ್ಮುಂದೆ ಹೆಚ್ಚು ಸಿಗಾರ್ ಸೇದುವಂತಿಲ್ಲ ಎಂದು ವೈದ್ಯರು ಸಲಹೆ ನೀಡಿದ್ದಾರೆ ಎನ್ನುವುದು ತಂಬಾಕು ಕಾರ್ಮಿಕರಿಗೆ ತಿಳಿಯುತ್ತದೆ. ಇದರಿಂದ ಆತಂಕಿತರಾದ ತಂಬಾಕು ಉದ್ಯಮದ ಮುಗ್ದ ಕಾರ್ಮಿಕರು ನನ್ನ ತಂದೆಯಾದ ಚೆಗೆವಾರರನ್ನು ಭೇಟಿಯಾಗುತ್ತಾರೆ. "ನೀವು ಇನ್ಮುಂದೆ ದಿನಕ್ಕೆ ಕೇವಲ ಒಂದೇ ಸಿಗಾರ್ ಸೇದುತ್ತೀರಂತೆ. ನಿಜವೇ ಕಮಾಂಡರ್?" ಎಂದು ಕಾರ್ಮಿಕರು ಮುಗ್ದವಾಗಿ ಚೆ ಗುವೆರಾರನ್ನು ಪ್ರಶ್ನಿಸುತ್ತಾರೆ.

"ಹೌದು. ನಾನು ವೈದ್ಯರ ಸಲಹೆಯಂತೆ ಈ ಶಿಸ್ತನ್ನು ಅಳವಡಿಸಿಕೊಳ್ಳಬೇಕಿದೆ" ಎಂದು ಚೆ ಗುವೆರಾ ಉತ್ತರ ನೀಡುತ್ತಾರೆ. ಆಗ ಮುಗ್ದ ತಂಬಾಕು ಕಾರ್ಮಿಕರು ಒಂದು ಅಡಿಯಷ್ಟು ಉದ್ದದ ತಂಬಾಕು ಸಿಗಾರ್ ಅನ್ನು ಸಿದ್ದಪಡಿಸಿ ಚೆಗೆವೆರಾರವರಿಗೆ ನೀಡಿ "ಈಗ ನೀವು ವೈದ್ಯರ ಸಲಹೆಯಂತೆ ದಿನವೊಂದಕ್ಕೆ ಒಂದೇ ಸಿಗಾರ್ ಬಳಸಬಹುದು" ಎನ್ನುತ್ತಾರೆ. ಇದು ನಿಜವಾದ ಕತೆ. ಹೀಗೆ ಕ್ಯೂಬಾದ ಯಶಸ್ವಿ ಕ್ರಾಂತಿಯ ಹರಿಕಾರ ಹಾಗೂ ಇಂದಿಗೂ ಕೋಟ್ಯಾಂತರ ಯುವಕರ ಪ್ರೇರಣಾಶಕ್ತಿ ಅರ್ನೆಸ್ಟೊ ಚೆಗೆವಾರ ಅವರ ಬದುಕಿನ ಅಪರೂಪದ ಪುಟವೊಂದನ್ನು ಅಲಿಡಾ ಗೆವಾರ ತೆರೆದಿಟ್ಟರು.

> ಪ್ರೀತಿಸುವ ಸಾಮರ್ಥ್ಯ ಇದ್ದವನು ಮಾತ್ರ ಕ್ರಾಂತಿಕಾರಿ ಯಾಗಬಲ್ಲ! ಜನರ ಒಗ್ಗಟ್ಟು ಮಾತ್ರ ಮಾನವತೆಯನ್ನು ಎತ್ತರಕ್ಕೆ ಕೊಂಡೊಯ್ಯ ಬಲ್ಲದು! ಒಗ್ಗಟ್ಟಿನ ಎದುರು ಮಾತ್ರ ಅನ್ಯಾಯ, ಅಸಮತೆಗಳು ನಡುಗುತ್ತದೆ
> **– ಡಾ ಅಲೀಡಾ ಗುವೇರಾ, ಚೆ ಗುವೆರಾ ಮಗಳು.**

ಅಮೆರಿಕಾದ ನಿರ್ಬಂಧದಿಂದ ಕ್ಯೂಬಾ ಆರ್ಥಿಕ ಸಂಕಷ್ಟ ಎದುರಿಸುತ್ತಿದೆ;

ಕ್ಯೂಬಾದ ಪ್ರಚಲಿತ ವಿದ್ಯಮಾನಗಳು ಹಾಗೂ ಸಹಜ ಬದುಕಿನ ಸಂಕಷ್ಟಗಳ ಬಗ್ಗೆಯೂ ಅಲಿಡಾ ಅವರ ಮಾತು ಹೊರಳಿತು. 'ಅಮೆರಿಕಾ ಇನ್ನೂ ಕ್ಯೂಬಾದ ಬಗ್ಗೆ ಆರ್ಥಿಕ ಮತ್ತು ರಾಜಕೀಯ ನಿರ್ಬಂಧಗಳನ್ನು ಪಾಲಿಸುತ್ತಿದೆ. ಕೊವಿಡ್ ಸಮಯದಲ್ಲಿ ನನ್ನ ದೇಶ ಇನ್ನಿಲ್ಲದಂತೆ ನಲುಗಿದೆ. ನಮ್ಮಲ್ಲಿದ್ದ ಎಲ್ಲಾ ಮೀಸಲು ನಿಧಿಗಳು ಜನರ ಬದುಕು ಉಳಿಸುವ ಉದ್ದೇಶಕ್ಕಾಗಿ ಬಳಸಬೇಕಾಯಿತು' ಎಂದು ವಿವರಿಸಿದರು.

ಬಹುತೇಕ ಜೀವರಕ್ಷಕ ಔಷಧಿಗಳ ಪೇಟೆಂಟ್ ಅಮೇರಿಕಾದ ಬಳಿ ಇದೆ. ನಾವು ಹಣ ಕೊಟ್ಟರೂ ಅದು ನಮಗೆ ಔಷಧಿಗಳನ್ನು ಕೊಡುವುದಿಲ್ಲ. ಬೇರೆ ಯಾವುದಾದರೂ ದೇಶ ಅಮೆರಿಕದಿಂದ ಖರೀದಿಸಿದ ಔಷಧಿಗಳನ್ನು ನಾವು ಆ ದೇಶದಿಂದ ಖರೀದಿಸಬೇಕಿದೆ. ನಮಗೆ ಔಷಧಿಗಳನ್ನು ಕೊಟ್ಟಿದ್ದಾರೆ ಎಂದು ತಿಳಿದರೆ ಸಾಕು, ಔಷಧಿಗಳನ್ನು ಕೊಟ್ಟ ದೇಶಗಳನ್ನೂ ಅಮೆರಿಕ ಕಾಡುತ್ತದೆ. ಹೀಗಾಗಿ ನಾವು ಕನಿಷ್ಠ ಐದು ಜನರ ಕೈದಾಟದ ಮೇಲೆ ಔಷಧಿ ಕೊಳ್ಳಬೇಕು. ಆಗ ಬೆಲೆ ಎಷ್ಟು ಹೆಚ್ಚಾಗುತ್ತದೆ ಯೋಚಿಸಿ' ಎಂದು ತಮ್ಮ ದೇಶದ ಸಂಕಟ ತೋಡಿಕೊಂಡರು.

ಒಂದು ದೇಶವಾಗಿ ಕ್ಯೂಬಾ ಈ ಸಮಸ್ಯೆಗಳನ್ನು ಸವಾಲಾಗಿ ಸ್ವೀಕರಿಸಿದೆ. ನಮ್ಮ ವಿಜ್ಞಾನಿಗಳು ಕಡಿಮೆಯೇನಲ್ಲ, ಪುಟ್ಟ ರಾಷ್ಟ್ರವಾದ ಕ್ಯೂಬಾದಲ್ಲಿ ಒಟ್ಟು ಐದು ಬಗೆಯ ಕೋವಿಡ್ ವ್ಯಾಕ್ಸಿನ್ ಗಳನ್ನು ಕಂಡುಹಿಡಿದರು. ಆದರೆ ಅದಕ್ಕೆ ಬೇಕಾದ ಸಿರಿಂಜ್ ಗಳ ಮೇಲೂ ಅಮೇರಿಕಾ ನಿರ್ಬಂಧ ಹೇರಿತ್ತು. ಕಡೆಗೆ ನಾವು ನೇಸಲ್ ವ್ಯಾಕ್ಸಿನ್ ಕಂಡುಹಿಡಿದೆವು. ಮೂಗಿನ ಹೊಳ್ಳೆಗಳ ಮೂಲಕ ವ್ಯಾಕ್ಸಿನ್ ಅನ್ನು ಜನರಿಗೆ ನೀಡಿ ಯಶಸ್ಸು ಗಳಿಸಿದೆವು. ಹಾಗಾಗಿ ನಾವು ಉಳಿದವರಂತೆ ತೋಳುಗಳಿಗೆ ಇಂಜೆಕ್ಷನ್ ತೆಗೆದುಕೊಂಡಿಲ್ಲ. ಕ್ಯೂಬಾ ಈಗ ಹೊಸತೊಂದು ವ್ಯಾಕ್ಸಿನ್ ಕಂಡು ಹಿಡಿದಿದೆ. ಅದರ ಹೆಸರು ಮಾಂಬಿಸ್ಸಾ ವ್ಯಾಕ್ಸಿನ್. ಅದನ್ನೂ ಕೂಡಾ ಮೂಗಿನ ಮೂಲಕ ಕೊಡಲಾಗುತ್ತದೆ. ಹಾಗಾಗಿ ನಮಗೆ ಅಮೇರಿಕಾದ ಸಿರಿಂಜು ಅಗತ್ಯವೇ ಇಲ್ಲ. ನಾವು ನಮ್ಮ ಜನರಿಗೆ ಸಂಪೂರ್ಣ ಉಚಿತ ವೈದ್ಯಕೀಯ ಸೌಲಭ್ಯ ಕೊಡುತ್ತೇವೆ.' ಎಂದರು.

ಕೇರಳ ಮತ್ತು ಕ್ಯೂಬಾದ ಮನೋಧರ್ಮ ಒಂದೇ ಆಗಿದೆ;

ನಮ್ಮ ಜೊತೆ ಕೇರಳ ತನ್ನ ಸಾಲಿಡಾರಿಟಿಯನ್ನು ತೋರಿಸಿತು. ಕ್ಯೂಬಾ ಒಂದು ದೇಶವಾಗಿ ಕೇರಳದ ಜೊತೆ ಜೊತೆಗೆ ಸಾಗುತ್ತಿದ್ದೇವೆ. ಇದಕ್ಕೆ ನಾವು ಒಗ್ಗಟ್ಟು ಎನ್ನುತ್ತೇವೆ. ಆಯುರ್ವೇದಿಕೆ ಮೆಡಿಸಿನ್ ಗಳನ್ನು ಕ್ಯೂಬಾದಲ್ಲಿ ಅಭಿವೃದ್ದಿಪಡಿಸಲು ಕೇರಳ ಸಹಕಾರ ನೀಡಿದೆ. ಕೇರಳ ಮತ್ತು ಕ್ಯೂಬಾದ ಮನೋಧರ್ಮ ಒಂದೇ ಆಗಿದೆ. ಹಾಗಾಗಿ ಕೇರಳ ಮತ್ತು ಕ್ಯೂಬಾದಲ್ಲಿ ಒಂದೇ ರೀತಿಯ ಯೋಜನೆ

ಪುಟ 7 ಕ್ಕೆ

ಕರ್ನಾಟಕದಲ್ಲಿ ಮರುಕಳಿಸಿದ ಚೆಗೆವಾರ ನೆನಪು

ಕನ್ನಡದ ಸೃಜನಶೀಲ ಮತ್ತು ವೈಚಾರಿಕ ಸಾಹಿತ್ಯದ ಮೇಲೆ ಚೆಗೆವಾರ ಪ್ರಭಾವ ಬಹುಕಾಲದಿಂದಲೂ ಉಳಿದುಬಂದಿದೆ. ಇದೀಗ ಡಾ ಅಲಿಡಾ ಗೆವಾರ ಮತ್ತು ಎಸ್ತೆ ಫಾನಿಯಾ ಭೇಟಿಯ ಹಿನ್ನೆಲೆಯಲ್ಲಿ ಹಲವರು ಈ ಪುಸ್ತಕಗಳನ್ನು ಮೆಲುಕು ಹಾಕುತ್ತಿದ್ದಾರೆ. ಕನ್ನಡದಲ್ಲಿ ಚೆ ಚೆಗೆವಾರ ಜೀವನ ಚರಿತ್ರೆ, ಕ್ಯೂಬಾದ ಇತಿಹಾಸ, ಹೋರಾಟದ ಪುಟಗಳನ್ನು ಕಟ್ಟಿಕೊಡುವ ಹಲವು ಪುಸ್ತಕಗಳು ಪ್ರಕಟವಾಗಿವೆ. ಈ ಸಂದರ್ಭದಲ್ಲಿ 'ನನ್ನೊಳಗಿನ ಹಾಡು ಕ್ಯೂಬಾ' ಜಿ. ಎನ್.ಮೋಹನ್ ಅವರ ಪುಸ್ತಕದ 26ನೇಯ ಆವೃತ್ತಿ ಬಿಡುಗಡೆ ಮಾಡಿದರು.



"ಚೆ ಗೆವಾರ" ಜನ ಸಂಸ್ಕೃತಿಯ ಪ್ರತಿಪಾದಕ

– ಪ್ರೊ. ಬರಗೂರು ರಾಮಚಂದ್ರಪ್ಪ

ಚೆ ಗೆವಾರ" ಜನ ಸಂಸ್ಕೃತಿಯ ಪ್ರತಿಪಾದಕ, ಅವರು ಆಶಾವಾದಕ್ಕೆ ಪ್ರೇರಣೆ ಆಗಿದ್ದಾರೆ ಎಂದು ಹಿರಿಯ ಸಾಹಿತಿ ಬರಗೂರು ರಾಮಚಂದ್ರಪ್ಪ ಹೇಳಿದರು.

ವಿವಿಧ ಸಂಘಟನೆಗಳ ಸೌಹಾರ್ದ ಸಮಿತಿ "ಭಾರತಕ್ಕೆ ಬೇಕು "ಚೇ" ತನ" ಹಮ್ಮಿಕೊಂಡಿದ್ದ ಚೆ ಗೆವಾರ ಅವರ ಪುತ್ರಿ ಡಾ.ಅಲಿಡಾ ಗೆವಾರ ಮತ್ತು ಮೊಮ್ಮಗಳು ಡಾ.ಎಸ್ತಿಫಾನಿಯಾ ಅವರಿಗೆ ನಾಗರಿಕ ಸನ್ಮಾನ ಹಾಗೂ ಕ್ಯೂಬಾ ಸೌಹಾರ್ದ ಕಾರ್ಯಕ್ರಮದಲ್ಲಿ ಮಾತನಾಡುತ್ತಾ ಬರಗೂರು ರಾಮಚಂದ್ರಪ್ಪನವರು 'ಸಾಹಿತ್ಯ ಅಕಾಡೆಮಿಯ ಅಧ್ಯಕ್ಷನಾಗಿದ್ದ ಅವಧಿಯಲ್ಲಿ 'ಸಾಮಾಜಿಕ ಚಿಂತನ ಮಾಲೆ' ಎಂಬ ಕೃತಿಯನ್ನು ಹೊರತರಲಾಗಿತ್ತು. ಚೆ ಗೆವಾರ ಅವರ ಕುರಿತಾದ ಲೇಖನವೂ ಅದರಲ್ಲಿತ್ತು. ಅದು ಪ್ರಜಾಪ್ರಭುತ್ವದ ಸ್ವಾತಂತ್ರ್ಯ. ಈಗ ಆ ರೀತಿಯ ಲೇಖನ ಪ್ರಕಟಿಸಿದರೆ 'ದೇಶದ್ರೋಹಿ'ಗಳಾಗಬಹುದು!. ಚೆ ಗೆವಾರ ಅಗಲಿ 55 ವರ್ಷಗಳಾದರೂ ಅವರು ನಮ್ಮೊಳಗೆ ಇನ್ನೂ ಚೇತನವಾಗಿದ್ದಾರೆ. ಟಿ ಶರ್ಟ್, ಟೋಪಿ, ಹಚ್ಚೆ ಸೇರಿ ವಿವಿಧೆಡೆ ಅವರ ಭಾವಚಿತ್ರವನ್ನು ಕಾಣಬಹುದು. ಅವರು ಜನ ಸಂಸ್ಕೃತಿಯನ್ನು ಪ್ರತಿಪಾದಿಸಿದ್ದರು. ಅವರು ಆಶಾವಾದಕ್ಕೆ ಪ್ರೇರಣೆಯಾಗಿದ್ದಾರೆ' ಈಗಲೂ ಕ್ಯೂಬಾದಲ್ಲಿ ಶಾಲಾ ಮಕ್ಕಳು ರಾಷ್ಟ್ರಗೀತೆಯ ನಂತರ 'ನಾವೆಲ್ಲ ಚೆ ಗೆವಾರ ಆಗುತ್ತೇವೆ' ಎಂದು ಘೋಷಣೆಯನ್ನು ಮೊಳಗಿಸುತ್ತಾರೆ ಎಂದರು.

"ದೇಶದಲ್ಲಿ ಬಹುಮುಖದ ಆಶಯದಲ್ಲಿ ಸರ್ವಾಧಿಕಾರ ನಡೆಯುತ್ತಿದೆ. ಹುಸಿ ಸಂಸ್ಕೃತಿಯನ್ನೇ ನಿಜ ಸಂಸ್ಕೃತಿ ಎಂದು ಮೆರೆಯಲಾಗುತ್ತಿದೆ. ಬಹುತ್ವ ಪ್ರತಿಪಾದಿಸುವ ಈ ದೇಶದಲ್ಲಿ ಬಹು ಸಂಸ್ಕೃತಿಯನ್ನು ನಾಶ ಮಾಡುವ ಪ್ರವೃತ್ತಿ ಹೆಚ್ಚಾಗುತ್ತಿದೆ" ಎಂದು ಕಳವಳ ವ್ಯಕ್ತಪಡಿಸಿದರು.

ಚುನಾವಣಾ ವೇಳಾಪಟ್ಟಿ ಪ್ರಕಟವಾಗುತ್ತಿರುವಂತೆಯೇ ತ್ರಿಪುರಾದಲ್ಲಿ ತೀವ್ರಗೊಂಡ ಹಲ್ಲೆ-ಹಿಂಸಾಚಾರ
ದೃಢ, ನಿರ್ಣಾಯಕ ಕ್ರಮ ಕೈಗೊಳ್ಳುವಂತೆ ಚುನಾವಣಾ ಆಯೋಗಕ್ಕೆ ಆಗ್ರಹ



ತ್ರಿಪುರಾ ರಾಜ್ಯದ ವಿಧಾನಸಭೆಗೆ ಚುನಾವಣೆಗಳ ವೇಳಾಪಟ್ಟಿಯನ್ನು ಚುನಾವಣಾ ಆಯೋಗ ಪ್ರಕಟಿಸಿದೆ. ಈ ಪ್ರಕಟನೆ ಹೊರಬೀಳುತ್ತಿದ್ದಂತೆ ತ್ರಿಪುರಾದಲ್ಲಿ ಸಿಪಿಐ(ಎಂ) ಸೇರಿದಂತೆ ವಿರೋಧ ಪಕ್ಷಗಳ ಮುಖಂಡರು ಮತ್ತು ಕಾರ್ಯಕರ್ತರ ಮೇಲೆ ಆಳುವ ಬಿಜೆಪಿ ಪಕ್ಷದ ಗೂಂಡಾಗಳಿಂದ ನಡೆಯುತ್ತಿರುವ ಹಲ್ಲೆ-ಹಿಂಸಾಚಾರಗಳು ತೀವ್ರಗೊಂಡಿವೆ. ಈ ಸಂಬಂಧ ಸಿಪಿಐ(ಎಂ)ನ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಯವರ ನೇತೃತ್ವದ ಮೂವರು ಸದಸ್ಯರ ನಿಯೋಗವೊಂದು ಚುನಾವಣಾ ಆಯೋಗವನ್ನು ಭೇಟಿ ಮಾಡಿ, ತ್ರಿಪುರಾದ ಜನತೆಗೆ ಭರವಸೆ ನೀಡಿರುವಂತೆ ಹಿಂಸಾಚಾರ ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆ ನಡೆಸುವತ್ತ ತುರ್ತು ಕ್ರಮಗಳನ್ನು ಕೈಗೊಳ್ಳುವಂತೆ ಆಗ್ರಹಿಸಿ ಒಂದು ಮನವಿ ಪತ್ರವನ್ನು ಸಲ್ಲಿಸಿದೆ. ಈ ನಿಯೋಗದ ಇತರ ಸದಸ್ಯರೆಂದರೆ ಪೊಲಿಟ್‌ಬ್ಯುರೊ ಸದಸ್ಯರಾದ ನೀಲೋತ್ಪಲ ಬಸು ಮತ್ತು ಕೇಂದ್ರ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಮುರಳೀಧರನ್. ಮನವಿ ಪತ್ರದ ಪೂರ್ಣ ವಿವರ ಇಲ್ಲಿದೆ.

"ತ್ರಿಪುರಾಕ್ಕೆ ಭಾರತ ಚುನಾವಣಾ ಆಯೋಗದ ಪೂರ್ಣತಂಡ ಭೇಟಿ ನೀಡಿದ ನಂತರ ತಕ್ಷಣವೇ ಸಿಪಿಐ(ಎಂ) ಸೇರಿದಂತೆ ವಿರೋಧ ಪಕ್ಷಗಳ ಮುಖಂಡರು ಮತ್ತು ಕಾರ್ಯಕರ್ತರ ಮೇಲೆ ತೀವ್ರ ಹಿಂಸಾಚಾರವನ್ನು ಹರಿಯಬಿಟ್ಟಿರುವುದು ಅತ್ಯಂತ ಕಳವಳಕಾರಿಯಾಗಿದೆ. ಹಿಂಸಾಚಾರ ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆ ನಡೆಯಲಿದೆ ಎಂದು ತ್ರಿಪುರಾದ ಜನತೆಗೆ ಇ.ಸಿ.ಐ.(ಭಾರತ ಚುನಾವಣಾ ಆಯೋಗ) ನಿಯೋಗ ನೀಡಿದ ಖಚಿತ ಭರವಸೆಯ ನಂತರ ಈ ಬೆಳವಣಿಗೆಗಳು ನಡೆಯುತ್ತಿರುವುದು ವಿಪರ್ಯಾಸ. ತ್ರಿಪುರಾದ ಮುಖ್ಯ ಚುನಾವಣಾ ಅಧಿಕಾರಿ (ಸಿಇಒ) ನಿರ್ದಿಷ್ಟವಾಗಿ ಚುನಾವಣಾ ಹಿಂಸಾಚಾರ-ಶೂನ್ಯ ಮಿಷನ್ಅನ್ನೇ ಪ್ರಾರಂಭಿಸಿದ್ದರು. ಆದಾಗ್ಯೂ, ಆಡಳಿತ, ವಿಶೇಷವಾಗಿ ಪೊಲೀಸ್ ಆಡಳಿತ ಹಿಂದಿನಂತೆಯೇ ಚುನಾವಣಾ ಆಯೋಗದ ಭರವಸೆಗಳ ಪರಿವೆಯೇ ಇಲ್ಲದಂತೆ ವರ್ತಿಸುತ್ತಿದೆ.

ನಿನ್ನೆ ಚುನಾವಣೆ ಘೋಷಣೆಯಾದ ನಂತರ ಹಲ್ಲೆಗಳು ಮತ್ತು ಹಿಂಸಾಚಾರದ ತೀವ್ರತೆ ಹೆಚ್ಚಾಗಿದೆ. ಹಿಂಸಾಚಾರದ ವಿಧಾನವು ಸ್ಪಷ್ಟವಾಗಿ ಭಯೋತ್ಪಾದನೆಯ ಮತ್ತು ಭಯದ ವಾತಾವರಣವನ್ನು ಸೃಷ್ಟಿಸುವ ಗುರಿಯನ್ನು ಹೊಂದಿದೆ, ಇದು ಮುಕ್ತ ಮತ್ತು ನ್ಯಾಯಸಮ್ಮತವಾದ ಮತದಾನವನ್ನು ನಡೆಸಲು ಇರಬೇಕಾದ ವಾತಾವರಣವನ್ನು ಸಂಪೂರ್ಣವಾಗಿ ಹಾಳುಮಾಡುತ್ತದೆ. ಇತ್ತೀಚಿನ ಹಿಂಸಾಚಾರದ ಘಟನೆಗಳ ಪಟ್ಟಿಯನ್ನು ನಾವು ಅನುಬಂಧದಲ್ಲಿ ಲಗತ್ತಿಸುತ್ತಿದ್ದೇವೆ.

ಕಳೆದ ಐದು ವರ್ಷಗಳಲ್ಲಿ ನಡೆಯುತ್ತಿರುವುದಕ್ಕೆ ವ್ಯತಿರಿಕ್ತವಾಗಿ, ರಾಜ್ಯ ವಿಧಾನಸಭೆಗೆ ಮುಕ್ತ ಮತ್ತು ನ್ಯಾಯಸಮ್ಮತ ಮತದಾನವನ್ನು ನಡೆಸಲು ತುರ್ತು ಕ್ರಮಗಳನ್ನು ಕೈಗೊಳ್ಳುವಂತೆ ನಾವು ನಿಮ್ಮನ್ನು ಆಗ್ರಹಿಸುತ್ತೇವೆ.

ಚುನಾವಣಾ ಆಯೋಗದ ಕಡೆಯಿಂದ ಒಂದು ದೃಢವಾದ ಮತ್ತು ನಿರ್ಣಾಯಕ ಕ್ರಮವನ್ನು ನಾವು ನಿರೀಕ್ಷಿಸುತ್ತೇವೆ." ಎಂದು ಮನವಿಯಲ್ಲಿ ಭಾರತ ಚುನಾವಣಾ ಆಯೋಗವನ್ನು ಒತ್ತಾಯಿಸಲಾಗಿದೆ.

ಡಬ್ಲ್ಯುಎಫ್‌ಐ ಮುಖ್ಯಸ್ಥರ ವಿರುದ್ಧ ಲೈಂಗಿಕ ಕಿರುಕುಳದ ಬಗ್ಗೆ ತನಿಖೆ ನಡೆಸಿ-ಐಒಎ ಗೆ ಪತ್ರ: ಹೋರಾಟಕ್ಕಿಳಿದ ಕುಸ್ತಿಪಟುಗಳ ಆಗ್ರಹ





ಭಾರತೀಯ ಕುಸ್ತಿ ಫೆಡರೇಶನ್ (ಡಬ್ಲ್ಯುಎಫ್‌ಐ) ಅಧ್ಯಕ್ಷ ಮತ್ತು ಬಿಜೆಪಿಯ ಸಂಸದ್ ಸದಸ್ಯ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರು ತಮ್ಮ ವಿರುದ್ಧದ ಇತ್ತೀಚಿನ ಲೈಂಗಿಕ ಕಿರುಕುಳದ ಆರೋಪಗಳಿಗೆ ಸಂಬಂಧಿಸಿದಂತೆ ತನಿಖೆಗೆ ತನಿಖಾ ಸಮಿತಿಯನ್ನು ರಚಿಸುವಂತೆ ಆಗ್ರಹಿಸಿದ್ದಾರೆ. ಈ ಕುರಿತು ಅವರು ಭಾರತೀಯ ಒಲಿಂಪಿಕ್ಸ್ ಅಸೋಸಿಯೇಷನ್‌ನ ಅಧ್ಯಕ್ಷೆ ಪಿ.ಟಿ. ಉಷಾ ಅವರಿಗೆ ಪತ್ರ ಬರೆದಿದ್ದಾರೆ. ಈ ಪತ್ರಕ್ಕೆ ದೇಶದ ಪ್ರತಿಷ್ಠಿತ ಕುಸ್ತಿಪಟುಗಳಾದ ಟೋಕಿಯೋ ಒಲಿಂಪಿಕ್ಸ್ ಪದಕ ವಿಜೇತರಾದ ರವಿ ದಹಿಯಾ ಮತ್ತು ಬಜರಂಗ್ ಪುನಿಯಾ, ರಿಯೋ ಗೇಮ್ಸ್‌ನ ಕಂಚಿನಪದಕ ವಿಜೇತೆ ಸಾಕ್ಷಿ ಮಲಿಕ್ ಮತ್ತು ವಿಶ್ವ ಚಾಂಪಿಯನ್ ಶಿಪ್ ಪದಕ ವಿಜೇತರಾದ ವಿನೇಶ್ ಫೋಗಟ್ ಮತ್ತು ದೀಪಕ್ ಪುನಿಯಾ ಸಹಿ ಹಾಕಿದ್ದಾರೆ.

ದಿಲ್ಲಿಯ ಜಂತರ್ ಮಂತರ್ ನಲ್ಲಿ ಪ್ರತಿಭಟನೆ ನಡೆಸುತ್ತಿರುವ ಕುಸ್ತಿಪಟುಗಳ ಪರವಾಗಿ ಬರೆದಿರುವ ಈ ಪತ್ರದಲ್ಲಿ ಡಬ್ಲ್ಯುಎಫ್‌ಐ ಅನ್ನು ವಿಸರ್ಜಿಸಬೇಕು ಮತ್ತು ಅದರ ಅಧ್ಯಕ್ಷರನ್ನು ವಜಾ ಮಾಡಬೇಕು ಎಂಬ ಪ್ರತಿಭಟನಾಕಾರರ ಆಗ್ರಹವನ್ನು ಪುನರುಚ್ಚರಿಸಿರುವುದಲ್ಲದೆ, ಡಬ್ಲ್ಯುಎಫ್‌ಐ ನ ವ್ಯವಹಾರಗಳನ್ನು ನೋಡಿಕೊಳ್ಳಲು ಕುಸ್ತಿಪಟು ಗಳೊಡನೆ ಸಮಾಲೋಚಿಸಿ ಒಂದು ಹೊಸ ಸಮಿತಿಯನ್ನು ನೇಮಿಸಬೇಕು ಎಂದು ಆಗ್ರಹಿಸಿದ್ದಾರೆ. ರಾಷ್ಟ್ರೀಯ ಶಿಬಿರದಲ್ಲಿರುವ ಕೋಚ್‌ಗಳು ಮತ್ತು ಕ್ರೀಡಾ ವಿಜ್ಞಾನ ಸಿಬ್ಬಂದಿ ಸಂಪೂರ್ಣ ಅಸಮರ್ಥರಾಗಿದ್ದಾರೆ, ಡಬ್ಲ್ಯುಎಫ್‌ಐ ನಲ್ಲಿ ಹಣಕಾಸು ದುರ್ಬಳಕೆ ನಡೆದಿದೆ ಎಂದೂ ಆರೋಪಿಸಲಾಗಿದೆ.

"ನಾವು ಕುಸ್ತಿಪಟುಗಳು ಒಗ್ಗೂಡಿ ಡಬ್ಲ್ಯುಎಫ್‌ಐ ಅಧ್ಯಕ್ಷರ ವಿರುದ್ಧ ಪ್ರತಿಭಟಿಸಲು ಸಾಕಷ್ಟು ಧೈರ್ಯವನ್ನು ತೆಗೆದುಕೊಂಡಿದ್ದೇವೆ, ನಮಗೆ ಜೀವ ಭಯವಿದೆ, ಅವರನ್ನು ವಜಾಗೊಳಿಸದಿದ್ದರೆ, ಧರಣಿಯಲ್ಲಿ ಭಾಗವಹಿಸಿರುವ ಎಲ್ಲಾ ಯುವಜನರ ವೃತ್ತಿಜೀವನ ಕೊನೆಗೊಳ್ಳುತ್ತದೆ" ಎಂದು ತಮ್ಮ ಪತ್ರದಲ್ಲಿ ತಿಳಿಸಿರುವ ಕ್ರೀಡಾಪಟುಗಳು ಡಬ್ಲ್ಯುಎಫ್‌ಐ ಅಧ್ಯಕ್ಷರನ್ನು ವಜಾ ಮಾಡುವವರೆಗೂ ನಾವು ಕದಲುವುದಿಲ್ಲ ಎಂದು ಬರೆದಿದ್ದಾರೆ.

ಬೀಜಿಂಗ್ ಒಲಿಂಪಿಕ್ಸ್ ಕಂಚಿನ ಪದಕ ವಿಜೇತ ಬಾಕ್ಸರ್ ಮತ್ತು ಈಗ ಕಾಂಗ್ರೆಸ್ ನಾಯಕ ವಿಜೇಂದರ್ ಸಿಂಗ್ ಕೂಡ ಜಂತರ್ ಮಂತರ್‌ನಲ್ಲಿರುವ ಪ್ರತಿಭಟನಾ ಸ್ಥಳಕ್ಕೆ ಆಗಮಿಸಿ ಕುಸ್ತಿಪಟುಗಳೊಂದಿಗೆ ಸೌಹಾರ್ದ ಪ್ರದರ್ಶಿಸಿದರು.

ಹೆಚ್ಚಿನ ಮಹಿಳಾ ಕುಸ್ತಿಪಟುಗಳು ಲೈಂಗಿಕ ಶೋಷಣೆಯ ತಮ್ಮ ಕಥೆಗಳೊಂದಿಗೆ ಮುಂದೆ ಬಂದಿದ್ದಾರೆ, ಅವರು ಡಬ್ಲ್ಯುಎಫ್‌ಐ ಅಧ್ಯಕ್ಷರ ವಿರುದ್ಧ ಅನೇಕ ಎಫ್‌ಐಆರ್ ಗಳನ್ನು ದಾಖಲಿಸಲಿದ್ದಾರೆ ಎಂದು ವಿನೇಶ್ ಫೋಗಟ್ ಹೇಳಿದ್ದಾರೆ.

ಸರ್ಕಾರಿ ಅಧಿಕಾರಿಗಳನ್ನು ಮತ್ತು ನಂತರ ಕ್ರೀಡಾ ಸಚಿವ ಅನುರಾಗ್ ಠಾಕೂರ್ ಅವರನ್ನು ಭೇಟಿಯಾದ ಕುಸ್ತಿಪಟುಗಳು ತಮ್ಮ ಪ್ರತಿಭಟನೆಯನ್ನು ಕೊನೆಗೊಳಿಸುವಂತೆ ಸರ್ಕಾರವು ವಿನಂತಿಸಿದಾಗ ಡಬ್ಲ್ಯುಎಫ್‌ಐ ಅನ್ನು ತಕ್ಷಣವೇ ವಿಸರ್ಜಿಸಬೇಕೆಂಬ ತಮ್ಮ ಬೇಡಿಕೆಯನ್ನು ಈಡೇರಿಸುವಂತೆ ಪಟ್ಟು ಹಿಡಿದರು.

ಆರೋಪಗಳಿಗೆ ಪ್ರತಿಕ್ರಿಯಿಸಲು ಸರ್ಕಾರವು ಡಬ್ಲ್ಯುಎಫ್‌ಐ ಅಧ್ಯಕ್ಷರಿಗೆ 72 ಗಂಟೆಗಳ ಕಾಲಾವಕಾಶ ನೀಡಿದೆ ಎಂದು ವರದಿಯಾಗಿದೆ. ಈ ನಡುವೆ ಡಬ್ಲ್ಯುಎಫ್‌ಐ ಅಧ್ಯಕ್ಷರು ಮಾಧ್ಯಮಗಳೊಂದಿಗೆ ಮಾತನಾಡುತ್ತಾ ತಮ್ಮ ಹುದ್ದೆಯನ್ನು ಬಿಡುವುದಿಲ್ಲ ಎಂದಿರುವುದಾಗಿಯೂ ವರದಿಯಾಗಿದೆ. ಬದಲಾಗಿ ಜಂತರ್ ಮಂತರ್‌ನಲ್ಲಿ ಪ್ರತಿಭಟನೆ ನಡೆಸುತ್ತಿರುವವರು "ಶಾಹೀನ್ ಬಾಗ್‌ನ ಧರಣಿ" ಮಾಡಿದಂತವರು, ತಮ್ಮ ವಿರುದ್ಧ ದೊಡ್ಡ ಶಕ್ತಿಗಳು ಸಂಚು ಹೂಡಿವೆ ಎಂದು ಆರೋಪಿಸಿದ್ದಾರೆ.

ಜನವಾದಿ ಮಹಿಳಾ ಸಂಘಟನೆಯ ಉಪಾಧ್ಯಕ್ಷೆ ಮತ್ತು ಸ್ವತಃ ರಾಷ್ಟ್ರೀಯ ಮಟ್ಟದ ಕ್ರೀಡಾಪಟುಗಳಾದ ಜಗ್ಮತಿ ಸಂಗ್ವಾನ್ ಮತ್ತು ಸಿಪಿಐ(ಎಂ) ಪೊಲಿಟ್‌ಬುರೊ ಸದಸ್ಯೆ ಬೃಂದಾಕಾರಟ್ ಜಂತರ್ ಮಂತರ್‌ಗೆ ಹೋಗಿ ಪ್ರತಿಭಟನಾಕಾರರಿಗೆ ತಮ್ಮ ಸೌಹಾರ್ದವನ್ನು ವ್ಯಕ್ತಪಡಿಸಿದ್ದಾರೆ. ನಮ್ಮ ಕ್ರೀಡಾಪಟುಗಳನ್ನು ಬೆಂಬಲಿಸುವ ಕರ್ತವ್ಯ ನೆರವೇರಿಸಬೇಕಾದ ಅಧಿಕಾರಿಗಳೇ ತಮ್ಮ ರಾಜಕೀಯ ಶಕ್ತಿಯ ಪ್ರಯೋಜನ ಪಡೆದು ಶ್ರಮಪಡುತ್ತಿರುವ ಮಹಿಳಾ ಕ್ರೀಡಾಳುಗಳು ತಮಗೆ ಆಗುತ್ತಿರುವ ಕಿರುಕುಳಗಳ ಬಗ್ಗೆ ಹೇಳಿದರೆ ತಕ್ಕ ಬೆಲೆ ತೆರಬೇಕಾದೀತು ಎಂಬ ಬೆದರಿಕೆಗೆ ಒಳಗಾಗುತ್ತಿದ್ದಾರೆ ಎಂಬುದು ಒಂದು ವಿಡಂಬನೆ ಮತ್ತು ಆಕ್ರೋಶಕಾರಿ ಕೂಡ ಎಂದು ಜಗ್ಮತಿ ಸಂಗ್ವಾನ್ ಹೇಳಿದ್ದಾರೆ.

ದೂರುಗಳನ್ನು ಪರಿಹರಿಸುವ ಬಗ್ಗೆ ಸರ್ಕಾರದಿಂದ ಭರವಸೆ ಸಿಕ್ಕ ಹಿನ್ನೆಲೆಯಲ್ಲಿ ಕುಸ್ತಿಪಟುಗಳು ತಮ್ಮ ಹೋರಾಟವನ್ನು ಶುಕ್ರವಾರ ತಡರಾತ್ರಿ ಅಂತ್ಯಗೊಳಿಸಿದ್ದಾರೆ.

ಡಬ್ಲ್ಯುಎಫ್‌ಐ ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರು ತಮ್ಮ ಸ್ಥಾನದಿಂದ ಕೆಳಗಿಳಿಯಲಿದ್ದಾರೆ ಎಂದು ಸರ್ಕಾರ ಹೋರಾಟಗಾರರಿಗೆ ಭರವಸೆ ನೀಡಿದ್ದಾರೆ.

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ 13 ನೇ ರಾಷ್ಟ್ರೀಯ ಸಮ್ಮೇಳನದಲ್ಲಿ ಆಯ್ಕೆಯಾದವರು.



ದೇವಿ
ಅಖಿಲ ಭಾರತ ಸಹ ಕಾರ್ಯದರ್ಶಿ



ಡಾ। ಮೀನಾಕ್ಷಿ ಬಾಳಿ
ಕೇಂದ್ರ ಸಮಿತಿ ಸದಸ್ಯರು



ಗೌರಮ್ಮ
ಕೇಂದ್ರ ಸಮಿತಿ ಸದಸ್ಯರು

ನ್ಯಾಯಾಂಗವನ್ನು ದುರ್ಬಲಗೊಳಿಸುತ್ತಿರುವ ಕೇಂದ್ರ

ಪ್ರಕಾಶ್ ಕಾರತ್

ಸುಪ್ರೀಂ ಕೋರ್ಟ್ ತೀರ್ಪನ್ನು ಮೀರಬೇಕಾದರೆ ನೇಮಕ ಪ್ರಕ್ರಿಯೆಯೊಂದನ್ನು ರೂಪಿಸಲು ಸಂಸತ್ತಿನಲ್ಲಿ ಸೂಕ್ತವಾದ ಕಾನೂನನ್ನು ಪಾಸ್ ಮಾಡುವುದೊಂದೇ ಉಳಿದಿರುವ ಸಾಂವಿಧಾನಿಕ ಮಾರ್ಗವಾಗಿದೆ. ಸರಕಾರ ಇದುವರೆಗೆ ಅದನ್ನು ಮಾಡಿಲ್ಲ. ಅದರ ಬದಲು, ಅಡ್ಡ ದಾರಿಗಳ ಮೂಲಕ ನ್ಯಾಯಾಂಗದ ಸ್ವಾತಂತ್ರ್ಯವನ್ನು ದುರ್ಬಲಗೊಳಿಸಲು ಸತತವಾಗಿ ಪ್ರಯತ್ನಿಸಲಾಗುತ್ತಿದೆ.

ಕೇಂದ್ರ ಕಾನೂನು ಸಚಿವ ಕಿರಣ್ ರಿಜಿಜು ಮತ್ತೆ ಸುದ್ದಿಯಲ್ಲಿದ್ದಾರೆ. ನ್ಯಾಯಮೂರ್ತಿಗಳ ನೇಮಕಕ್ಕಾಗಿ ಸುಪ್ರೀಂ ಕೋರ್ಟ್ ಮತ್ತು ಹೈ ಕೋರ್ಟ್‌ಗಳ ಕೊಲಿಜಿಯಂಗೆ ಶಿಫಾರಸುಗಳನ್ನು ಮಾಡಲು ರಚಿಸುವ ಹೊಸ ಸಮಿತಿಯಲ್ಲಿ ಸರಕಾರದ ಪ್ರತಿನಿಧಿಯೊಬ್ಬರೂ ಇರಬೇಕೆಂದು ಭಾರತದ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್‌ರಿಗೆ ಬರೆದ ಪತ್ರದಲ್ಲಿ ರಿಜಿಜು ಸಲಹೆ ಮಾಡಿದ್ದಾರೆ. ಇದು ಜಡ್ಜ್‌ಗಳ ನೇಮಕದಲ್ಲಿ ಕಾರ್ಯಾಂಗದ ಪಾತ್ರವನ್ನು ಪ್ರತಿಪಾದಿಸುವ ಯೋಜನೆಯತ್ತ ಮೋದಿ ಸರಕಾರದ ಇನ್ನೊಂದು ಹೆಜ್ಜೆಯಾಗಿದೆ. 1993ರ ಸೆಕೆಂಡ್ ಜಡ್ಜಸ್ ಪ್ರಕರಣದ ಮೂಲಕ ಸ್ಥಾಪನೆಯಾದ ನ್ಯಾಯಾಂಗದ ಪ್ರಾಮುಖ್ಯತೆಯನ್ನು ರದ್ದುಪಡಿಸುವುದು ಕೂಡ ಸರಕಾರದ ಉದ್ದೇಶವಾಗಿದೆ.

ಸದ್ಯಕ್ಕೆ ಶೋಧನಾ ಸಮಿತಿ ಅಥವಾ ಮೌಲ್ಯಮಾಪನ ಸಮಿತಿ ಇಲ್ಲ. ಕೊಲಿಜಿಯಂ ವ್ಯವಸ್ಥೆ ಮೂಲಕವೇ ನ್ಯಾಯಮೂರ್ತಿಗಳ ಹೆಸರನ್ನು ಆಯ್ಕೆ ಮಾಡುವ ಪ್ರಕ್ರಿಯೆ ಜಾರಿಯಲ್ಲಿದೆ.

2015ರಲ್ಲಿ ರಾಷ್ಟ್ರೀಯ ನ್ಯಾಯಾಂಗ ನೇಮಕಾತಿ ಆಯೋಗ ಕಾನೂನನ್ನು ಸುಪ್ರೀಂ ಕೋರ್ಟ್ ರದ್ದುಪಡಿಸಿದ ನಂತರ ಈ ತೀರ್ಪನ್ನು ಬೈಪಾಸ್ ಮಾಡಲು ಮೋದಿ ಸರಕಾರ ಮಾರ್ಗಗಳನ್ನು ಹುಡುಕುತ್ತಿದೆ. ಸುಪ್ರೀಂ ಕೋರ್ಟ್ ತೀರ್ಪನ್ನು ಮೀರಬೇಕಾದರೆ ನೇಮಕ ಪ್ರಕ್ರಿಯೆಯೊಂದನ್ನು ರೂಪಿಸಲು ಸಂಸತ್ತಿನಲ್ಲಿ ಸೂಕ್ತವಾದ ಕಾನೂನನ್ನು ಪಾಸ್ ಮಾಡುವುದೊಂದೇ ಉಳಿದಿರುವ ಸಾಂವಿಧಾನಿಕ ಮಾರ್ಗವಾಗಿದೆ. ಸರಕಾರ ಇದುವರೆಗೆ ಅದನ್ನು ಮಾಡಿಲ್ಲ. ಅದರ ಬದಲು, ಅಡ್ಡ ದಾರಿಗಳ ಮೂಲಕ ನ್ಯಾಯಾಂಗದ ಸ್ವಾತಂತ್ರ್ಯವನ್ನು ದುರ್ಬಲಗೊಳಿಸಲು ಸತತವಾಗಿ ಪ್ರಯತ್ನಿಸಲಾಗುತ್ತಿದೆ.

ಕಳೆದ ಕೆಲವು ತಿಂಗಳಲ್ಲಿ ಕಾನೂನು ಸಚಿವರ ಹೇಳಿಕೆಗಳ ಮಹಾಪೂರವೇ ಹರಿದು ಬಂದಿದೆ. ಜಡ್ಜ್‌ಗಳ ನೇಮಕಕ್ಕೆ ಇರುವ ಕೊಲಿಜಿಯಂ ಪದ್ಧತಿ ಸಂವಿಧಾನಕ್ಕೆ ಪರಕೀಯವಾದುದು ಎಂದು ಅವರು ಟೀಕಿಸುತ್ತಿದ್ದಾರೆ ಹಾಗೂ ನ್ಯಾಯಮೂರ್ತಿಗಳನ್ನು ನೇಮಿಸುವ ಹಕ್ಕು ಸರಕಾರಕ್ಕಿದೆ ಎಂಬುದು 'ಸಂವಿಧಾನದ ಆತ್ಮ ಆಗಿದೆ' ಎಂದು ಪ್ರತಿಪಾದಿಸುತ್ತಿದೆ.

ಹೊಸದಾಗಿ ಆಯ್ಕೆಯಾಗಿರುವ ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಅವರು ರಿಜಿಜು ಅವರಿಗೆ ಬೆಂಬಲ ನೀಡುತ್ತಿದ್ದಾರೆ. ಕೇಶವಾನಂದ ಭಾರತಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನಿಗದಿಪಡಿಸಿರುವ 'ಮೂಲ ಸ್ವರೂಪ ಸಿದ್ಧಾಂತ'ವನ್ನೇ ಪ್ರಶ್ನಿಸುವ ಮಟ್ಟಕ್ಕೆ ಧನಕರ್ ಹೋಗಿದ್ದಾರೆ. ಸಂಸತ್ತೇ ಸರ್ವೋನ್ನತವಾದುದು ಮತ್ತು ತಾನು ಬಯಸುವ ರೀತಿಯಲ್ಲಿ ಸಂವಿಧಾನವನ್ನು ತಿದ್ದುಪಡಿ ಮಾಡಬಹುದು ಎಂದು ಅವರು ಘೋಷಿಸಿದ್ದಾರೆ.

ಸಾಂವಿಧಾನಿಕ ಸ್ಥಾನದಲ್ಲಿರುವ ಧನಕರ್, ಬಹುಮತವಿರುವ ಸರಕಾರದ ಸರ್ವಾಧಿಕಾರಿ ಧೋರಣೆಯನ್ನು ಸ್ಪಷ್ಟವಾಗಿ ನಿರೂಪಿಸಿದ್ದಾರೆ– ನ್ಯಾಯಾಂಗವು ಕಾರ್ಯಾಂಗದಿಂದ



ಸ್ವತಂತ್ರವಾಗಿರಬಾರದು ಎನ್ನುವುದೇ ಆ ಧೋರಣೆಯಾಗಿದೆ.

ಸಿಜೆಐ ರಚಿಸುವ ಹಾಗೂ ಮೇಲುಸ್ತುವಾರಿ ನೋಡಿಕೊಳ್ಳುವ ಜಂಟಿ ಶೋಧನಾ ಸಮಿತಿಯಲ್ಲಿ ಸರಕಾರದ ಒಬ್ಬ ಪ್ರತಿನಿಧಿ ಇರಬೇಕೆಂದು ಹೇಳುವ ಒಂದೇ ರೀತಿಯ ಪತ್ರಗಳನ್ನು ಸರಕಾರ ಬರೆದಿದೆ ಎಂದು ಹೇಳಲಾಗಿದೆ.

ಹೈಕೋರ್ಟ್ ಮಟ್ಟದಲ್ಲಿ ಕೊಲಿಜಿಯಂಗಳಿಗೆ ಮಾರ್ಗದರ್ಶನ ನೀಡಲು ಹೈಕೋರ್ಟ್‌ಗಳಿಗೆ ಕೂಡ ಇದೇ ರೀತಿಯ ಸಮಿತಿಗಳಿರಬೇಕೆಂದು ಹೇಳಿರುವುದಷ್ಟೇ ರಿಜಿಜು ಪತ್ರದಲ್ಲಿರುವ ವ್ಯತ್ಯಾಸವಾಗಿದೆ. 2015ರ ಎನ್‌ಜೆಎಸಿ ಪ್ರಕರಣದ ನಿರ್ಧಾರದ ಅನ್ವಯ ಅಂತಿಮಗೊಳಿಸಬೇಕಾಗಿರುವ ಹೊಸ 'ಮೆಮರಾಂಡಂ ಆಫ್ ಪ್ರೊಸೀಜರ್'ನ ನೆಪದಲ್ಲಿ ಇದನ್ನೆಲ್ಲ ಮಾಡಲಾಗುತ್ತಿದೆ. ಹೈ ಕೋರ್ಟ್‌ಗಳ ಜಡ್ಜ್‌ಗಳು ಮತ್ತು ಮುಖ್ಯ ನ್ಯಾಯಮೂರ್ತಿಗಳ ನೇಮಕ ಕುರಿತ ಶಿಫಾರಸುಗಳನ್ನು ತಡೆಹಿಡಿಯುವ ಒತ್ತಡ ತಂತ್ರವನ್ನು ಸರಕಾರ ಅನುಸರಿಸುತ್ತಿದೆ. ಈ ವರ್ಷದ ಆರಂಭದಲ್ಲಿ ಹೈಕೋರ್ಟ್‌ಗಳ ಕೊಲಿಜಿಯಂಗಳು 104 ಶಿಫಾರಸುಗನ್ನು ಮಾಡಿವೆ. ಜಡ್ಜ್‌ಗಳ ನೇಮಕದಲ್ಲಿನ ಅಸಮರ್ಥನೀಯ ವಿಳಂಬಕ್ಕೆ ಸುಪ್ರೀಂ ಕೋರ್ಟ್ ಜನವರಿ 6 ರಂದು ಆಕ್ಷೇಪ ವ್ಯಕ್ತಪಡಿಸಿದೆ.

ಮುಂದಿನ ಮೂರು ದಿನದೊಳಗೆ 44 ಹೆಸರುಗಳನ್ನು ಜಡ್ಜ್‌ಗಳ ನೇಮಕಕ್ಕಾಗಿ ಸ್ಪಷ್ಟನೆ ನೀಡಲಾಗುವುದೆಂದು ಸುಪ್ರೀಂ ಕೋರ್ಟ್‌ಗೆ ಅಟಾರ್ನಿ ಜನರಲ್ ಆಶ್ವಾಸನೆ ನೀಡಿತ್ತು. ಆದರೆ ಇದುವರೆಗೆ ಒಂಬತ್ತು ಹೆಸರುಗಳಿಗೆ ಮಾತ್ರ ಅನುಮೋದನೆ ನೀಡಲಾಗಿದೆ. ಕೊಲಿಜಿಯಂ ವ್ಯವಸ್ಥೆಯು 'ನೆಲದ ಕಾನೂನು' ಆಗಿದ್ದು ಅದನ್ನು ಪಾಲಿಸಬೇಕು ಎಂದು ಜಸ್ಟಿಸ್ ಸಂಜಯ್ ಕಿಶನ್ ಕೌಲ್ ನೇತೃತ್ವದ ಪೀಠ ಪ್ರತಿಪಾದಿಸಿದೆ.

ಕಾರ್ಯಾಂಗದ ಅಡ್ಡಿಪಡಿಸುವ ತಂತ್ರಗಳಿಗೆ ಸುಪ್ರೀಂ ಕೋರ್ಟ್ ಇದುವರೆಗೆ ಸೊಪ್ಪು ಹಾಕಿಲ್ಲ. ಅಲ್ಲದೆ ಅಂಥ ಎಲ್ಲ ಪ್ರಯತ್ನಗಳಿಗೆ ಸಮರ್ಥ ಎದಿರೇಟು ನೀಡಿದೆ. ಕಿರಣ್ ರಿಜಿಜು ಅವರ ಇತ್ತೀಚಿನ ಪತ್ರಕ್ಕೆ ಕೂಡ ಅದೇ ಗತಿ ಆಗಬೇಕು.

ಅನು: ವಿಶ್ವ

ದಿಗ್ಬಂಧನ ಸವಾಲಾಗಿ ಸ್ವೀಕರಿಸಿದ ಕ್ಯೂಬಾ..........

ಪುಟ 5 ರಿಂದ

ಮತ್ತು ಯೋಚನೆಗಳಿವೆ. ಕ್ಯೂಬಾ ಮತ್ತು ಕೇರಳದ ಈ ಸಂಬಂಧದಿಂದ ಜಗತ್ತು ಕಲಿಯುವಂತದ್ದು ಬಹಳ ಇದೆ. ನಾವಿಬ್ಬರೂ ಸಮಾನ ಗುರಿ ಮತ್ತು ಉದ್ದೇಶ ಹೊಂದಿದವರಾಗಿದ್ದೇವೆ. ಕೇರಳ ಮತ್ತು ಕ್ಯೂಬಾದ ನಡುವಿನ ಈ ಒಗ್ಗಟ್ಟಿನ ಸಂಬಂಧದಿಂದಾಗಿ ಎರಡೂ ಕಡೆಯ ಪುರುಷರು ಮತ್ತು ಮಹಿಳೆಯರ ನಡುವೆ ಸಾಮಾಜಿಕ, ಆರ್ಥಿಕ ಸಮಾನತೆ ಬಂದಿದೆ. ಈ ಕಾರಣದಿಂದ ನಾವು ಸಾಲಿಡಾರಿಟಿಯನ್ನು ಹೆಚ್ಚು ಹೆಚ್ಚಾಗಿ ಪ್ರತಿಪಾದಿಸಬೇಕು.

ಕ್ಯೂಬಾದಲ್ಲಿ ತಾರತಮ್ಯಗಳಿಲ್ಲ:

ಕ್ಯೂಬಾದಲ್ಲಿ ಎಲ್ಲರಿಗೂ ಸಮಾನ ಹಕ್ಕುಗಳಿವೆ. ಕ್ಯೂಬಾದಲ್ಲಿ ಚರ್ಮದ ಬಣ್ಣದ ಬಗೆಗಿನ ತಾರತಮ್ಯಗಳು ಇಲ್ಲ. ಯಾವ ಚರ್ಮದ ಹೆಚ್ಚುಗಾರಿಕೆಗಳೂ ಕ್ಯೂಬಾದಲ್ಲಿ ಇಲ್ಲ. ಸಿದ್ಧಾಂತದ ಬಗ್ಗೆಯೂ ಮುಕ್ತವಾದ ಹಕ್ಕುಗಳು ಇವೆ. ಕ್ಯೂಬಾದಲ್ಲಿ ನಾಗರಿಕನೊಬ್ಬ ಆತನ ಹಕ್ಕುಗಳನ್ನು ಮುಕ್ತವಾಗಿ ಪಡೆಯುವ ವಾತಾವರಣ ಇದೆ. ಕೋವಿಡ್ ಕಾಲದಲ್ಲೂ ಇಂತಹ ಒಂದು ಒಗ್ಗಟ್ಟನ್ನು ಕ್ಯೂಬಾ ಹೊಂದಿತ್ತು. ಆ ಒಗ್ಗಟ್ಟಿಗೆ ನಾವು ಅಭಾರಿಯಾಗಿದ್ದೇವೆ. ಇಂತಹ ಒಗ್ಗಟ್ಟಿನ ಕಾರಣದಿಂದಲೇ ಕ್ಯೂಬಾವು ಅಪಾಯಕಾರಿ ಸಾಂಕ್ರಾಮಿಕ ಕೊರೋನಾ ಬಳಿಕವೂ ಜನರ ಜೀವನಮಟ್ಟವನ್ನು ಸುಧಾರಿಸಲು ಸಾಧ್ಯವಾಯಿತು ಎಂದರು.

ಮಾಜಿ ಸಚಿವ ಪಿ ಜಿ ಆರ್ ಸಿಂಧ್ಯಾರವರು ಹಾಕಿದ ದೊಡ್ಡ ಗುಲಾಬಿ ಹಾರ, ಮೈಸೂರು ಪೇಟಾ ಇಟ್ಟಾಗ ಅಲಿಡಾ ಅಕ್ಷರಶಃ ಮಕ್ಕಳಂತೆ ಸಂಭ್ರಮಿಸಿದರು.

ಕಾರ್ಯಕ್ರಮದಲ್ಲಿ ಚೆಗೆವಾರ ನೆನಪು ಮತ್ತು ವೈಚಾರಿಕ ಪ್ರಸ್ತುತತೆಯ ಬಗ್ಗೆ ಜಿ.ರಾಮಕೃಷ್ಣ ಅವರು ಮಾತನಾಡಿದರು. 1997 ರಲ್ಲಿ ಕ್ಯೂಬಾದ ಹವಾನಾದಲ್ಲಿ ಜರುಗಿದ ವಿಶ್ವ ಯುವಜನ–ವಿದ್ಯಾರ್ಥಿ ಉತ್ಸವದಲ್ಲಿ ಭಾರತದ ಪ್ರತಿನಿಧಿಗಳಾಗಿ ಭಾಗವಹಿಸಿದ್ದ ಡಾ.ಎಸ್.ವೈ.ಗುರುಶಾಂತ, ಪತ್ರಕರ್ತ, ಕವಿ ಜಿ.ಎನ್.ಮೋಹನ್ ಕಾರ್ಯಕ್ರಮ ನಿರೂಪಿಸಿದರು. ನ್ಯಾಯಮೂರ್ತಿ ಎಚ್. ಎನ್.ನಾಗಮೋಹನ ದಾಸ್, ಹಿರಿಯ ಚಿಂತಕಿ ಡಾ.ವಿಜಯಾ, ಮಾಜಿ ಸಚಿವ ಪಿ.ಜಿ.ಆರ್ ಸಿಂಧ್ಯಾ, ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಎಚ್. ಎಲ್.ಪುಷ್ಪಾ, ಹಿರಿಯ ಗಾಂಧಿವಾದಿ ಫಿಡೆಲ್ ಕ್ಯಾಸ್ಟ್ರೋ ರೊಂದಿಗೆ ಸಿಯರ್ರಾ ಮೇಸ್ತ್ರಾ ಪರ್ವತ ಹತ್ತಿದ ಇ.ಪಿ.ಮೆನನ್, ಜನ ಚಳುವಳಿಯ ನಾಯಕರಾದ ಯು.ಬಸವರಾಜ, ಡಾ.ಸಿದ್ದನಗೌಡ ಪಾಟೀಲ್, ಮಾವಳ್ಳಿ ಶಂಕರ್, ಡಾ.ಆರ್. ಮೋಹನ್‌ರಾಜ್, ಮೈತ್ರೇಯಿ ಕೃಷ್ಣನ್, ಜ್ಞಾನಮೂರ್ತಿ, ಮುಂತಾದವರು ವೇದಿಕೆಯಲ್ಲಿ ಇದ್ದರು. ಮಾತನಾಡಿದ ಬಹುತೇಕರು ಕ್ಯೂಬಾ ಮತ್ತು ಚೆಗೆವಾರ ಕುರಿತು ಆಸಕ್ತಿದಾಯಕ ವಿಷಯಗಳನ್ನು ಹೇಳಿದರು. ಗೌತಮಿ, ಬಾಲು ಜಂಬೆ, ಸಮಕಾಲೀನ ಸಾಮಾಜಿಕ ಸಾಂಸ್ಕೃತಿಕ ವೇದಿಕೆಯ ಡಾ.ಹೆಚ್.ಜಿ.ಜಯಲಕ್ಷ್ಮಿ ಅವರ ತಂಡ, ಸ್ಪಾನಿಷ್ ಅಧ್ಯಯನ ಸಂಸ್ಥೆಯ ವಿದ್ಯಾ, ಶಿವ– (ಸ್ಪಾನಿಷ್), ಡಾ.ಸುನೀತ್–ಅವಿಷ್ಕಾರ ತಂಡ, ಮೈಸೂರಿನ ಚಿಂತನ್ ವಿಕಾಸ್ ಅವರ ಹಾಡುಗಳು ಕಾರ್ಯಕ್ರಮದ ಮೆರುಗು ಹೆಚ್ಚಿಸಿದವು. ಡಾ.ಶ್ರೀಪಾದ ಭಟ್ಟರ ನಿರ್ದೇಶನದಲ್ಲಿ ಜಿ.ಎನ್. ಮೋಹನ್ ರವರ 'ನನ್ನೊಳಗಿನ ಹಾಡು ಕ್ಯೂಬಾ' ಕೃತಿಯ ಆಯ್ದ ಒಂದು ಅಧ್ಯಾಯದ 'ಚೆ ಎಂಬ ಪ್ರೀತಿ' ರಂಗಪ್ರಸ್ತುತಿ ನಡೆಯಿತು. ಅಲಿಡಾ ಅವರ ಭಾಷಣದ ಅನುವಾದವನ್ನು ಸ್ಪಾನಿಷ್ ಇನ್ಸಿಟ್ಯೂಟ್ ನ ರಣಜಿತ್ ಮಾಡಿದರು. ಕೆ.ಎಸ್. ವಿಮಲಾ ಸಹಾಯ ನೀಡಿದರು.

ಕವನ ವಾಚನ: ಪುಸ್ತಕ ಬಿಡುಗಡೆ: ಹಾಡುಗಳ ನಡುವಿನಲ್ಲಿ ನಡೆದ ಕವಿಗೋಷ್ಠಿಯಲ್ಲಿ ಕವಿ ಕೆ. ನೀಲಾ ಅವರ ಕವನವನ್ನು ರೇಣುಕಾ ಪಾವೂರು, ಗೋಪಾಲಕೃಷ್ಣ ಹರಳಹಳ್ಳಿ ವಾಚಿಸಿದರು. ಬಳ್ಳಾರಿಯ ಕವಿ ಪಿ.ಆರ್. ವೆಂಕಟೇಶ್ ಅವರ ಚೆ ಕುರಿತ ಕನ್ನಡ ಕವಿತೆಯನ್ನು ಇಂಗ್ಲೀಷ್ ಮತ್ತು ಸ್ಪಾನಿಷ್ ಭಾಷೆಗೆ ಅನುವಾದಿಸಿದ ಕವಿತೆ ಹಾಗೂ ಆ ವಸ್ತು ಆಧರಿಸಿದ ಕಲಾವಿದ ಸೃಜನ್ ಅವರ ಕಲಾಚಿತ್ರವಿದ್ದ ಫೋಟೋವನ್ನು ಸರ್ಪಿಸಲಾಯಿತು. ಚೆ ಹೇಳಿಕೆಯಿದ್ದ ಸೈನ್ ಬರ್ಡ್, ಸುಪ್ರಸಿದ್ಧ 'ವಜೀರ ಗ್ವಂತನ ಮೇರಾ' ಎನ್ನುವ ಸ್ಪ್ಯಾನಿಷ್ ಹಾಡಿನ ಕನ್ನಡ ಅನುವಾದ ಉಳ್ಳ ಗ್ರೀಟಿಂಗ್ ಕರ್ಡ್ ಮತ್ತು ನನ್ನೊಳಗಿನ ಹಾಡು 26ನೇ ಆವೃತ್ತಿ ಪುಸ್ತಕವನ್ನು (ಬಹುರೂಪಿ ಪ್ರಕಾಶನ) ಅಲಿಡಾ, ಎಸ್ತೆಫಾನಿಯಾರವರು ಬಿಡುಗಡೆಗೊಳಿಸಿದರು. ಭಾರತಕ್ಕೆ ಚೆ ಚಿಂತನೆಗಳ ಪ್ರಸ್ತುತತೆಯನ್ನು ಸಾರುವ ವರ್ಣ ಪೋಸ್ಟರ್‌ಗಳನ್ನು 'ಬೀ ಕ್ರಿಯೇಟ್– ಬೆಂಗಳೂರು' ಸಂಸ್ಥೆಯ ಕಲಾವಿದ ವಿಷ್ಣು ಮತ್ತು ದಿಲಾವರ್ ರಾಮದುರ್ಗ ರವರು ರಚಿಸಿದ ಪೋಸ್ಟರ್‌ಗಳ ಮತ್ತು ಚಿತ್ರಗಳ ಪ್ರದರ್ಶನ ನಡೆಯಿತು. ಚೆ ಮತ್ತು ಕ್ಯೂಬಾ ಕುರಿತಾದ ಪುಸ್ತಕಗಳು, ಟೀ ಕಪ್, ಮುಂತಾದ ವಸ್ತುಗಳ ಪ್ರದರ್ಶನ ಮತ್ತು ಮಾರಾಟ ನಡೆಯಿತು.



ಸಿಐಟಿಯು 17 ಅಖಿಲ ಭಾರತ ಸಮ್ಮೇಳನ

‘ಪ್ರತಿರೋಧ ಮತ್ತು ಉಲ್ಲಂಘನೆ’

ಹೋರಾಟದ ಹೊಸ ಸ್ವರೂಪಕ್ಕೆ ಕಾರ್ಮಿಕ ವರ್ಗದ ನಿರ್ಧಾರ



ಸಮ್ಮೇಳವನ್ನು ಉದ್ಘಾಟಿಸಿದ ಪ್ರಧಾನ ಕಾರ್ಯದರ್ಶಿ ತಪನ್‌ಸೇನ್

‘ಜನಪರ ನೀತಿಗಳಿಗಾಗಿ ಐಕ್ಯತೆ ಮತ್ತು ಹೋರಾಟ’ ಎನ್ನುವ ಮಹತ್ತರ ಘೋಷಣೆಯೊಂದಿಗೆ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ (ಸಿಐಟಿಯು)ನ 17ನೇ ಅಖಿಲ ಭಾರತ ಸಮ್ಮೇಳನ ಬೆಂಗಳೂರಿನ ಅರಮನೆ ಮೈದಾನದಲ್ಲಿರುವ ಗಾಯಿತ್ರಿ ವಿಹಾರದಲ್ಲಿ ‘ಶ್ಯಾಮಲ್ ಚಕ್ರವರ್ತಿ ನಗರ’ದ ‘ರಂಜನ ನಿರುಲಾ ಮತ್ತು ರಘುನಾಥ್ ಸಿಂಗ್ ವೇದಿಕೆ’ಯಲ್ಲಿ 2023ರ ಜನವರಿ 18ರಿಂದ 22ರ ವರೆಗೆ ನಡೆಯಿತು. 18ರಂದು ಬೆಳಿಗ್ಗೆ ಧ್ವಜಾರೋಹಣದೊಂದಿಗೆ ಸಮ್ಮೇಳನ ವಿದ್ಯುಕ್ತವಾಗಿ ಆರಂಭಗೊಂಡಿತು. ಅಖಿಲ ಭಾರತ ಅಧ್ಯಕ್ಷರಾದ ಕಾಂ.ಕೆ. ಹೇಮಲತಾ ಅವರು ಧ್ವಜಾರೋಹಣ ನೆರವೇರಿಸಿದರು. ನಂತರ ಕೆ.ಜಿ.ಎಫ್. ನಿಂದ ಬಂದ ’ಹುತಾತ್ಮರ ಜ್ಯೋತಿ’ಯನ್ನು ಕೆಂಪು ಸ್ವಯಂ ಸೇವಕರು ಕ್ರಾಂತಿಕಾರಿ ಘೋಷಣೆಗಳ ಮೂಲಕ ಬರ ಮಾಡಿಕೊಂಡು ಗೌರವ ಸಲ್ಲಿಸಿದರು. ಈ ಜ್ಯೋತಿಯನ್ನು ಕಾಂ. ಕೆ. ಹೇಮಲತಾ ರವರಿಗೆ ನೀಡಲಾಯಿತು.

ಜನರ ಬದುಕಿನ ಮೇಲೆ ಕ್ರಿಮಿನಲ್ ದಾಳಿ ನಡೆಸುತ್ತಿರುವ ಸರಕಾರವನ್ನು ಕಿತ್ತೆಸೆಯಬೇಕು: ತಪನ್ ಸೇನ್

ಸಿಐಟಿಯು 17ನೇ ಅಖಿಲ ಭಾರತ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಸಿಐಟಿಯು ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಕಾಂ. ತಪನ್ ಸೇನ್ ಅವರು, ದೇಶದ ಆಳುವ ಸರಕಾರಗಳು ನವ ಉದಾರವಾದಿ ನೀತಿಗಳ ಏಜೆಂಟರಂತೆ, ಕಾರ್ಪೋರೇಟ್ ಕಂಪನಿಗಳ ಪರವಾಗಿ ಕೆಲಸ ಮಾಡುತ್ತಿರುವುದರಿಂದ ಜನಗಳು ದಿವಾಳಿ ಆಗುತ್ತಿದ್ದಾರೆ. ದೇಶದ ಮುಖ್ಯ ವಾಹಿನಿ ಮಾಧ್ಯಮಗಳ ದೊಡ್ಡ ವಿಭಾಗವೂ ಇದಕ್ಕೆ ಬೆಂಬಲ ನೀಡುತ್ತಿದೆ. ಇಂತಹ ವಿಷಕಾರಿ ನೀತಿಗಳನ್ನು ಜಾರಿಗೊಳಿಸುವ ಮೂಲಕ ಸರ್ಕಾರ ಸರ್ವಾಧಿಕಾರಿ ರೀತಿಯಲ್ಲಿ ನಡೆದುಕೊಳ್ಳುತ್ತಿದೆ. ಜನರ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಸರಕಾರದ ಈ ನೀತಿಗಳು ಕಿತ್ತುಕೊಳ್ಳುತ್ತಿವೆ ಎಂದು ಆರೋಪಿಸಿದರು.

ಆಳುವ ಸರ್ಕಾರವು ಜನರ ಒಗ್ಗಟ್ಟನ್ನು ಮುರಿಯುವ ವಿಭಜನಕಾರಿ ನೀತಿಗಳನ್ನು ಹೇರುತ್ತಾ ಸಮಾಜದ ಸಾಮಾಜಿಕ ಸಾಮರಸ್ಯವನ್ನು ಹಾಳುಗೆಡಹುತ್ತಿದೆ. ದೇಶದ ಹಿತಾಸಕ್ತಿಗೆ ಮತ್ತು ದುಡಿಯುವ ವರ್ಗದ ಹಿತಗಳಿಗೆ ವಿರುದ್ಧವಾಗಿ ಇಂತಹ ಕ್ರಿಮಿನಲ್ ದಾಳಿಗಳನ್ನು ನಡೆಸುತ್ತಿರುವ ಸರಕಾರವನ್ನು ರೈತ–ಕಾರ್ಮಿಕ ಚಳುವಳಿಯ ಸಖ್ಯತೆಯೊಂದಿಗೆ ಅಧಿಕಾರದಿಂದ ಕಿತ್ತೆಸೆಯಲಾಗುವುದು ಎಂದು ತಿಳಿಸಿದ ಕಾಂ. ತಪನ್ ಸೇನ್, ಈ ನಿಟ್ಟಿನಲ್ಲಿ ಕಾರ್ಮಿಕ ಹೋರಾಟಗಳನ್ನು ಬಲಪಡಿಸುವ ಕುರಿತು ಸಿಐಟಿಯು ಸಂಘಟನೆಯ 17 ನೇ ಅಖಿಲ ಭಾರತ ಸಮ್ಮೇಳನವು ಗಂಭೀರವಾಗಿ ಚರ್ಚಿಸಲಿದೆ ಎಂದು ಹೇಳಿದರು.


ಕಾಂ. ಕೆ. ಹೇಮಲತಾ

ದೇಶದ ಹತ್ತು ಕೇಂದ್ರ ಕಾರ್ಮಿಕ ಸಂಘಟನೆಗಳ ಒಕ್ಕೂಟವು ಒಂದುಗೂಡಿ ಕಾರ್ಮಿಕರ ಹಕ್ಕುಗಳು, ರೈತರ ಹಕ್ಕುಗಳು ಮಾತ್ರವಲ್ಲ. ದೇಶದ ರಕ್ಷಣೆಗಾಗಿ ದೇಶವಿರೋಧಿ ಕುತಂತ್ರಗಳ ವಿರುದ್ಧ ಹೋರಾಟ ರೂಪಿಸಲಿವೆ. ಇತ್ತೀಚಿನ ಎರಡು ದಿನಗಳ ದೇಶವ್ಯಾಪಿ ಯಶಸ್ವಿ ಮುಷ್ಕರ ಈ ಹೋರಾಟದ ಭಾಗವಾಗಿದೆ. ನಾಲ್ಕು ವರ್ಷಗಳ ಹೋರಾಟದ ಅನುಭವವು, ವಿದ್ಯುತ್, ಕಲ್ಲಿದ್ದಲು ಮುಂತಾದ ಕ್ಷೇತ್ರದಲ್ಲಿ ಸರಕಾರದ ಧೋರಣೆಗಳನ್ನು ಹಿಮ್ಮೆಟ್ಟಿಸಲು ಸಾಧ್ಯ ಹಾಗೂ ಯಾವುದೇ ರಂಗದಲ್ಲೇ ಇರಲಿ ಇಂತಹ ಜನವಿರೋಧಿ ನೀತಿಗಳನ್ನು ಹಿಮ್ಮೆಟ್ಟಿಸಲು ಸಾಧ್ಯ ಎಂದು







ಸಮಾಜ ಬದಲಾವಣೆಗೆ ದುಡಿಯುವ ವರ್ಗ ತಮ್ಮ ಶಕ್ತಿಯನ್ನು ವ್ಯಯಿಸಬೇಕು: ಡಾ. ಅಲೆಡಾ ಗೆವಾರ



'ಸಮಾಜವನ್ನು ಬದಲಿಸಲು ದುಡಿಯುವ ವರ್ಗದ ಜನರು ತಮ್ಮ ಶಕ್ತಿಯನ್ನೆಲ್ಲಾ ವ್ಯಯಿಸಬೇಕಾಗಿದೆ. ಕಾರ್ಮಿಕ ವರ್ಗವು ಈ ಸಮಯದಲ್ಲಿ ಐಕ್ಯ ಹೋರಾಟವನ್ನು ರೂಪಿಸುವುದು ಅಗತ್ಯವಾಗಿದೆ' ಎಂದು ಡಾ. ಅಲಿಡಾ ಗೆವಾರ ಅವರು ಕರೆ ನೀಡಿದರು.

ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್(ಸಿಐಟಿಯು) 17ನೇ ಅಖಿಲ ಭಾರತ ಸಮ್ಮೇಳನದ 2ನೇ ದಿನವಾದ 2023 ಜನವರಿ 19 ರಂದು ಪ್ರತಿನಿಧಿಗಳನ್ನು ಉದ್ದೇಶಿಸಿ ಚೆ ಗೆವಾರ ಅವರ ಮಗಳು ವೈದ್ಯಕೀಯ ತಜ್ಞೆ ಮತ್ತು ಮಾನವ ಹಕ್ಕುಗಳ ಹೋರಾಟಗಾರ್ತಿ ಡಾ. ಅಲಿಡಾ ಗೆವಾರ ಸ್ಪೂರ್ತಿದಾಯಕ ಮಾತುಗಳನ್ನಾಡಿ ಶುಭ ಹಾರೈಸಿದರು.

ಮುಂದುವರೆದು ಮಾತನಾಡಿದ ಅವರು, 'ಸಾಮಾನ್ಯ ಜನರಿಗೆ ನಮ್ಮ ಮೌಲ್ಯಗಳನ್ನು ತಲುಪಿಸುವುದು ಅತ್ಯಂತ ಅಗತ್ಯವಾಗಿದೆ. ಯಾವುದೇ ಬಣ್ಣದವರು, ಜಾತಿಯವರು ಅಥವಾ ಸೈದ್ಧಾಂತಿಕ ಭಿನ್ನತೆಗಳು ಇವೆಯಾದರೂ ಅವುಗಳ ನಡುವೆಯೂ ಕಾರ್ಮಿಕ ವರ್ಗ ತನ್ನ ವಿಮೋಚನೆಗಾಗಿ ಐಕ್ಯತೆಯನ್ನು ಪ್ರದರ್ಶಿಸಬೇಕು' ಎಂದು ಕರೆ ನೀಡಿದರು.

ಕ್ಯೂಬಾದಂತಹ ಚಿಕ್ಕ ರಾಷ್ಟ್ರವು ಜನರನ್ನು ಒಗ್ಗೂಡಿಸಿ ಅಮೆರಿಕಾದಂತಹ ಜಗತ್ತಿನ ದೊಡ್ಡ ಶಕ್ತಿಗಳಿಗೆ ಎದುರಾಗಿ ಸಮಾಜವಾದದ ಕ್ರಾಂತಿಯ ಸ್ವರೂಪವನ್ನು ತೋರಿಸಿ ಕೊಟ್ಟಿದೆ. ಇಂದು ಕ್ಯೂಬಾ ಕೊರೊನಾ ಸಂಕಷ್ಟದಿಂದಾಗಿ ಕಳೆದ ಎರಡು ವರ್ಷಗಳಿಂದ ದೊಡ್ಡ ಪ್ರಮಾಣದಲ್ಲಿ ಅರ್ಥಿಕ ಸಂಕಷ್ಟವನ್ನು ಎದುರಿಸುತ್ತಿದೆ. ಇದರಿಂದಾಗಿ ಸಂಪನ್ಮೂಲಗಳ ಕೊರತೆಯನ್ನು ಎದುರಿಸುತ್ತಿದೆ. ಅಲ್ಲಿನ ಸರ್ಕಾರ ಇಡೀ ಶ್ರಮವನ್ನು ವಹಿಸಿ ಕೆಲಸ ಮಾಡುತ್ತಿದೆ.

ಅಮೆರಿಕಾವು ಕ್ಯೂಬಾ ದೇಶದ ಮೇಲೆ ಹೇರಿದ ನಿರ್ಬಂಧಗಳಿಂದಾಗಿ ಜನರು ಬಹಳ ಸಂಕಷ್ಟಕ್ಕೆ ಸಿಲುಕಿದ್ದಾರೆ. ಆರ್ಥಿಕ ಸಮಸ್ಯೆಗಳಿಂದಾಗಿ ಕ್ಯೂಬಾದ ಬಹಳಷ್ಟು ಜನರು ದೇಶವನ್ನು ತೊರೆಯುವ ಪರಿಸ್ಥಿತಿ ಎದುರಾಯಿತು. ಇದು ನಮಗೆ ಬಹಳಷ್ಟು ಸಂಕಷ್ಟವನ್ನು ಉಂಟು ಮಾಡಿದೆ.

ಆದರೆ ಇದು ವಾಸ್ತವವಾಗಿದ್ದು, ಇದನ್ನು ಎದುರಿಸುವಲ್ಲಿ ನಮ್ಮ ಮೇಲೆ ಹೆಚ್ಚಿನ ಜವಾಬ್ದಾರಿ ಇದೆ. ಈ ವೇದಿಕೆಯಲ್ಲಿ ನಿಂತು ನಾನು ನಿಮ್ಮೆಲರ ಸೌಹಾರ್ದತೆಯನ್ನು ಬಯಸುತ್ತೇನೆ. ನನ್ನ ದೇಶಕ್ಕೆ ಈಗ ಇದರ ಅಗತ್ಯವಿದೆ.

ಫಿಡಲ್ ಕ್ಯಾಸ್ಟ್ರೋ ಅವರು ಹೇಳಿದಂತೆ ಜನರ ಒಗ್ಗಟ್ಟಿನ ಎದುರು ಅನ್ಯಾಯ ನಡುಗಿ ಹೋಗುತ್ತದೆ. ಅದೇ ರೀತಿ ಚೆ ಗೆವಾರ ಅವರು, 'ಗೆಲ್ಲುವವರೆಗೂ ಹೋರಾಡುತ್ತಲೇ ಇರೋಣ' ಎಂದು ಹೇಳಿದ ಮಾತನ್ನು ನೆನಪಿಸಿಕೊಂಡು ತಮ್ಮ ಭಾಷಣವನ್ನು ಮುಗಿಸಿದರು.



ಕೆ. ಸುಬ್ಬರಾವ್

ತೋರಿಸಿಕೊಟ್ಟಿದೆ. ನವ ಉದಾರೀಕರಣ ನೀತಿಗಳ ಸವಾಲು ಕೇವಲ ಕಾರ್ಮಿಕ ವರ್ಗಕ್ಕೆ ಮಾತ್ರ ಸೀಮಿತವಲ್ಲ. ಇದು ಇಡೀ ಮನುಕುಲದ ಮುಂದಿನ ಸವಾಲು. ಪ್ರಜಾಸತ್ತಾತ್ಮಕ ಸಮಾಜಕ್ಕೆ ಮಾರಕ. ಕೆಲವು ಸ್ವದೇಶಿ ಮತ್ತು ವಿದೇಶಿ ಕಾರ್ಪೊರೇಟ್ ಹಿತರಕ್ಷಣೆಗಾಗಿ, ವಿಶಾಲ ಜನ ಸಮುದಾಯಗಳ ಜನರ ಹಿತ ಬಲಿ ಕೊಡಲಾಗುತ್ತಿದೆ. ದೇಶದ ಕಾರ್ಮಿಕ ಚಳುವಳಿ ದೇಶವನ್ನು ಮಾರಲು ಅವಕಾಶ ನೀಡದು ಎಂದು ಕಾಂ. ತಪನ್ ಸೇನ್ ಹೇಳಿದರು.

ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಸಿ.ಐ.ಟಿ.ಯು. ಅಖಿಲ ಭಾರತ ಅಧ್ಯಕ್ಷೆ ಡಾ. ಕೆ. ಹೇಮಲತಾ ಅವರು ಭಾರತದಲ್ಲಿ ಹೆಚ್ಚುತ್ತಿರುವ ಅಸಮಾನತೆ, ಸಂಪತ್ತಿನ ಕೇಂದ್ರೀಕರಣ, ಕಾರ್ಮಿಕ ವಿರೋಧಿ ನೀತಿಗಳ ವಿರುದ್ಧ ಕಾರ್ಮಿಕ ವರ್ಗದ ಐಕ್ಯ ಹೋರಾಟವನ್ನು ಬಲಗೊಳಿಸಲಾಗುವುದು ಎಂದು ಹೇಳಿದರು.

ಸಿಐಟಿಯು 17ನೇ ಅಖಿಲ ಭಾರತ ಸಮ್ಮೇಳನದ ಸ್ವಾಗತ ಭಾಷಣವನ್ನು ಕೆ. ಸುಬ್ಬರಾವ್ ಅವರು ಮಾಡಿಕೊಟ್ಟರು. ಕಾರ್ಯಕ್ರಮದ ಭಾಗವಾಗಿ ಅಖಿಲ ಭಾರತ ವಿಮಾ ನೌಕರರ ಸಂಘಟನೆಯ ಸಂಗಾತಿಗಳು ಕ್ರಾಂತಿಕಾರಿ ಗೀತೆಗಳನ್ನು ಪ್ರಸ್ತುತಪಡಿಸಿದರು. ಈ ವೇಳೆ ಎಚ್ ಜನಾರ್ದನ್(ಜನ್ನಿ) ಹಾಗೂ ಚಿಂತನ್ ವಿಕಾಸ್ ಸಾಥ್ ನೀಡಿದರು.


ಸ್ವಾಗತ ಗೀತೆ, ವಿಮಾ ನೌಕರರಿಂದ


ಗೌರವ ವಂದನೆ ನೀಡುತ್ತಿರುವ ಕೆಂಪು ಸ್ವಯಂ ಸೇವಕರು

ಕೇಂದ್ರ ಕಾರ್ಮಿಕ ಸಂಘಟನೆಗಳ ನಾಯಕರ ಶುಭ ಹಾರೈಕೆ

ಐಕ್ಯ ಹೋರಾಟ ಬಲಗೊಳಿಸುವ ಸಂಕಲ್ಪ

ಸಮ್ಮೇಳನದ ಮೊದಲ ದಿನದ ಉದ್ಘಾಟನಾ ಕಾರ್ಯಕ್ರಮದಲ್ಲಿ ದೇಶದ ವಿವಿಧ ಕೇಂದ್ರ ಕಾರ್ಮಿಕ ಸಂಘಟನೆಗಳ ಮುಖಂಡರು ಮಾತನಾಡಿ ಶುಭಾಷಯ ಕೋರಿದರು.

ಸಿಐಟಿಯು ಅಖಿಲ ಭಾರತ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡಿದ ಐ.ಎನ್.ಟಿ.ಯು.ಸಿ. ಮುಖಂಡರಾದ ಚಂದ್ರಶೇಖರನ್, ಕೇಂದ್ರ ಸರ್ಕಾರ ದೇಶದ ಅರ್ಥ ವ್ಯವಸ್ಥೆಗೆ ತುಂಬಾ ಹಾನಿಯುಂಟು ಮಾಡಿದೆ. ಪ್ರತಿವೊಂದು ಸಮುದಾಯವನ್ನು ವಿಭಜಿಸುತ್ತಿದೆ. ಈ ಹಿಂದಿನ ಸರ್ಕಾರಗಳು ಮಾಡಿದ ಯೋಜನೆಗಳನ್ನು ಸ್ಥಗಿತಗೊಳಿಸಿದೆ ಎಂದು ಹೇಳಿದರು. ಸಾರ್ವಜನಿಕ ಉದ್ದಿಮೆಗಳನ್ನು ಖಾಸಗೀಕರಣಗೊಳಿಸುತ್ತಿದೆ. ಜಾಗತೀಕರಣ ಮತ್ತು ಖಾಸಗೀಕರಣ ನೀತಿಗಳಿಂದ ಕಾರ್ಮಿಕ ವರ್ಗ ಇಂದು ಅತ್ಯಂತ ಹೀನಾಯ ಸ್ಥಿತಿಯಲ್ಲಿದೆ. ದೇಶವನ್ನು ಕೋಮುವಾದ ಆವರಿಸಿದೆ. ಕಾರ್ಮಿಕ ಹಕ್ಕುಗಳ ರಕ್ಷಣೆಗಾಗಿ ಇದ್ದ 26 ಕಾನೂನುಗಳನ್ನು ಬದಲಾವಣೆ ಮಾಡಿ ನಾಲ್ಕು ನೀತಿ ಸಂಹಿತೆಗಳನ್ನಾಗಿ ಮಾಡಲಾಗಿದೆ. ಇದರಿಂದ ಕಾರ್ಮಿಕರು ತಮ್ಮ ಹಕ್ಕುಗಳನ್ನು ಕಳೆದುಕೊಂಡಿದ್ದಾರೆ. ದೇಶವಿರೋಧಿ ಕಾರ್ಮಿಕ ವಿರೋಧಿ ಕಾನೂನುಗಳನ್ನು ಕೇಂದ್ರ ಸರ್ಕಾರ ಜಾರಿಗೆ ತಂದಿದೆ ಎಂದು ಅವರು ಟೀಕಿಸಿದರು.

ಎಲ್ಲಾ ಸಾರ್ವಜನಿಕ ಉದ್ದಿಮೆಗಳನ್ನು ಅಂದರೆ, ವಿಮೆ, ರೈಲ್ವೇ, ರಕ್ಷಣಾ ಇಲಾಖೆ, ಕಲ್ಲಿದ್ದಲು, ಉಕ್ಕು, ಸೇರಿದಂತೆ ಇತರೆ ಕ್ಷೇತ್ರಗಳನ್ನು ಖಾಸಗೀಕರಣ ಗೊಳಿಸುತ್ತಿರುವುದರಿಂದ ಕಾರ್ಮಿಕರು ಆತಂಕಕ್ಕೆ ಸಿಲುಕಿದ್ದಾರೆ. ಬಿಜೆಪಿಯದೇ ಕಾರ್ಮಿಕರ ಸಂಘಟನೆಯಾದ ಬಿಎಂಎಸ್ ಈ ನೀತಿಗಳನ್ನು ವಿರೋಧಿಸುತ್ತಿವೆ. ಎಂದ ಅವರು, ಕೇಂದ್ರ ಸರ್ಕಾರ ಕೋಮು ಅಜೆಂಡಾವನ್ನು ಜಾರಿಗೊಳಿಸುತ್ತಿದ್ದು, ಇಡೀ ದೇಶವನ್ನು ಇಂದು ಕೋಮು ದಳ್ಳುರಿಯಲ್ಲಿ ತಳ್ಳಿದೆ. ಇದರಿಂದ ಅಮರ್ತ್ಯ ಸೇನ್, ರಘುರಾಮ್ ರಾಜನ್ ಮುಂತಾದ ಆರ್ಥಿಕ ತಜ್ಞರ ಸಲಹೆಗಳನ್ನು ಲೆಕ್ಕಿಸುತ್ತಿಲ್ಲ. ತಮ್ಮದೇ ಆದ ಆರ್ಥಿಕ ನೀತಿಗಳನ್ನು ಜಾರಿಗೊಳಿಸುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಕಾರ್ಮಿಕರು ತಮ್ಮ ಹಕ್ಕುಗಳ ರಕ್ಷಣೆಗೆ ಒಗ್ಗೂಡಿ ಹೋರಾಟಗಳನ್ನು ನಡೆಸಬೇಕಾಗಿದೆ ಎಂದರು.

ಎಐಟಿಯುಸಿಯ ಅಮರ್ಜಿತ್ ಕೌರ್ ಮಾತನಾಡಿ, ದೇಶದಲ್ಲಿ ಇಂದಿನ ಪರಿಸ್ಥಿತಿ ತುಂಬಾ ವಿಷಮವಾಗಿದೆ. ಮೋದಿ ಆಡಳಿತ ಎಲ್ಲಾ ವರ್ಗದ ಜನರ ಸ್ವಾತಂತ್ರ್ಯಕ್ಕೆ ಆತಂಕ ತಂದಿದೆ. ದೇಶದ ಐಕ್ಯತೆ ಮತ್ತು ಸಮಗ್ರತೆ ಆತಂಕದಲ್ಲಿದೆ ಎಂದು ಟೀಕಿಸಿದರು.

ಸಾರ್ವಜನಿಕ ವಲಯ ಸಂಸ್ಥೆಗಳನ್ನು ಖಾಸಗೀಕರಣ ಮಾಡಲಾಗುತ್ತಿದೆ. ದಿನಗೂಲಿ ನೌಕರರು ಉದ್ಯೋಗ ಸಿಗದೆ ಆತ್ಮಹತ್ಯೆಯ ಹಾದಿ ಹಿಡಿದಿದ್ದಾರೆ. ನಿರುದ್ಯೋಗದ ಪ್ರಮಾಣ ದಿನೇದಿನೇ ಏರಿಕೆ ಕಂಡಿದೆ. ಹಾಗಿದ್ದರೂ ಕೇಂದ್ರ ಸರ್ಕಾರ ಖಾಸಗೀಕರಣದ ಹಾದಿಯನ್ನು ಕೈಬಿಟ್ಟಿಲ್ಲ ಎಂದು ಕೇಂದ್ರ ಸರ್ಕಾರದ ನೀತಿಗಳನ್ನು ಟೀಕಿಸಿದ ಕೌರ್ ಅವರು, ಒಂದು ಕಡೆ ಬಡವರ ಸಂಖ್ಯೆ ಏರಿಕೆ ಕಾಣುತ್ತಿದ್ದರೆ, ಮತ್ತೊಂದು ಕಡೆ ಬಿಲಿಯನರ್ ಗಳ ಸಂಖ್ಯೆಯೂ ಏರಿಕೆಯಾಗುತ್ತಿದೆ. ದೇಶದ ಶೇ. 50ರಷ್ಟು ಆದಾಯ ಕೇವಲ ಶೇ. 3ರಷ್ಟು ಶ್ರೀಮಂತರ ಕೈಯಲ್ಲಿದೆ. ಬಾಲಕಾರ್ಮಿಕರ ಸಂಖ್ಯೆ ಹೆಚ್ಚಾಗುತ್ತಿದೆ ಎಂದರು.

ಹೆಚ್.ಎಂ.ಎಸ್ ಸಂಘಟನೆಯ ನಾಗನಾಥ್ ಅವರು ಮಾತನಾಡಿ, ಕಾರ್ಮಿಕರ ಹಕ್ಕುಗಳ ಮೇಲೆ ಕೇಂದ್ರ ಸರ್ಕಾರ ದಾಳಿ ನಡೆಸಿದೆ. ದೇಶದಲ್ಲಿ ಶೋಷಣೆ, ಬಡತನ ಹೆಚ್ಚಾಗುತ್ತಿದೆ. ಇದರ ವಿರುದ್ಧ ಕಾರ್ಮಿಕರು ಒಗ್ಗಟ್ಟಿನಿಂದ ಹೋರಾಟ ನಡೆಸಬೇಕಾಗಿದೆ ಎಂದು ಕರೆ ನೀಡಿದರು.

ಕಾರ್ಮಿಕ ಮುಖಂಡರಾದ ರಾಜೇಂದ್ರ ನಾಯಕ್ ಮಾತನಾಡಿ, ದೇಶದಲ್ಲಿ ಸಾಮಾಜಿಕ ಮತ್ತು ಆರ್ಥಿಕ ಬಿಕ್ಕಟ್ಟು ಹೆಚ್ಚಾಗುತ್ತಿದೆ. ಎಲ್ಲಾ ಸಾರ್ವಜನಿಕ ವಲಯಗಳ ಸಂಸ್ಥೆಗಳನ್ನು ಸಂಪೂರ್ಣವಾಗಿ ಮಾರಾಟ ಮಾಡಲಾಗುತ್ತಿದೆ. ಲಕ್ಷಾಂತರ ಕಾರ್ಮಿಕರು ದಿನೇದಿನೇ ಉದ್ಯೋಗ ವಂಚನೆಗೆ ಒಳಗಾಗುತ್ತಿದ್ದಾರೆ. ಆರೋಗ್ಯ, ಶಿಕ್ಷಣ ಸೇರಿದಂತೆ ಎಲ್ಲಾ ವಲಯಗಳು ಖಾಸಗೀಕರಣ ಮಾಡಲಾಗುತ್ತಿದೆ ಎಂದರು.

ಸೇವಾ ಸಂಘಟನೆ ರಾಷ್ಟ್ರೀಯ ಕಾರ್ಯದರ್ಶಿ ಸೂರ್ಯ ಜಾರ್ಜ್ ಮಾತನಾಡಿ, ಶೇ. 93ರಷ್ಟು ಇದ್ದ ಅಸಂಘಟಿತ ಕಾರ್ಮಿಕರ ಸಂಖ್ಯೆ ಇಂದು ಶೇ. 98ಕ್ಕೆ ಏರಿದೆ. ಮೋದಿ ನೇತೃತ್ವದ ಸರ್ಕಾರದಲ್ಲಿ ಕನಿಷ್ಠ ಸಾಮಾಜಿಕ ಭದ್ರತೆಯೂ ಇಲ್ಲದಂತಾಗಿದೆ. ಹೆಚ್ಚು ಹೆಚ್ಚು ಕಾರ್ಮಿಕರನ್ನು ಬಡತನದ ಅಂಚಿಗೆ ತಳ್ಳಲಾಗುತ್ತಿದೆ ಎಂದು ಹೇಳಿದರು. ಕೇಂದ್ರದ ಬಿಜೆಪಿ ಸರ್ಕಾರದ ಆಡಳಿತದಲ್ಲಿ ಕೆಲವೇ ಕೆಲವು ಶ್ರೀಮಂತ ಉದ್ಯಮಿಗಳ 13.5 ಲಕ್ಷ ಕೋಟಿ ಸಾಲಗಳನ್ನು ಮನ್ನಾ ಮಾಡಲಾಗಿದೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

ಎಲ್ಲೆಡೆ ಕೆಂಪೋ ಕೆಂಪು: ಸಿಐಟಿಯು ಸಮ್ಮೇಳನ:

ಸಿಐಟಿಯು 17ನೇ ಅಖಿಲ ಭಾರತ ಸಮ್ಮೇಳನ ನಡೆದ ಬೆಂಗಳೂರಿನ ಅರಮನೆ ಮೈದಾನದಲ್ಲಿನ ಗಾಯಿತ್ರಿ ವಿಹಾರ ಶೃಂಗಾರಗೊಂಡು ಕಣ್ಮನ ಸೆಳೆಯುವಂತಿತ್ತು. ಪ್ರವೇಶ ದ್ವಾರಕ್ಕೆ ಹೊಂದಿಕೊಂಡಿರುವ ರಸ್ತೆಯ ಬದಿಗಳಲ್ಲಿ ಸಿಐಟಿಯು, ಬಾವುಟಗಳನ್ನು ಸಾಲಾಗಿ ಕಟ್ಟಲಾಗಿತ್ತು. ಸಮ್ಮೇಳನದ ಮಹತ್ವವನ್ನು ಸಾರುವ ಬ್ಯಾನರ್ ಗಳು ರಸ್ತೆಯಲ್ಲಿ ಸಂಚರಿಸುವ ಪ್ರಯಾಣಿಕರ ಗಮನ ಸೆಳೆಯುತ್ತಿದ್ದವು. ಮುಖ್ಯ ದ್ವಾರದಲ್ಲಿದ್ದ ಕೆಂಪು ಬಣ್ಣದ, ಎತ್ತರದ ಸ್ವಾಗತ ಕಮಾನು ಪ್ರತಿನಿಧಿಗಳನ್ನು ಸ್ವಾಗತಿಸುತ್ತಿತ್ತು. ದ್ವಾರ ಪ್ರವೇಶ ಮಾಡುತ್ತಿದ್ದಂತೆ ಎರಡೂ ಬದಿಗಳಲ್ಲಿ ಬ್ಯಾನರ್ ಗಳು, ಬಂಟಿಂಗ್ಸ್, ಬಾವುಟಗಳು ರಾರಾಜಿಸುತ್ತಿದ್ದವು. ಕಣ್ಣು ಹಾಯಿಸಿದಷ್ಟೂ ದೂರ ಕೆಂಪೋ ಕೆಂಪು.

ಸಭಾಂಗಣದ ಹೊರಗೆ ಜಗತ್ತಿನ, ಭಾರತದ ಹಾಗೂ ಕರ್ನಾಟಕದ ಹಲವು ಕ್ರಾಂತಿಕಾರಿಗಳ ಭಾವಚಿತ್ರಗಳುಳ್ಳ ದೊಡ್ಡ ದೊಡ್ಡ ಕಟೌಟ್ಗಳನ್ನು ಅಳವಡಿಸಲಾಗಿತ್ತು. ಈ ಕ್ರಾಂತಿಕಾರಿಗಳ ಚಿತ್ರಗಳು ಚಳಿವಳಿಯಲ್ಲಿ ತೊಡಗಿಕೊಂಡಿರುವ ಕಾರ್ಯಕರ್ತರನ್ನು ರೋಮಾಂಚನ ಗೊಳಿಸುತ್ತಿದ್ದವು.

ಗಾಯಿತ್ರಿ ವಿಹಾರದ ಮಂಟಪದಲ್ಲಿನ 'ಶ್ಯಾಮಲ್ ಚಕ್ರವರ್ತಿ ನಗರ'ದಲ್ಲಿ 1500 ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ ವಿಶಾಲ ಸಭಾಂಗಣ ಹೂವುಗಳಿಂದ ಅಲಂಕೃತಗೊಂಡಿತ್ತು. 'ರಂಜನಾ ನೀರುಲಾ– ರಘುನಾಥ್ ಸಿಂಗ್' ವೇದಿಕೆ ವರ್ಣರಂಜಿತವಾಗಿ ಸಿದ್ಧಗೊಂಡಿತ್ತು. ಅದು 30 ನಾಯಕರು ಕುಳಿತುಕೊಳ್ಳಬಹುದಾದ ದೊಡ್ಡ ವೇದಿಕೆ. ಉದ್ಘಾಟನಾ ಸಮಾರಂಭದಲ್ಲಿ ಮಾಡುತ್ತಿದ್ದ ವಿಡಿಯೋ ಚಿತ್ರೀಕರಣ ವೇದಿಕೆ ಹಿಂದಿನ ಡಿಜಿಟಲ್ ಪರದೆಯ ಮೇಲೆ ದೊಡ್ಡದಾಗಿ ಮೂಡಿಬರುವ ವ್ಯವಸ್ಥೆ ಮಾಡಲಾಗಿತ್ತು.

ಭಾಷಣಕಾರರು ಯಾವುದೇ ಭಾಷೆಯಲ್ಲಿ ಮಾತನಾಡಿದರೂ ತಮಗೆ ಅರ್ಥವಾಗುವ ಭಾಷೆಯಲ್ಲಿ (ಕನ್ನಡ, ತೆಲುಗು, ತಮಿಳು, ಮಲೆಯಾಳಿ, ಹಿಂದಿ, ಬೆಂಗಾಳಿ ಭಾಷೆಗಳು) ಕೇಳಿಸಿಕೊಳ್ಳುವ ತಂತ್ರಜ್ಞಾನವನ್ನು ಇಲ್ಲಿ ಅಳವಡಿಸಲಾಗಿತ್ತು. ಅದಕ್ಕಾಗಿ ಪ್ರತಿಯೊಬ್ಬ ಪ್ರತಿನಿಧಿಗಳಿಗೂ ಭಾಷಾಂತರ ಮಾಡುವ ಆಧುನಿಕ ಸಾಧನವೊಂದನ್ನು ಕೊಡಲಾಗಿತ್ತು.

ಎಲ್ಲವೂ ಸ್ವಯಂ ಸೇವಕರಿಂದ:

ಸಭೆ, ಸಮಾರಂಭ, ಸಮ್ಮೇಳನ ಎಂದರೆ, ಅದರ ಸಿದ್ದತೆಗಾಗಿ ನಿರ್ದಿಷ್ಟ ಹಣ ಕೊಟ್ಟು ಬೇರೆಯವರಿಗೆ ಗುತ್ತಿಗೆ ಕೊಡುವುದು ಸಾಮಾನ್ಯ. ಆದರೆ, ಸಿಐಟಿಯು ಸಮ್ಮೇಳನದ ಎಲ್ಲಾ ಸಿದ್ದತೆಗಳನ್ನು ಮಾಡಿದವರು ಸಿಐಟಿಯು ಕಾರ್ಯಕರ್ತರು, ಕಾರ್ಮಿಕರು ಮತ್ತು ಸಹೋದರ ಸಂಘಟನೆಗಳ ಕಾರ್ಯಕರ್ತರು ಎಂಬುದೊಂದು ವಿಶೇಷ. ಸಮ್ಮೇಳನದ ಪ್ರಚಾರಕ್ಕಾಗಿ ಮತ್ತು ದೇಶದ ವಿವಿಧೆಡೆಗಳಿಂದ ಬರುವ ಪ್ರತಿನಿಧಿಗಳಿಗೆ ಸ್ವಾಗತ ಕೋರುವ ಬ್ಯಾನರ್, ಬಂಟಿಂಗ್ಸ್ ಮತ್ತು ಬಾವುಟಗಳನ್ನು ಬೆಂಗಳೂರಿನ ಹಲವು ಪ್ರದೇಶಗಳಲ್ಲಿ ಕಟ್ಟಿರುವ ಕಾರ್ಮಿಕರು, ಸಮ್ಮೇಳನ ನಡೆಯುವ ಅರಮನೆ ಮೈದಾನದಲ್ಲಿನ ಸಿದ್ದತೆ ಮಾಡಲೂ ಹಗಲು–ರಾತ್ರಿ ಎನ್ನದೆ ಮೂರು ದಿನಗಳ ಕಾಲ ಸ್ವಯಂ ಸೇವಕರಾಗಿ ಶ್ರಮಿಸಿದ್ದಾರೆ. ಕೆಲವರು ತಮ್ಮ ಕೆಲಸಗಳಿಗೆ ರಜೆ ಹಾಕಿದರೆ, ಮತ್ತೆ ಕೆಲವರು ತಮ್ಮ ಪಾಳಿ ಮುಗಿಸಿದ ನಂತರ, ಅಥವಾ ಅಂದಿನ ತಮ್ಮ ಪಾಳಿಗೂ ಮುನ್ನ ಸಿದ್ದತೆಗಳ ಕೆಲಸದಲ್ಲಿ ಸ್ವಯಂ ಸೇವಕರಾಗಿ ತೊಡಗಿಕೊಂಡಿದ್ದರು.

ಇಷ್ಟು ಮಾತ್ರವಲ್ಲ, ಕಾರ್ಮಿಕರು ಸಮ್ಮೇಳನದ ವೆಚ್ಚಕ್ಕೆ ಬೀದಿ ಸಂಗ್ರಹ, ಮನೆ ಮನೆ ಬೇಟಿ ಮತ್ತು ಅಂಗಡಿಗಳ ಬೇಟಿ ಮೂಲಕ ಹಣ ಸಂಗ್ರಹದ ಜೊತೆಗೆ ತಮ್ಮ ಪಾಲಿನ ಒಂದು ದಿನದ ವೇತನದ ಹಣವನ್ನೂ ನೀಡಿದ್ದಾರೆ. ಕೆಲವರು ಒಂದು ತಿಂಗಳಿನ ವೇತನ ನೀಡಿದ್ದಾರೆ. ಬೀದಿ ಸಂಗ್ರಹದ ಮೂಲಕವೇ 20 ಲಕ್ಷ ರೂ. ಹಣ ಸಂಗ್ರಹವಾಗಿದೆ ಎಂದು ಸಿಐಟಿಯು ರಾಜ್ಯಾಧ್ಯಕ್ಷೆ ಕಾಂ.ಎಸ್. ವರಲಕ್ಷ್ಮಿಯವರು ಹೇಳುತ್ತಾರೆ.



ವಸ್ತು ಪ್ರದರ್ಶನ:

ಸಮ್ಮೇಳನದ ಹೊರಾಂಗಣದಲ್ಲಿ ಇಡಲಾಗಿದ್ದ ವೈಚಾರಿಕ ವಿಚಾರಗಳಿಗೆ ಸಂಬಂಧಿಸಿದ ಪುಸ್ತಕಗಳ ನಾಲ್ಕು ಮಳಿಗೆಗಳು ಓದುಗರನ್ನು ಆಕರ್ಷಿಸುತ್ತಿದ್ದವು. ಕನ್ನಡ, ತೆಲುಗು, ಮಲೆಯಾಳ, ಇಂಗ್ಲಿಷ್ ಭಾಷೆಗಳ ಪುಸ್ತಕಗಳನ್ನು ಮಾರಾಟ ಮಾಡಲಾಗುತ್ತಿತ್ತು. 'ಪ್ರೀತಿಪದ' ಎಂಬ ಸಂಸ್ಥೆಯು ಎಮ್. ಜಿ. ವೆಂಕಟೇಶ್, ವಿಠಲ್ ಬಂಡಾರಿ, ಪುರುಷೋತ್ತಮ್ ಕಲಾಲ್ ಬಂಡಿ, ಟಿ. ವೆಂಕಟೇಶ್ ಮೂರ್ತಿ ಇವರೆಲ್ಲರ ನೆನಪಿನಲ್ಲಿ 'ಪುಸ್ತಕ ಮನೆ' ಹೆಸರಿನ ಒಂದು ಮಳಿಗೆ ಇಟ್ಟಿತ್ತು.

ಕ್ರಿಯಾ ಪ್ರಕಾಶನದ ಮಳಿಗೆಯೂ ಸೇರಿದಂತೆ ಕೇರಳ, ಆಂದ್ರ ಪ್ರದೇಶ ಸೇರಿದಂತೆ ಕೆಲವು ರಾಜ್ಯಗಳ ಪ್ರಕಾಶಕರು ಪುಸ್ತಕ ಮಳಿಗೆ ಇಟ್ಟಿದ್ದರು. ಚಿಂತನ ಪುಸ್ತಕ, ಬಂಡಾಯ ಪ್ರಕಾಶನ, ಲಡಾಯಿ ಪ್ರಕಾಶನ, ನವಕರ್ನಾಟಕ, ಪ್ರೀತಿಪದ, ಅಹರ್ನಿಸಿ ಪ್ರಕಾಶನ, ಈ ಎಲ್ಲಾ ಪ್ರಕಾಶನಗಳ ಪುಸ್ತಕಗಳನ್ನು ಇಲ್ಲಿ ಮಾರಾಟಕ್ಕೆ ಇಡಲಾಗಿತ್ತು.

ಹೋರಾಟಗಳ ಇತಿಹಾಸದ ಪ್ರದರ್ಶನ:

ಎಸ್. ಸೂರ್ಯನಾರಾಯಣರಾವ್, ಎನ್.ಕೆ. ಉಪಾಧ್ಯಾಯ, ಎನ್. ಎಲ್. ಉಪಾಧ್ಯಾಯ, ಪಿ. ರಾಮಚಂದ್ರರಾವ್, ಬಿ. ಮಾದವ, ಎಸ್.ಪ್ರಸನ್ನಕುಮಾರ್ ಇವರೆಲ್ಲರ ನೆನಪಿನ ಭಾಗವಾಗಿ ದುಡಿಯುವ ವರ್ಗದ ಚಳುವಳಿಯ ಇತಿಹಾಸದ ಪ್ರದರ್ಶನ ಏರ್ಪಡಿಸಲಾಗಿತ್ತು. ಭಾರತದಲ್ಲಿ ಮತ್ತು ಕರ್ನಾಟಕದಲ್ಲಿ ರೈತರು, ಕಾರ್ಮಿಕರು, ಮಹಿಳೆಯರು, ವಿದ್ಯಾರ್ಥಿ, ಯುವಜನರು ಮತ್ತು ಚಳುವಳಿಯ ಮುಂಚೂಣಿ ನಾಯಕರು ನಡೆಸಿದ ಸಮರಧೀರ ಹೋರಾಟಗಳ ಇತಿಹಾಸ ಕುರಿತಾಗಿ ಪರಿಚಯಿಸುವ ಬಿತ್ತಿಚಿತ್ರಗಳನ್ನು ಪ್ರದರ್ಶನಕ್ಕೆ ಇಡಲಾಗಿತ್ತು. ದುಡಿಯುವ ಮಹಿಳೆಯರನ್ನು ಸಂಘಟಿಸುತ್ತ, ಮಹಿಳೆಯರ ಚಳುವಳಿಗೆ ನಾಯಕತ್ವ ನೀಡಿದ ಮಹಿಳಾ ನಾಯಕಿಯರ ವರ್ಣಚಿತ್ರಗಳ ಪ್ರದರ್ಶನ ಇಡಲಾಗಿತ್ತು.

ಫ್ಯಾಸಿಸಂ ಕುರಿತ ಬಿತ್ತಿ ಚಿತ್ರಗಳ ಪ್ರದರ್ಶನ:

ಗೌರಿ ಲಂಕೇಶ್, ಎಂ.ಎಂ. ಕಲ್ಬುರ್ಗಿ, ಗೋವಿಂದ ಪನ್ಸಾರೆ, ನರೇಂದ್ರ ದಾಭೋಲ್ಕರ್ ನೆನಪಿನಲ್ಲಿ ಫ್ಯಾಸಿಸಂ – ಯಾತನಾ ಶಿಬಿರ ಬಿತ್ತಿ ಚಿತ್ರಗಳ ಪ್ರದರ್ಶನ ಇಡಲಾಗಿತ್ತು. ಅಲ್ಲಿಗೆ ಭೇಟಿ ನೀಡಿದ ಸುದೀಪ್ತ ರವರು ತೆಗೆದ ಭಾವಚಿತ್ರಗಳು ಪ್ರದರ್ಶನಗೊಂಡು ಜನಾಂಗೀಯ ಹತ್ಯೆಯ ಭಿಭತ್ಸತೆಯನ್ನು ತೆರೆದಿಟ್ಟವು. ಸೌಹಾರ್ದತೆಗಾಗಿ ದುಡಿಯುವ ಮನಸ್ಸುಗಳನ್ನು ಇನ್ನಷ್ಟು ಗಟ್ಟಿಗೊಳಿಸುವ ಆಶಯದೊಂದಿಗೆ ಇಂತಹ ಪ್ರದರ್ಶನ ಇಡಲಾಗಿದೆ ಎಂದು ಆಯೋಜಕರಾದ ಕಾಂ.ಯಮುನಾ ಗಾಂವ್ಕರ್ ಹೇಳಿದರು.

ವೈಚಾರಿಕ ಮತ್ತು ವೈಜ್ಞಾನಿಕ ಮನೋಭಾವ ಬಿತ್ತುವ ಮೂಲಕ ಕೋಮುವಾದಿಗಳ ವಿರುದ್ಧ ಹೋರಾಡುತ್ತ, ಕೋಮು ಸೌಹಾರ್ದತೆಗಾಗಿ ಮತ್ತು ದೇಶದ ಜನರ ಐಕ್ಯತೆಗಾಗಿ ಶ್ರಮಿಸುತ್ತಿದ್ದ, ಇದಕ್ಕಾಗಿ ಕೋಮುವಾದಿಗಳ ದಾಳಿಗೆ ಬಲಿಯಾದ ಪ್ರಗತಿಪರ ಚಿಂತಕರು ಮತ್ತು ವಿಚಾರವಂತರ ಭಾವಚಿತ್ರಗಳು ಮತ್ತು ವಿವರಗಳನ್ನೊಳಗೊಂಡ ಬಿತ್ತಿಚಿತ್ರಗಳ ಪ್ರದರ್ಶನವೂ ಇತ್ತು.

ಎಸ್.ಪ್ರಸನ್ನಕುಮಾರ್, ಗೋವಾ ವಿಮೋಚನಾ ಹೋರಾಟಗಾರರಾಗಿದ್ದ ವಿ.ಕೋದಂಡರಾಮ್, ಕೆ.ವಿ. ಶ್ರೀನಿವಾಸ್, ಸಿ. ನಂಜುಂಡಪ್ಪ ಅವರ ನೆನಪಿನಲ್ಲಿ ಕೈಮಗ್ಗ (ದೇಸಿ) ಮತ್ತು ವಿದ್ಯುತ್ ಮಗ್ಗದಿಂದ ನೇಯ್ದ ಬಟ್ಟೆಗಳ ಮಾರಾಟ ಮತ್ತು ಪ್ರದರ್ಶನವನ್ನು ನೇಕಾರರು ಇಟ್ಟಿದ್ದರು.

ವ್ಯಂಗ ಚಿತ್ರಗಳ ಪ್ರದರ್ಶನವೂ ಇತ್ತು.



ಏಪ್ರಿಲ್ 5 ರಂದು ರೈತ–ಕಾರ್ಮಿಕರ ಐಕ್ಯ ಚಳುವಳಿ: ಡಾ. ಕೆ. ಹೇಮಲತಾ



ಬೆಂಗಳೂರು: ಏಪ್ರಿಲ್ 5ರಂದು ರೈತ–ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸಬೇಕೆಂದು ಬೃಹತ್ ಪ್ರತಿಭಟನಾ ಪ್ರದರ್ಶನವಿದೆ. ಈ ಐಕ್ಯ ಹೋರಾಟದಲ್ಲಿ ದೇಶದ ವಿವಿಧ ಭಾಗಗಳಿಂದ ರೈತ–ಕಾರ್ಮಿಕರು, ಕೃಷಿಕೂಲಿಕಾರರು, ಮಹಿಳೆಯರು, ಯುವಜನ–ವಿದ್ಯಾರ್ಥಿಗಳು ಲಕ್ಷಾಂತರ ಮಂದಿ ಭಾಗವಹಿಸಲಿದ್ದಾರೆ. ಈ ವಿಭಾಗದವರ ಹಕ್ಕುಗಳ ರಕ್ಷಣೆಗಾಗಿ ಸರ್ಕಾರಕ್ಕೆ ಎಚ್ಚರಿಕೆ ನೀಡಲಿದ್ದಾರೆ ಎಂದು ಸಿಐಟಿಯು ಅಖಿಲ ಭಾರತ ಅಧ್ಯಕ್ಷೆ ಡಾ. ಕೆ. ಹೇಮಲತಾ ತಿಳಿಸಿದರು.

ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು) 17ನೇ ಅಖಿಲ ಭಾರತ ಸಮ್ಮೇಳನದಲ್ಲಿ ಇಂದು(ಜನವರಿ20) ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಸಮ್ಮೇಳನದಲ್ಲಿ ಮೂರು ಪ್ರಮುಖ ನಿರ್ಣಯವನ್ನು ಅಂಗೀಕರಿಸಲಾಯಿತು. ಕೇಂದ್ರದ ಬಿಜೆಪಿ ಸರ್ಕಾರ ಜಾರಿಗೊಳಿಸುತ್ತಿರುವ ಕಾರ್ಮಿಕ ವಿರೋಧಿ ಕಾನೂನುಗಳನ್ನು ಕೂಡಲೇ ವಾಪಸ್ಸು ಪಡೆಯಬೇಕು ಮತ್ತು ಕಾರ್ಮಿಕ ಹಕ್ಕುಗಳ ರಕ್ಷಣೆಗೆ ಸರಕಾರಗಳು ಮುಂದಾಗಬೇಕು ಎಂದು ನಿರ್ಣಯ ಅಂಗೀಕರಿಸಲಾಗಿದೆ ಎಂದು ತಿಳಿಸಿದರು.

ಕೇಂದ್ರದ ರೈತ ವಿರೋಧಿ ಕೃಷಿ ಕಾಯ್ದೆಗಳನ್ನು ರದ್ದುಪಡಿಸಬೇಕೆಂದು ಸತತ ಒಂದು ವರ್ಷ ಹೋರಾಟ ನಡೆದಿದ್ದು, ಹೋರಾಟದ ತೀವ್ರತೆಗೆ ಮಣಿದ ಕೇಂದ್ರ ಸರ್ಕಾರ ಕಾಯ್ದೆಗಳನ್ನು ವಾಪಸ್ಸು ಪಡೆಯುವ ಸಂದರ್ಭದಲ್ಲಿ ನೀಡಿದ ಪ್ರಮುಖ ಭರವಸೆಗಳನ್ನು ಇದೂವರೆಗೂ ಈಡೇರಿಲ್ಲ. ಭರವಸೆ ಈಡೇರಿಸಲು ಕೇಂದ್ರದ ಬಿಜೆಪಿ ಸರ್ಕಾರ ವಿಫಲವಾಗಿದೆ ಎಂದು ಡಾ ಕೆ. ಹೇಮಲತಾ ಅವರು ಆಕ್ರೋಶ ವ್ಯಕ್ತಪಡಿಸಿದರು.



ವಿದ್ಯುತ್ ರಂಗವನ್ನು ಸಂಪೂರ್ಣ ಖಾಸಗೀಯವರಿಗೆ ವಹಿಸುವ ನಿಟ್ಟಿನಲ್ಲಿ ಸರ್ಕಾರ ಮುಂದಾಗಿದ್ದು, ವಿದ್ಯುತ್ ಮಸೂದೆ–2021 ಕೇಂದ್ರ ಸರ್ಕಾರ ಕೂಡಲೇ ವಾಪಸ್ಸು ಪಡೆಯಬೇಕೆಂದು ಸಮ್ಮೇಳನವು ನಿರ್ಣಯವನ್ನು ಅಂಗೀಕರಿಸಲಾಗಿದೆ. ಕೇರಳದ ಎಡರಂಗ ಸರ್ಕಾರ ಜಾರಿಗೊಳಿಸುತ್ತಿರುವ ಜನಪರ, ರೈತಪರ, ಕಾರ್ಮಿಕ ಪರ ನೀತಿಗಳಿಗೆ ಎದುರಾಗಿ ದಾಳಿಗಳು ಆರಂಭವಾಗಿದೆ. ಬಿಜೆಪಿ ಮತ್ತು ಅದರ ಮಿತ್ರಕೂಟ ಎಡರಂಗ ಸರ್ಕಾರದ ಯೋಜನೆಗಳನ್ನು ಜಾರಿಗೊಳಿಸಲು ತಡೆಯೊಡ್ಡುತ್ತಿರುವುದನ್ನು ಖಂಡಿಸುತ್ತೇವೆ ಎಂದರು.

ಅಂತರರಾಷ್ಟ್ರೀಯ ಮಟ್ಟದಲ್ಲಿ ಕಾರ್ಮಿಕ ಚಳುವಳಿ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದೆ. ಬಂಡವಾಳಶಾಹಿ ದೇಶಗಳು ಬೆಳೆದು ಬರುತ್ತಿರುವ ಕಾರ್ಮಿಕ ಹೋರಾಟಗಳು ಆಳುವ ಸರ್ಕಾರದ ಕಾರ್ಮಿಕ ವಿರೋಧಿ ನೀತಿಗಳನ್ನು ವಿರೋಧಿಸುತ್ತಿದ್ದಾರೆ. ಅದರಲ್ಲೂ ಕೋವಿಡ್ ಸಾಂಕ್ರಾಮಿಕ ಉತ್ತುಂಗದ ಹಂತದಲ್ಲಿದ್ದಾಗ ಕಾರ್ಮಿಕರು ಹೋರಾಟಗಳನ್ನು ಸಂಘಟಿಸಿರುವುದು ಗಮನಿಸಬಹುದಾಗಿ ಎಂದರು.

ಅಕ್ಟೋಬರ್ 2021ರಲ್ಲಿ ಯುನೈಟೆಡ್ ಸ್ಟೇಟ್ಸ್ ನಲ್ಲಿ ದೊಡ್ಡ ಪ್ರತಿಭಟನೆಗಳು ನಡೆಯಿತು. ಕಳೆದ ಕೆಲವು ವರ್ಷಗಳಲ್ಲಿ ಜರುಗಿದ ಅತ್ಯಂತ ಬಲಿಷ್ಟ ಹೋರಾಟ ಇದಾಗಿದೆ. ಅದೇ ರೀತಿ ಯು.ಕೆ. ಸ್ಪೇನ್, ಜರ್ಮನಿಯಲ್ಲಿಯೂ ಹೋರಾಟಗಳು ನಡೆದಿವೆ. ಇತ್ತೀಚಿಗೆ ಫ್ರಾನ್ಸ್ನಲ್ಲಿ ಸತತ ಪ್ರತಿಭಟನೆಗಳು ನಡೆದಿದ್ದು, ನೌಕರರ ನಿವೃತ್ತಿ ಕಾಲಮಿತಿ ಅವಧಿ ಬದಲಾವಣೆಯನ್ನು ವಿರೋಧಿಸಿ ಕಾರ್ಮಿಕರು ವಿರೋಧ ವ್ಯಕ್ತಪಡಿಸಿರುವುದನ್ನು ಗಮನಿಸಬಹುದಾಗಿದೆ ಎಂದರು.

ಅಂತರರಾಷ್ಟ್ರೀಯ ಮಟ್ಟದಲ್ಲಿ ಬಂಡವಾಳಶಾಹಿಗಳ ವಿರುದ್ಧ ಜರುಗುತ್ತಿರುವ ಜನ ಚಳುವಳಿಯೊಂದಿಗೆ ಸಿಐಟಿಯು ಸಂಘಟನೆಯು ಸೌಹಾರ್ದಯುತವಾಗಿ ಬೆಂಬಲಿಸಲಿದೆ ಎಂದು ಡಾ. ಕೆ. ಹೇಮಲತಾ ಅವರು ತಿಳಿಸಿದರು.

ವಿಭಜಿತ ರಾಜಕಾರಣವನ್ನು ಎದುರಿಸಲು ಒಗ್ಗೂಡಿಸುವ ದೊಡ್ಡ ಸವಾಲು ನಮ್ಮ ಮುಂದಿದೆ

ಬೆಂಗಳೂರು: ಬಲಪಂಥೀಯ ಶಕ್ತಿಗಳು ಸಮಾಜದಲ್ಲಿರುವ ಅಡೆತಡೆಗಳನ್ನು ಗುರುತಿಸಿ ಅದರ ಒಟ್ಟಾರೆ ಸ್ವರೂಪವನ್ನು ಕೋಮುವಾದೀಕರಣಗೊಳಿಸಲು ಮುಂದಾಗಿವೆ. ಇದು ಜನರ ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲೆ ನೇರ ಹೊಡೆತವಾಗಿದೆ ಎಂದು ಸಿಐಟಿಯು ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ತಪನ್ ಸೇನ್ ಹೇಳಿದರು.

ಸಿಐಟಿಯು 17ನೇ ಅಖಿಲ ಭಾರತ ಸಮ್ಮೇಳನ ಅಂಗವಾಗಿ ಜನವರಿ 19 ರಂದು ನಡೆದ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಅವರು ಮಾತನಾಡಿದರು. ಅಂತರರಾಷ್ಟ್ರೀಯ ಸಂಬಂಧಗಳು ಹಾಗೂ ಅದರ ಆರ್ಥಿಕ ಮತ್ತು ರಾಜಕೀಯ ಸಂಬಂಧಗಳನ್ನು ವಿಶ್ಲೇಷಿಸಿದ ಅವರು, ವಿಭಜಿತ ರಾಜಕಾರಣವನ್ನು ಮಾಡುತ್ತಾ ಜನರ ಹಾದಿ ತಪ್ಪಿಸುತ್ತಿರುವ ಈ ಸಂದರ್ಭದಲ್ಲಿ, ಜನರಿಗೆ ಅರಿವು ಮೂಡಿಸಲು ಮತ್ತು ಅವರನ್ನು ಒಗ್ಗೂಡಿಸುವ ಒಂದು ದೊಡ್ಡ ಸವಾಲು ನಮ್ಮ ಮುಂದಿವೆ ಎಂದು ಹೇಳಿದರು.

ಅರ್ಥಿಕತೆಯು ನಾಶವಾಗುತ್ತಿದೆ. ಭಾರತದ ಸ್ವಾವಲಂಬಿ ಗುಣಮಟ್ಟವು ಕುಗ್ಗುತ್ತಿದೆ. ಈ ಸಮಸ್ಯೆಗಳನ್ನು ಎದುರಿಸಲು ಹೋರಾಟ ಒಂದೇ ದಾರಿಯಾಗಿದೆ. ಸಮ್ಮೇಳನವು ಬೆಂಗಳೂರಿನಲ್ಲಿ ನಡೆಯುತ್ತಿದೆ. ಬಿಇಎಂಎಲ್ ನ ಒಟ್ಟಾರೆ ವ್ಯವಹಾರವನ್ನು ಖಾಸಗೀಕರಣಗೊಳಿಸಲು ಹೊರಟಿರುವ ಸರ್ಕಾರ, ಜಂಟಿ ಕಾರ್ಮಿಕ ಸಂಘಟನೆಗಳ ವೇದಿಕೆಯ ಹೋರಾಟಗಳನ್ನು ಗಮನಿಸಿ ಹಿಂಜರಿದಿದೆ. ಕಾರ್ಮಿಕ ಸಂಘಟನೆಗಳು ಇಂತಹ ಸಮಸ್ಯೆಗಳನ್ನು ಎದುರಿಸುವುದರ ಒಂದು ಸ್ವರೂಪವನ್ನು ಸ್ವತಂತ್ರವಾಗಿ ರೂಪಿಸುವ ಅಗತ್ಯವಿದೆ.



ಮಾಧ್ಯಮಗಳನ್ನು ಉದ್ದೇಶಿಸಿ ಮಾತನಾಡುತ್ತಿರುವ ತಪನ್ ಸೇನ್. ಹಾಗೂ ಕೆ.ಎನ್.ಉಮೇಶ್ ಮತ್ತು ಆರ್ಕರಾಜ್ ಪಂಡಿತ್

ಸಮ್ಮೇಳನದಲ್ಲಿ ಹಲವು ಪ್ರತಿನಿಧಿಗಳು ಕಾರ್ಯದರ್ಶಿಯ ವರದಿಯ ಮೇಲೆ ಚರ್ಚಿಸಿ ಮಾತನಾಡಿದ್ದಾರೆ. ಅವರು ಹೋರಾಟವನ್ನು ಬಲಿಷ್ಠಗೊಳಿಸುವುದರ ಕಡೆಗೆ ತಮ್ಮ ಚರ್ಚೆಯನ್ನು ಮಂಡಿಸಿದ್ದಾರೆ.

ಕಾರ್ಮಿಕ ಚಳುವಳಿಯನ್ನು ಬಲಿಷ್ಟಗೊಳಿಸಲು ಪ್ರಮುಖವಾಗಿ ಮೂರು ಅಂಶಗಳನ್ನು ಗುರುತಿಸಿದೆ. ಅದರಂತೆ, ಸಿಐಟಿಯು ಸಂಘಟನೆಯನ್ನು ಬಲಿಷ್ಠಗೊಳಿಸುವುದು, ಎಲ್ಲಾ ಕಾರ್ಮಿಕ ಸಂಘಟನೆಗಳೊಂದಿಗೆ ಹೋರಾಟವನ್ನು ಸಂಘಟಿಸುವುದು. ಕಾರ್ಮಿಕರ ಮತ್ತು ರೈತರ ಸಂಘಟನೆಗಳ ಐಕ್ಯ ಚಳುವಳಿಯನ್ನು ರೂಪಿಸುವ ಬಗ್ಗೆ ಚರ್ಚಿಸಲಾಗುತ್ತಿದೆ ಎಂದರು.

ಜಾಗತಿಕ ಕ್ರಾಂತಿಕಾರಿ ಕಾರ್ಮಿಕ ಸಂಘಟನೆ ಅಗತ್ಯ: WFTU ಪ್ರಧಾನ ಕಾರ್ಯದರ್ಶಿ

ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಶುಭ ಕೋರಿ ಮಾತನಾಡಿದ ಡಬ್ಲ್ಯೂಎಫ್‌ಟಿಯು ಪ್ರಧಾನ ಕಾರ್ಯದರ್ಶಿ ಕಾಂ. ಪಂಬಿಸ್ ಕಿರಿಟ್ಸಿಸ್ ಅವರು, ಜಾಗತಿಕ ಕಾರ್ಮಿಕ ವರ್ಗದ ಕ್ರಾಂತಿಕಾರಿ ಸಂಘಟನೆ ಮತ್ತು ಸತತ ಹೋರಾಟದಿಂದ ಬಂಡವಾಳಶಾಹಿ ಶೋಷಣೆ ಮತ್ತು ಸಾಮ್ರಾಜ್ಯಶಾಹಿ ಆಕ್ರಮಣವನ್ನು ಎದುರಿಸಲು ಸಾಧ್ಯ ಎಂದು ಹೇಳಿದರು.

ಜಗತ್ತಿನ 133 ದೇಶಗಳ 105 ಮಿಲಿಯನ್ ಸದಸ್ಯರನ್ನು ಹೊಂದಿರುವ WFTU ಸಂಘಟನೆಯ ಪರವಾಗಿ ಸಮ್ಮೇಳನಕ್ಕೆ ಶುಭ ಹಾರೈಸಿದರು.

ಸಿಐಟಿಯು ತನ್ನ ಇತಿಹಾಸದಲ್ಲಿ ಸಾಮ್ರಾಜ್ಯಶಾಹಿ ವಿರೋಧಿ ಮತ್ತು ಬಂಡವಾಳಶಾಹಿ ವಿರೋಧಿ ದೃಷ್ಟಿಕೋನವನ್ನು ಹೊಂದಿದೆ. ಮತ್ತು ವಿಶ್ವ ಫೆಡರೇಷನ್ ಆಫ್ ಟ್ರೇಡ್ ಯೂನಿಯನ್ಸ್ ಗೆ ಹೆಚ್ಚು ಸದಸ್ಯರನ್ನು ಹೊಂದಲು ಸಹಕಾರಿಯಾಗಿದೆ. ವಿಶೇಶವಾಗಿ ಜಗತ್ತಿನ ಇತಿಹಾಸದಲ್ಲಿ ಇಂದು ಜಗತ್ತು ರಾಜಕೀಯ ಬಿಕ್ಕಟ್ಟು, ಆರ್ಥಿಕ ಮತ್ತು ಮಿಲಿಟರಿ ವೈರುದ್ಯಗಳಲ್ಲಿ ಹಾದು ಹೋಗುವ ನಿರ್ಣಾಯಕ ಘಟ್ಟದಲ್ಲಿದೆ ಎಂದು ಅವರು ಹೇಳಿದರು.

ವಿಶ್ವ ಕಾರ್ಮಿಕರ ಐಕ್ಯತೆ ಚಿರಾಯುವಾಗಲಿ, ಸಿಐಟಿಯು ಚಿರಾಯುವಾಗಲಿ, ಕಾರ್ಮಿಕರ ಐಕ್ಯತೆ ಚಿರಾಯುವಾಗಲಿ, ಎಂಬ ಘೊಷಣೆಗಳನ್ನು ಕೂಗಿದರು. ಪ್ರತಿನಿಧಿಗಳು ಘೋಷಣೆ ಕೂಗುತ್ತ ಚಪ್ಪಾಳೆ ತಟ್ಟಿ ದನಿಗೂಡಿಸಿದರು.



‘ಕೋಮುವಾದದ ವಿರುದ್ಧ ಕಾರ್ಮಿಕ ವರ್ಗದ ಹೋರಾಟದಲ್ಲಿ ಒಂದು ಸೂಕ್ತ ಪ್ರತ್ಯುತ್ತರದ ಅಗತ್ಯವಿದೆ’

ಸಿಐಟಿಯುನ 17ನೇ ಸಮ್ಮೇಳನ ಈ ವಿಷಯದ ಮೇಲೆ ಒಂದು ಪ್ರತ್ಯೇಕ ಆಯೋಗ ಚರ್ಚೆ ನಡೆಸಿತು. ಆ ಪ್ರಬಂಧದ ಮುಖ್ಯ ಅಂಶಗಳನ್ನು ಈ ಮುಂದೆ ಕೊಡಲಾಗಿದೆ.

ಸಿಐಟಿಯು ತನ್ನ ಸ್ಥಾಪನಾ ಸಮ್ಮೇಳನದಿಂದಲೇ ಕೋಮುವಾದ ಮತ್ತು ಇತರ ವಿಚ್ಛಿದ್ರಕಾರಿ ಶಕ್ತಿಗಳ ಪ್ರಶ್ನೆಯನ್ನು ಗಂಭೀರವಾಗಿಯೇ ತಗೆದುಕೊಂಡಿದೆ. ಕೋಮುವಾದದ, ಅದರಲ್ಲೂ ಹಿಂದುತ್ವ ಕೋಮುವಾದದ ವಿರುದ್ಧ ಯಾವುದೇ ರಾಜಿಯಿಲ್ಲದ ಹೋರಾಟದಲ್ಲಿ ಕಾರ್ಮಿಕ ವರ್ಗದ ಪಾತ್ರದ ಬಗ್ಗೆ ತನ್ನ ಸಮ್ಮೇಳನಗಳಲ್ಲಿ, ಸಭೆಗಳಲ್ಲಿ ಚರ್ಚೆ ನಡೆಸಿಕೊಂಡು ಬಂದಿದೆ. ವಿಶೇಷವಾಗಿ 1992ರ ಬಾಬ್ರಿ ಮಸೀದಿ ಧ್ವಂಸದ ಕೃತ್ಯದ ನಂತರ ಸಿಐಟಿಯು ಕೋಮುವಾದದ ವಿರುದ್ಧ ಹೋರಾಟದಲ್ಲಿ, ವರ್ಗಐಕ್ಯತೆಯನ್ನು ಕಾಯ್ದುಕೊಳ್ಳುವಲ್ಲಿ ಮತ್ತು ರಾಷ್ಟ್ರೀಯ ಸಮಗ್ರತೆಯನ್ನು ರಕ್ಷಿಸಿಕೊಳ್ಳುವಲ್ಲಿ ತನ್ನ ಮತ್ತು ಒಟ್ಟಾರೆಯಾಗಿ ಕಾರ್ಮಿಕ ವರ್ಗದ ಪಾತ್ರದ ಪರಾಮರ್ಶೆ ನಡೆಸುತ್ತಲೇ ಬಂದಿದೆ, ಮೂರು ಸಮ್ಮೇಳನಗಳಲ್ಲಿ ಕಮಿಷನ್ ಪ್ರಬಂಧಗಳನ್ನು ಮತ್ತು ಚರ್ಚಾ ಪ್ರಬಂಧವನ್ನು ಅಂಗೀಕರಿಸಿದೆ.

ಈ ಸಮ್ಮೇಳನದಲ್ಲಿ ‘ಕೋಮುವಾದದ ವಿರುದ್ಧ ಕಾರ್ಮಿಕ ವರ್ಗದ ಹೋರಾಟ ಮತ್ತು ಒಂದು ಪ್ರತಿ–ದಾಳಿಯ ಅಗತ್ಯತೆ’ ಎಂಬ ಆಯೋಗ ಪ್ರಬಂಧದ ಮೇಲೆ ಚರ್ಚೆ ನಡೆದಿದೆ. ಈ ಪ್ರಬಂಧ ಕೋಮುವಾದದ ಕುರಿತು ತನ್ನ ಪ್ರಧಾನ ಸೈದ್ಧಾಂತಿಕ ನಿಲುಗಳನ್ನು ಪುನರುಚ್ಚರಿಸುತ್ತ, ಇದುವರೆಗೆ ನಿರ್ವಹಿಸಿದ ಕಾರ್ಯಭಾರಗಳನ್ನು ವಿಮರ್ಶಾತ್ಮಕ ವಾಗಿ ಪರಿಶೀಲಿಸಿದೆ ಮತ್ತು ಈ ಹೋರಾಟದಲ್ಲಿ ಮಧ್ಯಪ್ರವೇಶಿಸಿ ಪ್ರಮುಖ ಪಾತ್ರವಹಿಸುವಂತಾಗಲು ಒಂದು ಸಮಗ್ರವಾದ ದೀರ್ಘಕಾಲೀನ ಕಾರ್ಯಾಚರಣೆಯ ಯೋಜನೆಯನ್ನು ರೂಪಿಸಿದೆ.

ಇಂತಹ ಒಂದು ಸಮಗ್ರವಾದ ಪ್ರತಿ–ವ್ಯೂಹವನ್ನು ರೂಪೀಕರಿಸಬೇಕಾದರೆ ಭಾರತದಲ್ಲಿನ ಈಗಿನ ಸಾಮಾಜಿಕ–ರಾಜಕೀಯ ಸನ್ನಿವೇಶವನ್ನು ವರ್ಗ ವಿಶ್ಲೇಷಣೆಯ ಆಧಾರದಲ್ಲಿ ಅರ್ಥ ಮಾಡಿಕೊಳ್ಳಬೇಕು.

ನಮ್ಮ ದೇಶದಲ್ಲಿರುವ ಸಾಮಾಜಿಕ–ಆರ್ಥಿಕ ಪರಿಸ್ಥಿತಿಗಳು ಪ್ರತಿಗಾಮಿ ಕೋಮುವಾದಿ ಸಿದ್ಧಾಂತ ಮತ್ತು ರಾಜಕೀಯಕ್ಕೆ ಫಲವತ್ತಾದ ನೆಲ ಒದಗಿಸುತ್ತಿದೆ. ಇನ್ನೊಂದೆಡೆಯಲ್ಲಿ, ತಂತ್ರಜ್ಞಾನದ ಭಾರೀ ಮುನ್ನಡೆ ಮತ್ತು ಸರಕುಗಳ ಉತ್ಪಾದನೆ ಹಾಗೂ ನವ–ಉದಾರವಾದಿ ಆಳ್ವಿಕೆಯ ಅಡಿಯಲ್ಲಿ ಲಂಗುಲಗಾಮಿಲ್ಲದೆ ಜಗತ್ತಿನ ಮೂಲೆ–ಮೂಲೆಗೂ ತಲುಪಿರುವ ಮಾರುಕಟ್ಟೆ–ಪ್ರೇರಿತ ಕೊಳ್ಳುಬಾಕ ಸಂಸ್ಕೃತಿ ಬಹುಪಾಲು ಜನಗಳಲ್ಲಿ ಭೌತಿಕ ಆಕಾಂಕ್ಷೆಗಳನ್ನು ಸೃಷ್ಟಿಸಿದೆ. ಆದರೆ ತಾರತಮ್ಯದ ಭೌತಿಕ ವಾಸ್ತವತೆ ಬಹುಪಾಲು ಜನಗಳಿಗೆ ಈ ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳಲು ಬಿಡುವುದಿಲ್ಲ. ಈ ವೈರುಧ್ಯ ಉಂಟುಮಾಡಿರುವ ಆತಂಕಗಳು ಮತ್ತು ಹತಾಶೆ ಧರ್ಮಪರಾಯಣತೆ ಮತ್ತು ಕೋಮುವಾದ ಬೆಳೆಯಲು ನೆಲ ಹದ ಮಾಡಿಕೊಟ್ಟಿವೆ.

ಮಧ್ಯಮ ವರ್ಗದ ಜನಗಳಲ್ಲಿಯೂ ಈ ಕೊಳ್ಳುಬಾಕತನ ಸೃಷ್ಟಿಸಿರುವ ಸಾಸ್ಕೃತಿಕ ಬಿಕ್ಕಟ್ಟು ಅವರು ಕೋಮುವಾದಕ್ಕೆ ಕಣ್ಣುಮುಚ್ಚಿ ಬೆಂಬಲ ನೀಡುವಂತೆ ಮಾಡಿದೆ, ಅದು ಸಾಸ್ಕೃತಿಕ ರಾಷ್ಟ್ರವಾದದ ವೇಷ ತೊಟ್ಟು ಬರುತ್ತದೆ.

ಇವೆಲ್ಲ ಕಾರ್ಪೊರೇಟ್ ಹಿಂದುತ್ವ ಶಕ್ತಿಗಳಿಗೆ ಅತ್ಯಾಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಅಂಧಶ್ರದ್ಧೆ, ಮೂಲಭೂತವಾದ ಮತ್ತು ಅಪಪ್ರಚಾರದ ಅತ್ಯಂತ ಹೊಲಸು ಸ್ವರೂಪಗಳನ್ನು ಹರಡಲು ಅನುಕೂಲ ಕಲ್ಪಿಸಿಕೊಟ್ಟಿವೆ. ಮಿಥ್ಯೆಗಳನ್ನು, ಪುರಾಣಗಳನ್ನು ಚರಿತ್ರೆಯಾಗಿ ಪ್ರಸ್ತುತಪಡಿಸಲಾಗುತ್ತಿದೆ, ಸಾಮಾಜಿಕ ಮಾಧ್ಯಮಗಳನ್ನು ಬಳಸಿಕೊಂಡು ಸತತ ಸುಳ್ಳು ಮಾಹಿತಿಗಳನ್ನು ಹರಡುತ್ತ ಚರಿತ್ರೆಯನ್ನು ವಿಕೃತಗೊಳಿಸಲಾಗುತ್ತಿದೆ, ಅಲ್ಪಸಂಖ್ಯಾತ ಧರ್ಮಗಳು ಮತ್ತು ‘ಬೇರೆಯವರ’ ವಿರುದ್ಧ ದ್ವೇಷಪ್ರಚಾರ ನಡೆಸಲಾಗುತ್ತಿದೆ.

ಹಿಂದುತ್ವ ಶಕ್ತಿಗಳ ಈ ಕೋಮುವಾದೀಕರಣದ ವ್ಯವಸ್ಥಿತ ಪ್ರಯತ್ನಗಳು ಅಲ್ಪಸಂಖ್ಯಾತ ಕೊಮುವಾದ ಮತ್ತು ಮೂಲಭೂತವಾದ ಎದ್ದು



ಬರಲು ನೆರವಾಗಿದ್ದು ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸಿದೆ. ಇವೆರಡೂ ಸೇರಿಕೊಂಡು ನವ–ಉದಾರವಾದಿ ಸಾಮ್ರಾಜ್ಯಶಾಹಿಗೆ ನೆರವಾಗುತ್ತವೆ.

ಈ ವಿಚ್ಛಿದ್ರಕಾರಿ ಅಜೆಂಡಾವನ್ನು ಚಾರಿತ್ರಿಕವಾಗಿ ಕಾರ್ಮಿಕವರ್ಗ ಮಾತ್ರವೇ ಎದುರಿಸಬಲ್ಲದು ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ತನ್ನ ವರ್ಗಸ್ವಬಾವದಿಂದಾಗಿಯೇ ಬಂಡವಾಳಶಾಹಿ ಮತ್ತು ಊಳಿಗಮಾನ್ಯ ಶೋಷಣಾ ವಯವಸ್ಥೆಯ ವಿರುದ್ಧ ಹೋರಾಡುವಂತೆ ಕೋಮುವಾದದ ವಿರುದ್ಧವೂ ಹೋರಾಡಬೇಕಾದ ಚಾರಿತ್ರಿಕ ಜವಾಬ್ದಾರಿಯನ್ನು ಹೊಂದಿದೆ.

ಸಮಗ್ರವಾದ ಕಾರ್ಯತಂತ್ರ

ಆದರೆ ನಮ್ಮ ದೇಶದಲ್ಲಿ ಕಾರ್ಮಿಕ ವರ್ಗಕ್ಕೆ ಇಲ್ಲಿನ ಬಂಡವಾಳಶಾಹಿ ಬೆಳವಣಿಗೆಯ ಸ್ವರೂಪವೇ ನಿರ್ಮಿಸಿದ ಅಡೆತಡೆಗಳನ್ನು ಬೇಧಿಸಿ ತನ್ನ ಚಾರಿತ್ರಿಕ ಪಾತ್ರವನ್ನು ವಹಿಸಲು ಸಾಧ್ಯವಾಗಿಲ್ಲ. ಕಾರ್ಮಿಕ ವರ್ಗವನ್ನು ಕೋಮುವಾದ, ಸಂಕುಚಿತ ದೃಷ್ಟಿಕೋನ ಇತ್ಯಾದಿ ವಿಚಾರಗಳು ಮತ್ತು ಪ್ರಭಾವಗಳಿಂದ ಮುಕ್ತಗೊಳಿಸಲು, ಕಾರ್ಮಿಕ ಸಂಘಟನೆಯ ಪ್ರಜ್ಞೆಯನ್ನು ವರ್ಗಪ್ರಜ್ಞೆಯ ಮಟ್ಟಕ್ಕೆ, ಮತ್ತು ಇವನ್ನು ರಾಜಕೀಯ ಪ್ರಜ್ಞೆಯ ಮಟ್ಟಕ್ಕೆ ಏರಿಸಲು ಸಾಧ್ಯವಾಗಿಲ್ಲ. ನಮ್ಮ ಕಾರ್ಮಿಕ ಸಂಘಗಳು ನವ–ಉದಾರವಾದಿ ಧೋರಣೆಗಳ ವಿರುದ್ಧ ಮೂರು ದಶಕಗಳಿಂದ ತೀವ್ರವಾಗಿ ಸೆಣಸಾಟದಲ್ಲಿ ತೊಡಗಿದ್ದರೂ, ನಮ್ಮ ಕಾರ್ಮಿಕ ಆಂದೋಲನದ ಕಾರ್ಯಕರ್ತರಲ್ಲೂ ಆರ್ಥಿಕ ಹೋರಾಟಗಳಿಗೂ ಮತ್ತು ಕೋಮುವಾದದ ವಿರುದ್ಧ ಹೋರಾಟಕ್ಕೂ ಇರುವ ಅವಿಚ್ಛಿನ್ನ ಸಂಬಂಧಗಳ ಅರಿವು ಮೂಡಿಸಲು ಸಾಧ್ಯವಾಗಿಲ್ಲ.

ಕೋಮುವಾದದ ವಿರುದ್ಧ ನಮ್ಮ ಹೋರಾಟದಲ್ಲಿ ಒಂದು ಸಮಗ್ರ ನಿಲುವಿನ ಮತ್ತು ಸತತ ಕ್ರಿಯೆಯ ಅಭಾವವಿದೆ. ಇದನ್ನು ಅಲ್ಲಿ–ಇಲ್ಲಿ ಚದುರಿರುವ ಕೆಲವು ಕಾರ್ಯಕ್ರಮಗಳಂತೆ ಮಾಡಲಾಗುತ್ತಿದೆ. ಕಾರ್ಪೊರೇಟ್ ಕೋಮುವಾದದ ನಂಟು ಮತ್ತು ನಿರಂಕುಶಾಧಿಕಾರ ಕಾರ್ಮಿಕ ಆಂದೋಲನ ಮತ್ತು ಬೂರ್ಜ್ವಾ ಪ್ರಜಾಪ್ರಭುತ್ವದ, ಜಾತ್ಯತೀತತೆ ಮತ್ತು ಬಹುತ್ವದ ಅಸ್ತಿತ್ವಕ್ಕೇ ಬೆದರಿಕೆಯೊಡ್ಡಿರುವಾಗ ಅದಕ್ಕೆ ಎದುರಾಗಿ ಒಂದು ಸಮಗ್ರ ಕಾರ್ಯತಂತ್ರವನ್ನು ರೂಪಿಸಬೇಕಾಗಿದೆ.

ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ಕೋಮುವಾದ–ವಿರೋಧಿ ಹೋರಾಟಕ್ಕೆ ನವ–ಉದಾರವಾದ–ವಿರೋಧಿ ಹೋರಾಟ ಅಗತ್ಯವಾಗಿವೆ, ಆದರೆ ಅದಷ್ಟೇ ಸಾಲುವುದಿಲ್ಲ. ಹಿಂದುತ್ವದ ಪ್ರಾಬಲ್ಯಕ್ಕೆ ಸವಾಲೊಡ್ಡಲು ಒಂದು ಸಮಗ್ರವಾದ ಮಧ್ಯಪ್ರವೇಶ ಅಗತ್ಯವಾಗಿದೆ. ‘ಸಾಂಸ್ಕೃತಿಕ’ ಕ್ರಿಯೆಗಳ ಮೂಲಕ ಬಲಪಂಥೀಯ ಕಥನಗಳನ್ನು ಬದಲಿಸಬೇಕಾಗಿದೆ.

ಇದು ಬಹುದೊಡ್ಡ ಸವಾಲಾಗಿದ್ದರೂ, ಇದುವರೆಗಿನ ಸತತ ಹೋರಾಟಗಳು, ವಿಶೇಷವಾಗಿ ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಮತ್ತು ಸಂಯುಕ್ತ ಕಿಸಾನ್ ಮೋರ್ಚಾದ ಜಂಟಿ ವೇದಿಕೆಯ ಅಡಿಯಲ್ಲಿ ನಡೆದಿರುವ ವರ್ಗ ಪ್ರತಿರೋಧ ಇವಕ್ಕೆ ಅವಕಾಶಗಳನ್ನು ವಿಸ್ತರಿಸಿವೆ. ನಮ್ಮ ಕೆಂಬಾವುಟದ ಅಡಿಯಲ್ಲಿ ಅಣಿನೆರೆದಿರುವ ಕಾರ್ಮಿಕರೇ ರಾಜಕೀಯವಾಗಿ ಬಲಪಂಥೀಯ ಶಕ್ತಿಗಳ, ಬಿಜೆಪಿಯ ಪ್ರಭಾವಕ್ಕೆ ಒಳಗಾಗಿದ್ದಾರೆ. ಇದು ಸವಾಲೂ ಹೌದು, ಅವಕಾಶವೂ ಹೌದು.

ಸ್ಥಳೀಯ ಸಾಂಸ್ಕೃತಿಕ ಸಂಪನ್ಮೂಲಗಳನ್ನು, ಅವು ಅಂಧಶ್ರದ್ಧೆಯ, ಒಣ ಹೆಮ್ಮೆಯ ರೂಪ ಪಡೆಯದಂತೆ, ಚೈತನ್ಯಶೀಲಗೊಳಿಸಲು ಪ್ರಜ್ಞಾಪೂರ್ವಕವಾದ ಮಧ್ಯಪ್ರವೇಶಗಳನ್ನು ನಡೆಸಬೇಕಾಗಿದೆ. ಸಮಕಾಲೀನ ಸವಾಲುಗಳನ್ನು ಎದುರಿಸಲು ಸ್ಥಳೀಯ ಸಾಂಸ್ಕೃತಿಕ ಮತ್ತು ಸಾಮಾಜಿಕ ಆಚರಣೆಗಳನ್ನು ಸತತವಾಗಿ ಪ್ರಶ್ನಿಸುವುದು ಮತ್ತು ಪುನರ್‍ರೂಪಿಸುವುದು ಈ ಮಧ್ಯಪ್ರವೇಶದ ಅಭಿನ್ನ ಅಂಗವಾಗಬೇಕಾಗಿದೆ. ಇದಕ್ಕೆ ಪರಿಗಣಿಸಬೇಕಾದ ಪ್ರಶ್ನೆಗಳು ವಿಭಿನ್ನ ಸ್ಥಳಗಳಲ್ಲಿ ವಿಭಿನ್ನ ರೂಪಗಳನ್ನು ಪಡೆಯುತ್ತವೆ. ಅವುಗಳಲ್ಲಿ ಪ್ರಬಲ ಸಾಮಾಜಿಕ ಮತ್ತು ರಾಜಕೀಯ ಶಕ್ತಿಯೊಂದಿಗೆ ಸಂಘರ್ಷವೂ ಎದ್ದು ಬರಬಹುದು. ಅವು ಸ್ಥಳೀಯ ಮತ್ತು ರಾಷ್ಟ್ರೀಯ ಆಯಾಮವನ್ನೂ ಪಡೆಯಬಹುದು. ಒಟ್ಟಿನಲ್ಲಿ ಕೋಮುವಾದ ಮತ್ತು ನವ–ಉದಾರವಾದದ ಎಲ್ಲವನ್ನೂ ಸಮರೂಪಗೊಳಿಸುವ ಕಥನಗಳಿಗೆ ಎದುರಾಗಿ ಸ್ಥಳೀಯವಾದುದನ್ನು ಸ್ಥಳೀಯತೆಗೆ ಬಲಿಯಾಗದೆ ಎತ್ತಿಕೊಳ್ಳುವ, ಬಹುತ್ವವನ್ನು ಎತ್ತಿ ಹಿಡಿಯುವ ಪ್ರತಿ–ಕಥನಗಳನ್ನು ರೂಪಿಸಿಕೊಳ್ಳಬೇಕಾಗಿದೆ.

ಇಲ್ಲಿ ನಮಗೆ ಮತ್ತೊಂದು ಮಹತ್ವದ ಸಂಗತಿಯೆಂದರೆ, ಸದ್ಯದ ಕಾಲಘಟ್ಟದಲ್ಲಿ ನವ–ಉದಾರವಾದ ಮುಂದೆ ದಾರಿಗಾಣದಂತಹ ಸ್ಥಿತಿಯಲ್ಲಿದೆ. ಮತ್ತು ನವ–ಫ್ಯಾಸಿಸ್ಟ್ ಆಳ್ವಿಕೆಗಳಿಗೆ ಈ ಬಿಕ್ಕಟ್ಟನ್ನು ತಾತ್ಕಾಲಿಕವಾಗಿ ಪರಿಹರಿಸಲು ನೆರವಾಗುವ ಸಾಧ್ಯತೆಯೂ ಇಲ್ಲವಾಗುತ್ತಿದೆ. ಇಂತಹ ಸನ್ನಿವೇಶದಲ್ಲಿ ತೀವ್ರಗೊಳ್ಳುವ ಹೋರಾಟಗಳು ಮತ್ತು ನಿರಂತರ ರಾಜಕೀಯ ಸೈದ್ಧಾಂತಿಕ ಪ್ರಚಾರಾಂದೋಲನಗಳು ಈ ನವ–ಉದಾರವಾದಿ, ಕಾರ್ಪೊರೇಟ್ ಮತ್ತು ಕೋಮುವಾದಿ ಆಳ್ವಿಕೆಯ ಬುಡಕ್ಕೇ ಏಟು ಕೊಡಬಲ್ಲವು.

ಆಂತರಿಕ ವಲಸೆ ಕಾರ್ಮಿಕರ ಸಮಸ್ಯೆಗಳು ಮತ್ತು ಪರಿಹಾರಗಳು

ನವ–ಉದಾರವಾದದ ಸಂದರ್ಭದಲ್ಲಿ ಭಾರತದ ಆಂತರಿಕ ವಲಸೆ ಕಾರ್ಮಿಕರ ಸಮಸ್ಯೆಗಳು ಕೊವಿಡ್ ಮಹಾಸೋಂಕಿನ ಸಮಯದಲ್ಲಿ ಎಲ್ಲರ ಕಣ್ಣಿಗೆ ರಾಚುವಂತೆ ಬೆಳಕಿಗೆ ಬಂದವು. ಆದರೆ ಇವು ಕಾರ್ಮಿಕ ಸಂಘಟನೆಗಳು ಕೂಡ ಗಂಭೀರವಾಗಿ ಎತ್ತಿಕೊಳ್ಳದ ಪ್ರಶ್ನೆಗಳು. ಸಿಐಟಿಯುನ 17ನೇ ಅಖಿಲ ಭಾರತ ಸಮ್ಮೇಳನ ಈ ಪ್ರಶ್ನೆಯನ್ನು ಎತ್ತಿಕೊಂಡು ಆಮೂಲಾಗ್ರ ಚರ್ಚೆ ನಡೆಸಿತು. ಅದಕ್ಕೆ ಆಧಾರವಾದ ಕರಡು ಚರ್ಚಾ ಪ್ರಬಂಧದ ಕೆಲವು ಅಂಶಗಳನ್ನು ಈ ಮುಂದೆ ಕೊಡಲಾಗಿದೆ.

ಕೊವಿಡ್–19 ಸಾಂಕ್ರಾಮಿಕದ ಸಮಯದಲ್ಲಿ ಭೀಕರ ಅವಸ್ಥೆ ಸೇರಿದಂತೆ ವಲಸೆ ಕಾರ್ಮಿಕರ ಅನಾಗರಿಕ ಆರ್ಥಿಕ ಮತ್ತು ಸಾಮಾಜಿಕ–ರಾಜಕೀಯ ಸಂಕಟಗಳಿಗೆ ವಲಸೆ ಕಾರ್ಮಿಕರ ಟ್ರೇಡ್ ಯೂನಿಯನ್‌ಗಳು ಇಲ್ಲದಿರುವುದು ಮುಖ್ಯ ಕಾರಣ ಎಂದು ಕಾರ್ಮಿಕ ಆಂದೋಲನ ಪ್ರಾಮಾಣಿಕವಾಗಿ ಆತ್ಮಾವಲೋಕನ ಮಾಡಿಕೊಳ್ಳಬೇಕು.

* ವಲಸೆ ಕಾರ್ಮಿಕರು ನಿಜವಾಗಿಯೂ ‘ಕಳೆದುಕೊಳ್ಳುವುದು ತಮ್ಮನ್ನು ಬಿಗಿದಿರುವ ಸರಪಳಿಯಲ್ಲದೆ ಬೇರೇನೂ ಇಲ್ಲ’ ಎಂಬುದಕ್ಕೆ ಸೇರಿದವರು ಎಂಬುದನ್ನು ನೆನಪಿಟ್ಟುಕೊಳ್ಳುವುದು ಬಹಳ ಮುಖ್ಯ ಮತ್ತು ಅವರು ಈಗಾಗಲೇ ಲಾಕ್‌ಡೌನ್ ಸಮಯದಲ್ಲಿ ಪ್ರಭುತ್ವವನ್ನು ಧಿಕ್ಕರಿಸುವ ಮೂಲಕ ತಮ್ಮಲ್ಲಿ ಉರಿಯುತ್ತಿರುವ ಬೆಂಕಿಯನ್ನು ಪ್ರದರ್ಶಿಸಿದ್ದಾರೆ. ಅವರು ಲಾಕ್‌ಡೌನ್ ನಿರ್ಬಂಧಗಳನ್ನು ಧಿಕ್ಕರಿಸಿರುವುದು ಪ್ರಭುತ್ವದ ವಿರುದ್ಧದ ಮೌನದಂಗೆಯಾಗಿದೆ.
* ವಲಸೆ ಕಾರ್ಮಿಕರು ಕೆಲಸ ಮಾಡುತ್ತಿರುವ ರಾಜ್ಯಗಳಲ್ಲಿ ಬೇರೆ ಯಾರೂ ಮಾಡದ ವೃತ್ತಿಗಳಲ್ಲೇ ತೊಡಗಿರುವುದು ಕಂಡು ಬಂದಿದೆ. ಅವರು ಅಲ್ಲಿ ಅತ್ಯಂತ ಅಪಾಯಕಾರಿ ಮತ್ತು ಅನಿಶ್ಚಿತ ಕೆಲಸಗಳನ್ನು ನಿರ್ವಹಿಸುತ್ತಾರೆ. ಆ ರಾಜ್ಯಕ್ಕೆ/ಸ್ಥಳಕ್ಕೆ ವಲಸೆ ಕಾರ್ಮಿಕರು ಅನಿವಾರ್ಯರಾಗಿದ್ದಾರೆ.
* ವಲಸೆ ಕಾರ್ಮಿಕರು ಆರ್ಥಿಕ ಮತ್ತು ಸಾಮಾಜಿಕ–ರಾಜಕೀಯ–ಸಾಂಸ್ಕೃತಿಕ ಶೋಷಣೆ–ದಬ್ಬಾಳಿಕೆಗಳೆರಡಕ್ಕೂ ಬಲಿಯಾಗುತ್ತಾರೆ. ಅವರು ಆರ್ಥಿಕ ಸಮಸ್ಯೆಗಳನ್ನು ತಾವು ಕೆಲಸ ಮಾಡುವಲ್ಲಿ ಎದುರಿಸುತ್ತಾರೆ, ಮತ್ತು ಸಾಮಾಜಿಕ–ರಾಜಕೀಯ ಸಮಸ್ಯೆಗಳನ್ನು ಆ ರಾಜ್ಯದ ಪ್ರಜೆಯಾಗಿ ಸರ್ಕಾರಿ ಇಲಾಖೆಗಳು/ಏಜೆನ್ಸಿಗಳ ಹಗೆತನದಿಂದಾಗಿ ಎದುರಿಸಬೇಕಾಗುತ್ತದೆ. ಆರ್ಥಿಕ ಸವಾಲನ್ನು ಎದುರಿಸಲು ಕಾರ್ಮಿಕ ಸಂಘಗಳ ಸದಸ್ಯರಾಗಿಸಬೇಕು ಮತ್ತು ಇತರ ಸಮಸ್ಯೆಗಳನ್ನು ಪರಿಹರಿಸಲು ಅಲ್ಲಿನ ಸಿಐಟಿಯು ರಾಜ್ಯ ಸಮಿತಿಯ ಅಡಿಯಲ್ಲಿ ಸಾಮಾಜಿಕ–ರಾಜಕೀಯ–ಸಾಂಸ್ಕೃತಿಕ ವೇದಿಕೆಯ ಅಗತ್ಯವಿದೆ.

ಪುಟ 14 ಕ್ಕೆ





“ಬರುತಿದೆ ಬರುತಿದೆ ವಿಶ್ವ ಆರ್ಥಿಕ ಹಿಂಜರಿತ”

ಹೀಗೆಂದು ಐಎಂಎಫ್ ಮತ್ತು ವಿಶ್ವ ಬ್ಯಾಂಕ್ ಎರಡೂ ಹೇಳುತ್ತಿವೆ. ಆದರೆ ಇದಕ್ಕೆ ಮುಖ್ಯವಾಗಿ ಉಕ್ರೇನ್ ಯುದ್ಧ ಮತ್ತು ಅದು ಉಂಟುಮಾಡಿದ ಹಣದುಬ್ಬರವೇ ಕಾರಣವೆಂಬ ಅವುಗಳ ವಿಶ್ಲೇಷಣೆ ದೋಷಯುತವಾಗಿದೆಯಷ್ಟೇ ಅಲ್ಲ, ಈ ಹಿಂಜರಿತ ಹೇಗೆ ಕೊನೆಗೊಳ್ಳುತ್ತದೆ ಎಂದೂ ತಿಳಿಯದಾಗಿದ್ದಾರೆ ಎಂಬುದು ಕಾಣುತ್ತಿದೆ. ಆರ್ಥಿಕ ಹಿಂಜರಿತದ ಬಿಕ್ಕಟ್ಟಿಗೆ ಉಕ್ರೇನ್ ಯುದ್ಧವೇ ಮುಖ್ಯಕಾರಣವಾಗಿದ್ದರೆ, ಕನಿಷ್ಟಪಕ್ಷ, ಯುದ್ಧವು ಶೀಘ್ರವಾಗಿ ಕೊನೆಗೊಳ್ಳಬೇಕೆಂದು ಅವರು ಅಪೇಕ್ಷಿಸಬೇಕಾಗಿತ್ತು. ಆದರೆ ಆ ಬಗ್ಗೆ ಅವು ಮೌನವಾಗಿವೆ. ಆರ್ಥಿಕ ಹಿಂಜರಿತವನ್ನು ಉಂಟುಮಾಡದ ರೀತಿಯ ಮತ್ತು ಬಡ್ಡಿ ದರಗಳ ಏರಿಕೆಯ ಮೂಲಕವಲ್ಲದೆ ಬೇರೆ ಯಾವುದೇ ವಿಧಾನದ ಮೂಲಕ ಹಣದುಬ್ಬರ ಬಿಕ್ಕಟ್ಟನ್ನು ನಿಭಾಯಿಸುವ ಬಗ್ಗೆಯೂ ಏನೂ ಹೇಳುತ್ತಿಲ್ಲ. ಏಕೆ?

ಪ್ರೊ. ಪ್ರಭಾತ್ ಪಟ್ನಾಯಕ್
ಅನು: ಕೆ.ಎಂ. ನಾಗರಾಜ್

2023ರಲ್ಲಿ ವಿಶ್ವ ಜಿಡಿಪಿಯ ಮೂರನೇ ಒಂದು ಭಾಗದಷ್ಟು ಕುಗ್ಗಲಿದೆ. ಆದ್ದರಿಂದ, ಇಡೀ ವಿಶ್ವವೇ ಆರ್ಥಿಕ ಹಿಂಜರಿತಕ್ಕೆ ಒಳಗಾಗಲಿದೆ: ಇದನ್ನು ಐಎಂಎಫ್ ವ್ಯವಸ್ಥಾಪಕ ನಿರ್ದೇಶಕಿ ಕ್ರಿಸ್ಟಲಿನಾ ಜಾರ್ಜೀಎವಾ ಅವರು ಬಹಿರಂಗವಾಗಿಯೇ ಒಪ್ಪಿಕೊಂಡಿದ್ದಾರೆ. ಅಮೆರಿಕಾ, ಯುರೋಪಿಯನ್ ಒಕ್ಕೂಟ ಮತ್ತು ಚೀನಾ ಈ ಮೂರೂ ಪ್ರಮುಖ ಅರ್ಥವ್ಯವಸ್ಥೆಗಳು ಮಂದಗತಿಯಲ್ಲಿರಲಿವೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಚೀನಾದ ಅರ್ಥವ್ಯವಸ್ಥೆಯ ಬಗ್ಗೆ ಹೇಳುವುದಾದರೆ, ಸಧ್ಯದಲ್ಲಿ ಅಲ್ಲಿ ಕೋವಿಡ್ ಉಲ್ಬಣಗೊಳ್ಳುತ್ತಿರುವ ಕಾರಣದಿಂದ ಅದು ಮಂದಗತಿಗೆ ಒಳಗಾಗಲಿದೆ. ಹಾಗಾಗಿ, ಈ ಮೂರರಲ್ಲಿ, ಅಮೆರಿಕಾದ ಅರ್ಥವ್ಯವಸ್ಥೆಯ ಪರಿಸ್ಥಿತಿಯು, ಅದರ ಕಾರ್ಮಿಕ ಮಾರುಕಟ್ಟೆಯು ತನ್ನ ಹಿಂದಿನ ಸ್ಥಿತಿಗೆ ಮರಳಲಿರುವ ಗುಣಲಕ್ಷಣದಿಂದಾಗಿ, ಯುರೋಪಿಯನ್ ಒಕ್ಕೂಟ ಮತ್ತು ಚೀನಾಗಳಿಗಿಂತ ತುಲನಾತ್ಮಕವಾಗಿ ಉತ್ತಮವಾಗಿರುತ್ತದೆ ಮತ್ತು ಅಮೆರಿಕಾದ ಕಾರ್ಮಿಕ ಮಾರುಕಟ್ಟೆಯು ಹೊಂದಿರುವ ಚೇತರಿಕೆಯ ಅಂಶವು ಇಡೀ ವಿಶ್ವದ ಅರ್ಥವ್ಯವಸ್ಥೆಗೆ ಒಂದಿಷ್ಟು ಭರವಸೆ ಮೂಡಿಸುತ್ತದೆ ಎಂದು ಜಾರ್ಜೀಎವಾ ನಂಬುತ್ತಾರೆ.

ಜಾರ್ಜೀಎವಾ ಅವರ ಹೇಳಿಕೆಗಳಲ್ಲಿ ಎರಡು ವಿಡಂಬನಾತ್ಮಕ ಅಂಶಗಳಿವೆ. ಮೊದಲನೆಯದು, ಇಂದು ವಿಶ್ವ ಅರ್ಥವ್ಯವಸ್ಥೆಯ ಭವಿಷ್ಯವು ಅಮೆರಿಕಾದ ಕಾರ್ಮಿಕರ ವರಮಾನವು ಬಹಳಷ್ಟು ಕುಸಿಯದಿರುವ ಅಂಶದ ಮೇಲೆ ನಿಂತಿದೆ ಎಂಬುದನ್ನು ಐಎಂಎಫ್ ಕೂಡ ಸೂಚ್ಯವಾಗಿಯಾದರೂ ಒಪ್ಪಿಕೊಂಡಿದೆ ಎಂಬುದು. ತನ್ನ ‘ಸ್ಥಿರೀಕರಣ–ಸಂರಚನಾ ಹೊಂದಾಣಿಕೆ’ ನೀತಿಗಳ ಗತ್ಯ ಅಂಗವೆಂದು ವೇತನಗಳ ಕಡಿತವನ್ನು ವ್ಯವಸ್ಥಿತವಾಗಿ ಪ್ರತಿಪಾದಿಸುವ ಐಎಂಎಫ್, ಒಟ್ಟಾರೆ ಬೇಡಿಕೆಯಲ್ಲಿ ಕಾರ್ಮಿಕರ ವರಮಾನಗಳು ವಹಿಸುವ ಪಾತ್ರದ ಮಹತ್ವವನ್ನು ಒಪ್ಪಿಕೊಳ್ಳುತ್ತಿರುವುದು ನಿಜಕ್ಕೂ ಆಶ್ಚರ್ಯವೂ ಹೌದು, ಸ್ವಾಗತಾರ್ಹವೂ ಹೌದು. ಜಾರ್ಜೀಎವಾ ಅವರು ಅಮೆರಿಕಾದ ಕಾರ್ಮಿಕ ಮಾರುಕಟ್ಟೆಯ ಸ್ಥಿತಿಸ್ಥಾಪಕತ್ವವನ್ನು ಅಂದರೆ ಅದು ಹಿಂದಿದ್ದ ಸ್ಥಿತಿ–ಗತಿಗಳಿಗೆ ಮರಳುವ ಅಂಶವನ್ನು, ಆ ದೇಶದ ಆರ್ಥಿಕ ನಿರ್ವಹಣೆಯ ಪರಿಣಾಮವಾಗಿ ಮಾತ್ರ ನೋಡುತ್ತಿದ್ದಾರೆಯೇ ವಿನಃ ಅದರ ಕಾರಣವಾಗಿ ಅಲ್ಲ ಎಂದು ಅನೇಕ ಮಂದಿ ವಾದಿಸುತ್ತಾರೆ. ಆದರೆ, ಈ ಸ್ಥಿತಿಸ್ಥಾಪಕ ಅಂಶವನ್ನು "ನೆಮ್ಮದಿ" ಉಂಟುಮಾಡುವ ಅಂಶವಾಗಿ ಜಾರ್ಜೀಎವಾ ನೋಡುತ್ತಿರುವುದರಿಂದ (ಅವರ ಈ ಭಾವನೆ ಅಪ್ಪಟವಲ್ಲ ಎಂಬುದರ ಕಾರಣಗಳನ್ನು ನಾವು ಶೀಘ್ರದಲ್ಲೇ ನೋಡಲಿದ್ದೇವೆ), ಬೇಡಿಕೆಯನ್ನು ಉತ್ತೇಜಿಸುವಲ್ಲಿ ಕಾರ್ಮಿಕರ ವರಮಾನಗಳು ವಹಿಸುವ ಪಾತ್ರವನ್ನು ಅವರು ಒಪ್ಪಿಕೊಳ್ಳುವ ಬಗ್ಗೆ ಸಂದೇಹಪಡುವ ಅಗತ್ಯವಿಲ್ಲ.

ವಿಶ್ವ ಬಂಡವಾಳಶಾಹಿಯ ಭವಿಷ್ಯದ ಬಗ್ಗೆ ಅತ್ಯಂತ ಭೀಕರ ಭವಿಷ್ಯವಾಣಿ

‘ಸ್ಥಿರೀಕರಣ–ಸಂರಚನಾ ಹೊಂದಾಣಿಕೆ’ಯ ಐಎಂಎಫ್‌ನ ನೀತಿಗಳನ್ನು ಸಾಮಾನ್ಯವಾಗಿ ಬಿಕ್ಕಟ್ಟಿನಲ್ಲಿರುವ ದೇಶಗಳಿಗೆ ಅನ್ವಯಿಸಲಾಗುತ್ತದೆ.. ಈ ಕ್ರಮವು ಬಿಕ್ಕಟ್ಟನ್ನು ನಿವಾರಿಸಲು ಇರುವ ಸಾಧನವೇ ವಿನಃ ಅಭಿವೃದ್ಧಿಗೆ ನೆರವಾಗುವ ರಾಮಬಾಣವಲ್ಲ. ಆದ್ದರಿಂದ, ಐಎಂಎಫ್‌ನ ಗ್ರಹಿಕೆಯಯಲ್ಲಿ ಬದಲಾವಣೆಯನ್ನು ಕಾಣುವುದು ಸರಿಯಲ್ಲ ಎಂಬುದಾಗಿ ಕೆಲವರು ವಾದಿಸಬಹುದು. ಆದರೆ, ಐಎಂಎಫ್ ಈಗ ಏನು ಹೇಳುತ್ತಿದೆಯೊ ಅದು, ಈವರೆಗೆ ಅದು ಹೇಳುತ್ತಿದ್ದುದಕ್ಕಿಂತಲೂ ಖಂಡಿತವಾಗಿಯೂ ಭಿನ್ನವಾಗಿದೆ. ಅಮೆರಿಕಾದ ಕಾರ್ಮಿಕ ಮಾರುಕಟ್ಟೆಯ ಸ್ಥಿತಿಸ್ಥಾಪಕತ್ವವು ಅದರ ಬೆಳವಣಿಗೆಗೆ ಅನುಕೂಲವಾಗಿದೆ ಎಂಬುದನ್ನು ಒಪ್ಪಿಕೊಳ್ಳುವ ಐಎಂಎಫ್, ಒಂದು ಪ್ರಶ್ನೆಯನ್ನು ಹುಟ್ಟುಹಾಕಿದೆ: ಬೇರೆ ದೇಶಗಳು ಬಿಕ್ಕಟ್ಟಿಗೆ ಒಳಗಾದಾಗ ಅವುಗಳ ಕಾರ್ಮಿಕ ಮಾರುಕಟ್ಟೆಗಳೂ ಸಹ, ಅದೇ ರೀತಿಯಲ್ಲಿ, ಸ್ಥಿತಿಸ್ಥಾಪಕತ್ವವನ್ನು ಸಾಧಿಸಲು ಏಕೆ ಪ್ರಯತ್ನಿಸಬಾರದು? ಮತ್ತು, ಆಮದು ನಿಯಂತ್ರಣ ಮತ್ತು ಬೆಲೆ ನಿಯಂತ್ರಣಗಳಂತಹ ನೇರ ವಿಧಾನಗಳ ಮೂಲಕ ತಮ್ಮ ಬಿಕ್ಕಟ್ಟನ್ನು ಏಕೆ ನಿಭಾಯಿಸಿಕೊಳ್ಳಬಾರದು? ಅಮೆರಿಕಾದ ಕಾರ್ಮಿಕ ಮಾರುಕಟ್ಟೆಯ ಸ್ಥಿತಿಸ್ಥಾಪಕತ್ವವು ಅದರ ಆರ್ಥಿಕತೆಗೆ ಅನುಕೂಲವಾಗಿದೆ ಮತ್ತು ಆ ಕಾರಣದಿಂದಾಗಿ ಅದು ಇಡೀ ವಿಶ್ವದ ಅರ್ಥವ್ಯವಸ್ಥೆಗೆ ಪ್ರಯೋಜನಕಾರಿಯಾಗುತ್ತದೆ ಎಂಬುದನ್ನು ಅನುಮೋದಿಸುವ ಕ್ರಮವು, ಕೊನೆಯ ಪಕ್ಷ, ಪ್ರಸ್ತುತ ನವ ಉದಾರವಾದಿ ಕಾಲಮಾನದಲ್ಲಿ ಐಎಂಎಫ್ ಪ್ರತಿಪಾದಿಸುವ ನೀತಿಗಳಿಗೆ ಮೂಲಭೂತವಾಗಿ ವಿರುದ್ಧವಾಗಿದೆ.

ಜಾರ್ಜೀಎವಾ ಅವರ ಹೇಳಿಕೆಗಳಲ್ಲಿನ ಎರಡನೇ ವಿಡಂಬನಾತ್ಮಕ ಅಂಶವೆಂದರೆ, ಕಾರ್ಮಿಕ ಮಾರುಕಟ್ಟೆಯ ಸ್ಥಿತಿಸ್ಥಾಪಕತ್ವವು ಆರ್ಥಿಕ ಬೆಳವಣಿಗೆಗೆ ಪ್ರಯೋಜನಕಾರಿಯಾಗಿರುವ ಸಮಯದಲ್ಲೇ ಅಲ್ಲಿರುವ ಹಣದುಬ್ಬರವನ್ನು ಹಾಗೆಯೇ ಉಳಿಸಿಕೊಳ್ಳುವುದರಿಂದ ಅಮೆರಿಕಾದ ಫೆಡರಲ್ ರಿಸರ್ವ್ ಬಡ್ಡಿ ದರಗಳನ್ನು ಮತ್ತಷ್ಟು ಏರಿಸಬೇಕಾಗುತ್ತದೆ ಎನ್ನುವ ಅರಿವು ಅವರಿಗಿದೆ ಎಂಬುದು. ಬಡ್ಡಿ ದರಗಳ ಏರಿಕೆಯು ಎರಡು ಸ್ಪಷ್ಟ ಪರಿಣಾಮಗಳನ್ನು ಹೊಂದಿದೆ. ಮೊದಲನೆಯದು, ಬಡ್ಡಿ ದರಗಳ ಏರಿಕೆಯು ಅಮೆರಿಕಾದ ಆರ್ಥಿಕ ಬೆಳವಣಿಗೆಯ ಮೇಲೆ ಬೀರುವ ಪರಿಣಾಮವು ಸದ್ಯಕ್ಕೆ ಕಡಿಮೆ ಇರುತ್ತದೆಯಾದರೂ, ಮುಂಬರುವ ತಿಂಗಳುಗಳಲ್ಲಿ ಬೆಳವಣಿಗೆಯು ಸಂಕುಚಿತಗೊಳ್ಳುವುದು ಅನಿವಾರ್ಯವಾಗುತ್ತದೆ. ಹೀಗಾಗಿ 2023ರಲ್ಲಿ ತುಲನಾತ್ಮಕವಾಗಿ ಉತ್ತಮವಾಗಿ ಕಾಣಿಸಿಕೊಳ್ಳುವ ಸಾಧನೆಯು ದೀರ್ಘಕಾಲ ಉಳಿಯುವಂತಹ ವಿದ್ಯಮಾನವಲ್ಲ. ಮತ್ತು, ಅಮೆರಿಕಾದ ಕಳಪೆ ಸಾಧನೆಯು ಇಡೀ ವಿಶ್ವ ಅರ್ಥವ್ಯವಸ್ಥೆಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವುದರಿಂದ, ಚೀನಾದ ಕೋವಿಡ್ ಪರಿಸ್ಥಿತಿ ಗಣನೀಯವಾಗಿ ಸುಧಾರಿಸದ ಹೊರತು, ಮುಂಬರುವ ತಿಂಗಳುಗಳಲ್ಲಿ ವಿಶ್ವ ಆರ್ಥಿಕಹಿಂಜರಿತವು ಉಲ್ಬಣಗೊಳ್ಳುತ್ತದೆ ಎಂದಾಗುತ್ತದೆ. ವಿಷಯವನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, 2023ರಲ್ಲಿ ವಿಶ್ವದ ಮೂರನೇ ಒಂದು ಭಾಗದಲ್ಲಿ ಮಾತ್ರ ಆರ್ಥಿಕ ಹಿಂಜರಿತವಿದ್ದರೂ, ನಂತರ ವಿಶ್ವದ ಬಹು ದೊಡ್ಡ ಭಾಗವು ಆರ್ಥಿಕ ಹಿಂಜರಿತಕ್ಕೆ ಬಲಿಯಾಗುತ್ತದೆ. ಇದು ಖಂಡಿತವಾಗಿಯೂ ಪ್ರಸಕ್ತ ಸಂಧಿಕಾಲದ ವಿಶ್ವ ಬಂಡವಾಳಶಾಹಿಯ ಭವಿಷ್ಯದ ಬಗ್ಗೆ ಅದರ ಯಾವುದೇ ಪ್ರಮುಖ ವಕ್ತಾರರು ಮಾಡಿದ ಅತ್ಯಂತ ಭೀಕರ ಭವಿಷ್ಯವಾಣಿಯೇ ಸರಿ.

ದೋಷಯುತ ವಿಶ್ಲೇಷಣೆ

ವಿಶ್ವಬ್ಯಾಂಕ್ ಕೂಡ ಬಂಡವಾಳಶಾಹಿ ಜಗತ್ತಿನಲ್ಲಿ ಸಂಭವಿಸಲಿರುವ ಆರ್ಥಿಕ ಹಿಂಜರಿತದ ಬಗ್ಗೆ ಎಚ್ಚರಿಕೆ ನೀಡುತ್ತಿದೆ ಮತ್ತು ವಿಶೇಷವಾಗಿ ಮೂರನೇ ಜಗತ್ತಿನ ದೇಶಗಳ ಮೇಲೆ ಅದರ ಪರಿಣಾಮಗಳ ಬಗ್ಗೆಯೂ ಚರ್ಚಿಸುತ್ತಿದೆ. ಸೆಪ್ಟೆಂಬರ್ 2022ರಲ್ಲಿ ಬಿಡುಗಡೆ ಮಾಡಿದ ಒಂದು ಲೇಖನದಲ್ಲಿ, 2023ರಲ್ಲಿ ವಿಶ್ವ ಅರ್ಥವ್ಯವಸ್ಥೆಯು ಶೇ. 1.9ರಷ್ಟು ಬೆಳವಣಿಗೆಯನ್ನು ದಾಖಲಿಸುವ ನಿರೀಕ್ಷೆಯನ್ನು ಅದು ವ್ಯಕ್ತಪಡಿಸಿದೆ. ಆದರೆ, ಐಎಂಎಫ್ ಮತ್ತು ವಿಶ್ವ ಬ್ಯಾಂಕ್ ಈ ಎರಡೂ ಸಂಸ್ಥೆಗಳೂ ಆರ್ಥಿಕ ಹಿಂಜರಿತಕ್ಕೆ ಮುಖ್ಯವಾಗಿ ಉಕ್ರೇನ್ ಯುದ್ಧ ಮತ್ತು ಅದು ಉಂಟುಮಾಡಿದ ಹಣದುಬ್ಬರವೇ ಕಾರಣವೆಂದು ಹೇಳುತ್ತವೆ (ಮತ್ತು, ಸಾಂಕ್ರಾಮಿಕವೂ ಸಹ ಹಣದುಬ್ಬರಕ್ಕೆ ಕಾರಣವಾಗಿದೆ ಎಂಬುದನ್ನು ಸಾಂದರ್ಭಿಕವಾಗಿ ಹೇಳಿವೆ). ಆದರೆ, ಈ ಹಣದುಬ್ಬರಕ್ಕೆ ಪ್ರತಿಕ್ರಿಯೆಯಾಗಿ ಕೈಗೊಂಡಿರುವ ಬಡ್ಡಿ ದರಗಳ ಸರ್ವಾಂಗೀಣ ಏರಿಕೆಯೇ ಪ್ರಸ್ತುತದಲ್ಲಿ ವಿಶ್ವವನ್ನು ಗಾಬರಿಗೊಳಿಸುವ ಮಟ್ಟದ ಆರ್ಥಿಕ ಹಿಂಜರಿತಕ್ಕೆ ಆಧಾರವಾಗಿದೆ ಎಂಬುದನ್ನು ಮತ್ತು ನವ ಉದಾರವಾದಿ ಅರ್ಥವ್ಯವಸ್ಥೆಯಿಂದ ಉದ್ಭವಿಸಿದ ಸಮಸ್ಯೆಗಳು ಬಿಕ್ಕಟ್ಟಿನ ತಳದಲ್ಲಿವೆ ಎಂಬುದನ್ನು ಈ ಸಂಸ್ಥೆಗಳು ಗುರುತಿಸುವುದೇ ಇಲ್ಲ.

ಮೊದಲಿಗೆ ಹೇಳುವುದಾದರೆ, ಐಎಂಎಫ್ ಮತ್ತು ವಿಶ್ವ ಬ್ಯಾಂಕ್‌ಗಳ ಈ ವಿಶ್ಲೇಷಣೆಯು ದೋಷಯುತವಾಗಿದೆ. ಉಕ್ರೇನ್ ಯುದ್ಧ ಆರಂಭವಾಗುವುದಕ್ಕೂ ಬಹಳ ದಿನಗಳ ಹಿಂದೆಯೇ, ಅಂದರೆ, ಕೊರೊನಾ ಸಾಂಕ್ರಾಮಿಕದಿಂದ ವಿಶ್ವ ಅರ್ಥವ್ಯವಸ್ಥೆಯು ಚೇತರಿಸಿಕೊಳ್ಳಲಾರಂಭಿಸಿದ್ದ ಸಮಯದಲ್ಲೇ, ಹಣದುಬ್ಬರ ತಲೆಎತ್ತಿತ್ತು. ಆಗ, ಕೊರೊನಾ ಸಾಂಕ್ರಾಮಿಕದಿಂದಾಗಿ ಪೂರೈಕೆ ಸರಪಳಿಗಳಲ್ಲಿ ಉಂಟಾದ ಅಡಚಣೆಯೇ ಈ ಹಣದುಬ್ಬರಕ್ಕೆ ಕಾರಣವೆಂದು ಹೇಳಲಾಗಿತ್ತು. ಈ ವಿವರಣೆಯ ಬಗ್ಗೆ ಕೆಲವರುತಮ್ಮ ಭಿನ್ನಾಭಿಪ್ರಾಯಗಳನ್ನು ಆಗಲೇ ವ್ಯಕ್ತಪಡಿಸಿದ್ದರು. ಯಾವುದೇ ವಾಸ್ತವಿಕ ಅಡಚಣೆಗಿಂತ ಹೆಚ್ಚಾಗಿ, ಕೊರತೆಗಳು ಸೃಷ್ಟಿಯಾಗುತ್ತವೆ ಎಂಬ ನಿರೀಕ್ಷೆಯಲ್ಲಿ ದೊಡ್ಡದೊಡ್ಡ ಉದ್ದಿಮೆಗಳು ತಮ್ಮ ಲಾಭವನ್ನು ವಿಪರೀತವಾಗಿ ಹೆಚ್ಚಿಸುತ್ತಿರುವ ಕಾರಣದಿಂದಾಗಿ ಹಣದುಬ್ಬರ ಏರಿಕೆಯಾಗುತ್ತಿದೆ ಎಂಬ ಅಂಶದ ಬಗ್ಗೆ ಅವರು ಗಮನ ಸೆಳೆದಿದ್ದರು. ಹಣದುಬ್ಬರ ಏರಿಕೆಯಾಗುತ್ತಿದ್ದ ಇಂತಹ ಒಂದು ಪರಿಸ್ಥಿತಿಯ ಹಿನ್ನೆಲೆಯಲ್ಲಿ ಉಕ್ರೇನ್ ಯುದ್ಧ ಸಂಭವಿಸಿತು. ಮತ್ತು, ರಷ್ಯಾದ ವಿರುದ್ಧ ನಿರ್ಬಂಧಗಳನ್ನು ವಿಧಿಸಿದ ಪಾಶ್ಚಾತ್ಯ ಶಕ್ತಿಗಳು, ಹೊತ್ತಿ ಉರಿಯುತ್ತಿದ್ದ ಈ ಹಣದುಬ್ಬರದ ಬೆಂಕಿಗೆ ತುಪ್ಪ ಸುರಿದವು.

ಹಣದುಬ್ಬರ ಏರಿಕೆಯಾಗಲು ಉಕ್ರೇನ್ ಯುದ್ಧವು ಮೂಲ ಕಾರಣವಲ್ಲ ಎಂಬದನ್ನು ಕಚ್ಚಾತೈಲ ಬೆಲೆಗಳ ಏರಿಳಿತಗಳನ್ನು ಅವಲೋಕಿಸುವ ಮೂಲಕ ದೃಢಪಡಿಸಿಕೊಳ್ಳಬಹುದು. ಬ್ರೆಂಟ್ ಕಚ್ಚಾತೈಲದ ಬೆಲೆಗಳ ಏರಿಕೆಯು ಮುಖ್ಯವಾಗಿ 2021ರಲ್ಲಿ ವಿಶ್ವ ಅರ್ಥವ್ಯವಸ್ಥೆಯು ಕೊರೊನಾ ಸಾಂಕ್ರಾಮಿಕದಿಂದ ಚೇತರಿಸಿಕೊಳ್ಳಲಾರಂಭಿಸಿದ ನಂತರ ಸಂಭವಿಸಿದೆ. 2021ರ ಆರಂಭದಲ್ಲಿ ಪ್ರತಿ ಬ್ಯಾರೆಲ್‌ಗೆ 50.37 ಡಾಲರ್‌ಗಳಷ್ಟಿದ್ದ ಕಚ್ಚಾತೈಲದ ಬೆಲೆಯು ಆ ವರ್ಷದ ಅಂತ್ಯದಲ್ಲಿ 77.24 ಡಾಲರ್‌ಗಳಿಗೆ ಏರಿತು. ಅಂದರೆ, 2021ರಲ್ಲಿ ಶೇ. 50ಕ್ಕಿಂತಲೂ ಹೆಚ್ಚು ಏರಿಕೆಯಾಗಿತ್ತು. ಉಕ್ರೇನ್ ಯುದ್ಧ ಸಂಭವಿಸಿದ 2022ರಲ್ಲಿ, ಪ್ರತಿ ಬ್ಯಾರೆಲ್‌ಗೆ 78.25 ಡಾಲರ್‌ಗಳಿಂದ 82.82 ಡಾಲರ್‌ಗಳಿಗೆ, ಅಂದರೆ, ತೈಲ ಬೆಲೆಗಳಲ್ಲಿ ಶೇಕಡಾ 5.8ರಷ್ಟು ಏರಿಕೆಯಾಗಿವೆ. ತೈಲ ಬೆಲೆಗಳು ಹಣದುಬ್ಬರವನ್ನು ಏರಿಸಿವೆ ಎಂದು ಹೇಳಲಾಗುತ್ತದೆಯಾದರೂ, ಉಕ್ರೇನ್ ಯುದ್ಧ ಆರಂಭವಾದ ನಂತರದಲ್ಲಿ ಕಂಡು ಬರುವ ಬೆಲೆ ಏರಿಕೆಯ ದರವು ಮುಂದುವರಿದ ಅನೇಕ ಬಂಡವಾಳಶಾಹಿ ದೇಶಗಳಲ್ಲಿರುವ ಪ್ರಸ್ತುತ ಹಣದುಬ್ಬರದ ದರಕ್ಕಿಂತಲೂ ಕಡಿಮೆ ಇದೆ. ಪಾಶ್ಚಾತ್ಯ ದೇಶಗಳು ರಷ್ಯಾದ ವಿರುದ್ಧ ನಿರ್ಬಂಧಗಳನ್ನು ವಿಧಿಸಿದ ನಂತರ, ವಿಶ್ವ ತೈಲ ಬೆಲೆಗಳು ಪುಟ 15 ಕ್ಕೆ

ಅಂದು ಇಲ್ಲಿ ಕೆಂಬಾವುಟ ಕಟ್ಟಲೂ ಬಿಡಲಿಲ್ಲ? ಇಂದು ಎಲ್ಲೆಲ್ಲೂ ಕೆಂಬಾವುಟ

30 ವರ್ಷಗಳ ಹಿಂದೆ ಬೆಂಗಳೂರಿನಲ್ಲಿ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್(ಸಿಐಟಿಯು)ವಿನ ಅಖಿಲ ಭಾರತ ಮಟ್ಟದ ಕಾರ್ಯಕ್ರಮವೊಂದು ನಡೆಯಿತು. ಅಂದಿನ ಕಾರ್ಯಕ್ರಮದ ಪ್ರಚಾರಕ್ಕೆ ಬೆಂಗಳೂರಿನ ಹಲವೆಡೆ ಕೆಂಪು ಬಾವುಟಗಳು ರಾರಾಜಿಸುತ್ತಿದ್ದವು. ರಾಷ್ಟ್ರೀಯ ಹೆದ್ದಾರಿಯಾಗಿರುವ ಬೆಂಗಳೂರು-ಹೊಸೂರು ರಸ್ತೆ ಅಂದು ದ್ವಿಮುಖ ಸಂಚಾರ ಇರುವ ಒಂದೇ ರಸ್ತೆಯಾಗಿತ್ತು. ನಾನಾಗ ಆಟೋ ರಿಕ್ಷಾ ಡ್ರೈವರ್ ಯೂನಿಯನ್ (ಸಿಐಟಿಯು) ನಲ್ಲಿ ಸಕ್ರಿಯನಾಗಿದ್ದೆ. ಹೊಸೂರು ರಸ್ತೆಗೆ ಹೊಂದಿಕೊಂಡಿರುವ ಗಾರ್ವೆಬಾವಿ ಪಾಳ್ಯದ ಪುಟ್ಟ ಹಳ್ಳಿಯಾಗಿತ್ತು. ಊರಿನ ಒಂದಷ್ಟು ಕುಟುಂಬಗಳು ಬೇಗೂರು ಕೆರೆ ನೀರು ಬಳಸಿ ನೀರಾವರಿ ಬೆಳೆ ಬೆಳೆಯುತ್ತಿದ್ದರು. ನೀರಾವರಿ ವ್ಯವಸ್ಥೆ ಇಲ್ಲದ ಜಮೀನುಗಳಲ್ಲಿ ರಾಗಿ, ಜೋಳ ಮುಂತಾದ ಮಳೆಯಾದಾರಿತ ಬೆಳೆ ಬೆಳೆಯುತ್ತಿದ್ದರು. ಮತ್ತೆ ಕೆಲವರು ಸಣ್ಣ ಪುಟ್ಟ ಕಾರ್ಖಾನೆಗಳಲ್ಲಿ ದುಡಿಯುತ್ತಿದ್ದರು. ಬೆರಣಿಕೆಯಷ್ಟು ಜನರು ಸಾರ್ವಜನಿಕ ಉದ್ದಿಮೆಗಳಾದ ಎಚ್ಎಎಲ್, ಬಿಇಎಲ್, ಎಚ್ಎಂಟಿ, ಐಟಿಐ ಕಾರ್ಖಾನೆಗಳ ಕಾರ್ಮಿಕರಾಗಿದ್ದರು. ಬಹುತೇಕ ಮನೆಗಳು ಸೀಟು ಹೊದಿಕೆಯ ಅಥವಾ ಹೆಂಚಿನ ಮನೆಗಳಾಗಿದ್ದವು.

ಸಿಐಟಿಯು ಕಾರ್ಯಕ್ರಮದ ಅಂಗವಾಗಿ ನಮ್ಮ ಪ್ರದೇಶದಲ್ಲಿ ಕೆಂಪು ಬಾವುಟ ಕಟ್ಟಲು ಮುಂದಾದೆ. ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್ಐ)ನ ಚಿಕ್ಕ ಬೇಗೂರುಗೇಟ್ ಘಟಕದ ಆನಂದ್ ಕುಮಾರ್ ಅವರನ್ನು ಜೊತೆ ಮಾಡಿಕೊಂಡು ರಸ್ತೆ ಬದಿಯಲ್ಲಿ ಇರುವ ವಿದ್ಯುತ್ ಕಂಬಗಳಿಗೆ ಮತ್ತು ರಸ್ತೆ ಪಕ್ಕದಲ್ಲಿ ಇರುವ ಮರಗಳಿಗೆ ಬಾವುಟಗಳನ್ನು ಕಟ್ಟತೊಡಗಿದೆವು. ಆ ಪ್ರದೇಶದಲ್ಲಿ ಅದುವರೆಗೂ ಕೆಂಬಾವುಟ ಹಾರಾಡುವುದನ್ನು ಅಲ್ಲಿನವರು ಕಂಡಿರಲಿಲ್ಲ. ಹೀಗೆ ಬಾವುಟ ಕಟ್ಟಲು ಆನಂದ್ ಕುಮಾರ್ ವಿದ್ಯುತ್ ಕಂಬದ ಮೇಲೆ ಹತ್ತಿದ್ದಾಗ ಅದೇ ಊರಿನ ಗೋಪಾಲ ರೆಡ್ಡಿ ಎಂಬುವವರು 'ಏಯ್, ಯಾರೋ ಅವ್ನು... ಇಳಿಯೋ ಕೆಳಗೆ. ಬೋ... ಮಕ್ಕಳ, ಎಲ್ಲಿಂದ್ಲೋ ಬಂದು ನಮ್ಮೂರಲ್ಲಿ ಕಮ್ಯುನಿಸ್ಟ್ ಬಾವುಟ ಕಟ್ತೀರೇನ್ರೋ??' ಎಂದು ನಿಂದಿಸುತ್ತಾ ಆವರಿಗೆ ಹೊಡೆದರು, ಕೆಂಬಾವುಟ ಕಿತ್ತೆಸೆದರು. ನಾನು ಅದಕ್ಕೂ ಮೊದಲೇ 10 ವರ್ಷಗಳು ಆ ಗ್ರಾಮದಲ್ಲಿ ವಾಸವಿದ್ದೆ. ಕಾಂಗ್ರೆಸ್ ಪಕ್ಷದ ಬೆಂಬಲಿಗರಾಗಿದ್ದ ಗೋಪಾಲ ರೆಡ್ಡಿಯವರ (ಅವರು ಈಗಿಲ್ಲ) ಬಳಿ ನನ್ನ ಕುರಿತು ಪರಿಚಯ ಮಾಡಿಕೊಡುವ ಪ್ರಯತ್ನ ಮಾಡಿದೆ. ಅವರು ನನ್ನ ಮಾತುಗಳನ್ನು ಕೇಳುವ ಸ್ಥಿತಿಯಲ್ಲಿ ಇರಲಿಲ್ಲ. 'ಕಮ್ಯುನಿಸ್ಟ್ ಬಾವುಟ ನಮ್ಮೂರಲ್ಲಿ ಕಾಣಿಸಬಾರದು. ನೀವು ಬೆಂಗಳೂರು ಸಿಟಿಯಲ್ಲಿ ಕಟ್ಕೊಳ್ಳಿ, ಇಲ್ಲಿ ಕಟ್ಟೋಕೆ ನಾನು ಬಿಡೋದಿಲ್ಲ' ಎನ್ನುತ್ತ ಬಾವುಟ ಕಟ್ಟಲು ಬಿಡಲಿಲ್ಲ.

ವರ್ಷಗಳು ಉರುಳಿದಂತೆ ಆ ಪ್ರದೇಶದಲ್ಲಿ ಹಲವು ಕಾರ್ಖಾನೆಗಳ ಸಾವಿರಾರು ಕಾರ್ಮಿಕರು ಸಿಐಟಿಯು ನೇತೃತ್ವದಲ್ಲಿ ಸಂಘ ಕಟ್ಟಿಕೊಂಡು, ಕೆಂಬಾವುಟ ಹಿಡಿದು ಹೋರಾಟಗಳನ್ನು ನಡೆಸಿದರು. ಹತ್ತಾರು ಗಾರ್ಮೆಂಟ್ ಕಂಪನಿಗಳ ಸಹಸ್ರಾರು ಮಹಿಳಾ ಕಾರ್ಮಿಕರ ಕೈಗಳಲ್ಲಿ ಕೆಂಬಾವುಟ ರಾರಾಜಿಸುತ್ತಿದ್ದವು. ಅಶೋಕ ಸಾಮ್ರಾಟ್, ಜಿಯಾದರ್ ಎಕ್ಸ್ ಪೋರ್ಟ್, ಪರ್ಲಾ ಇನ್ನೂ ಕೆಲವು ಗಾರ್ಮೆಂಟ್ ಕಂಪನಿಗಳ ಕಾರ್ಮಿಕರು ಹೋರಾಟ ನಡೆಸಿದರು. ಪತ್ತಿ ಸಿಲ್ಕ್, ಬಂಡಾರಿ ಮೆಟಲ್ ಅಂಡ್ ಅಲಾಯ್ಸ್, ಸಿಟಿ ವರ್ಕ್ಷಾಪ್, (ಇನ್ನೂ ಹಲವು ಕಾರ್ಖಾನೆಗಳಿದ್ದವು) ಹೋರಾಟಗಳು ನಡೆದವು. ಆಟೋ ಚಾಲಕರೂ ಸ್ಥಳೀಯ ಘಟಕ ರಚಿಸಿಕೊಂಡರು. ಆಟೋ ಚಾಲಕರಲ್ಲೂ ಕೆಂಬಾವುಟ ಹಿಡಿದು ಮಡಿವಾಳ ಪೊಲೀಸ್ ಠಾಣೆ ಎದುರು ಜೋರು ಪ್ರತಿಭಟನೆಗೆ ಧೈರ್ಯ ತಂದಿದ್ದು, ಕೆಂಬಾವುಟದ ಶಕ್ತಿ. ಸ್ಥಳೀಯ ರಾಜಕೀಯ ನಾಯಕರು ಮತ್ತು ಕಾರ್ಖಾನೆಗಳ ಮಾಲೀಕರ ಗೂಂಡಾಗಳ ದಾಳಿಗಳನ್ನು ಎದುರಿಸಿ ನಿಲ್ಲುವಷ್ಟರ ಮಟ್ಟಿಗೆ ಕಾರ್ಮಿಕ ಚಳುವಳಿ ಬೆಳೆದು ನಿಂತಿತು. ಕ್ರಮೇಣ ಸಿಐಟಿಯು ಈ ಪ್ರದೇಶದಲ್ಲಿನ ಮೂಲಭೂತ ಸೌಲಭ್ಯಗಳಿಗಾಗಿ ಹಲವು ಹೋರಾಟಗಳನ್ನು ನಡೆಸಿತು.

ಇಂದು ಅದೇ ಹೊಸೂರು ರಸ್ತೆಯಲ್ಲಿ ಸಿಐಟಿಯು ಅಖಿಲ ಭಾರತ ಸಮ್ಮೇಳನದ ಅಂಗವಾಗಿ ಕೆಂಬಾವುಟಗಳು ಹಾರಾಡುತ್ತಿರುವುದನ್ನೂ ಕಂಡು ಇವೆಲ್ಲವೂ ನೆನಪಿಗೆ ಬಂತು?.

-ಸಿದ್ದಯ್ಯ ಸಿ.



ಆಂತರಿಕ ವಲಸೆ ಕಾರ್ಮಿಕರ ಸಮಸ್ಯೆಗಳು..... ಪುಟ 12 ರಿಂದ

* ವಲಸೆ ಕಾರ್ಮಿಕರು ಕೆಲಸದ ಆಧಾರದ ಮೇಲೆ ಸ್ಥಳೀಯ ಕಾರ್ಮಿಕರೊಂದಿಗೆ ಅಸ್ತಿತ್ವದಲ್ಲಿರುವ ಯೂನಿಯನ್‌ಗಳು ಅಥವಾ ಸಾಮಾನ್ಯ ಯೂನಿಯನ್ ಗಳೊಂದಿಗೆ ನೋಂದಾಯಿಸಿಕೊಳ್ಳಬೇಕು ಮತ್ತು ಖಂಡಿತವಾಗಿಯೂ ವಲಸೆ ಕಾರ್ಮಿಕರ ಪ್ರತ್ಯೇಕ ಯೂನಿಯನ್‌ಗಳಲ್ಲಿ ಅಲ್ಲ. ಹಾಗೇನಾದರೂ ಮಾಡಿದರೆ, ಅವರು ಗಂಭೀರವಾದ ಸಾಮಾಜಿಕ-ರಾಜಕೀಯ ಶೋಷಣೆ-ದಬ್ಬಾಳಿಕೆಗೆ ಗುರಿಯಾಗುತ್ತಾರೆ. 'ಹೊರಗಿನವರು' ಎಂದು ಕಳಂಕಕ್ಕೆ ಒಳಗಾಗುತ್ತಾರೆ, ಕೋಮುವಾದಿ ಮತ್ತು ಸಂಕುಚಿತವಾದಿ ರಾಜಕಾರಣಿಗಳ ಗುರಿಯಾಗುತ್ತಾರೆ, ಅವರು ಅವರನ್ನು 'ಅತಿಕ್ರಮಣಕಾರರು' ಎಂದು 'ಮಣ್ಣಿನ ಮಕ್ಕಳಿಂದ' ಉದ್ಯೋಗಗಳು ಮತ್ತು ಆಸ್ತಿಗಳನ್ನು ಕಸಿದುಕೊಳ್ಳುವವರು ಎಂದು ಪ್ರಚಾರ ಮಾಡುತ್ತಾರೆ.
* ಬೇರೆ ರೀತಿಯಲ್ಲಿ ಹೇಳುವುದಾದರೆ, ವಲಸೆ ಕಾರ್ಮಿಕರಿಗೆ ಇಬ್ಬಗೆಯ ಸಾಂಸ್ಥಿಕ ಬೆಂಬಲದ ಅಗತ್ಯವಿದೆ: (1) ತಾವು ಕೆಲಸ ಮಾಡುವ ರಾಜ್ಯಗಳ ಕಾರ್ಮಿಕರೊಂದಿಗೆ ಸಾಮಾನ್ಯ ಕಾರ್ಮಿಕ ಸಂಘಗಳು. (2) ತಮ್ಮ ಮೂಲ ರಾಜ್ಯದ ಮತ್ತು ಕೆಲಸ ಮಾಡುವಲ್ಲಿನ ರಾಜ್ಯದ ರಾಜ್ಯ ಸಮಿತಿಗಳ ಅಡಿಯಲ್ಲಿ ಸಾಮಾಜಿಕ-ರಾಜಕೀಯ-ಸಾಂಸ್ಕೃತಿಕ ವೇದಿಕೆ. ಸಿಐಟಿಯು ಆ ಎರಡೂ ರಾಜ್ಯಗಳಲ್ಲಿ ಜಿಲ್ಲೆ ಮತ್ತು ಸ್ಥಳೀಯ ಶಾಖೆಗಳೊಂದಿಗೆ ಸಂಯೋಜಿಸಿಕೊಂಡು ಆಯಾ ರಾಜ್ಯ ಸಮಿತಿಯ ಅಡಿಯಲ್ಲಿ ವಲಸೆ ಕಾರ್ಮಿಕರ ವ್ಯವಹಾರಗಳಿಗೆ ಒಂದು ರೀತಿಯ ಸಮನ್ವಯ ಸಮಿತಿಯನ್ನು(ಸ್ವಲ್ಪಮಟ್ಟಿಗೆ ನಮ್ಮ ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯಂತೆ) ಆಯೋಜಿಸಬಹುದು.
* ತಾವು ಕೆಲಸ ಮಾಡುವ ರಾಜ್ಯಗಳಲ್ಲಿ ಅವರು ಸಾಮಾನ್ಯವಾಗಿ ಶಾಶ್ವತ ಹೊರಗಿನವರಾಗಿ ಉಳಿಯುತ್ತಾರೆ. ಅವರ ಪೌರತ್ವ ಹಕ್ಕುಗಳು ಮುರಿದುಹೋಗುತ್ತವೆ ಮತ್ತು ಕಾರ್ಯವಿಧಾನದ ಮತ್ತು ಸೈದ್ಧಾಂತಿಕ ಪಕ್ಷಪಾತಗಳ ಕಾರಣದಿಂದಾಗಿ ರಾಜ್ಯ ಸಂಸ್ಥೆಗಳಿಗೆ ಅವರ ಪ್ರವೇಶವನ್ನು ಹೆಚ್ಚಾಗಿ ನಿರ್ಬಂಧಿಸಲಾಗುತ್ತದೆ. ಆಧಾರ್‌ಕಾರ್ಡ್ ಮತ್ತು ರೇಷನ್ ಕಾರ್ಡ್ ನಂತಹ ಗುರುತಿನ ದಾಖಲೆಗಳ ಪೋರ್ಟೆಬಿಲಿಟಿಗೆ ಸರಳ ಮತ್ತು ಪರಿಣಾಮಕಾರಿ ಪೋರ್ಟಬಿಲಿಟಿಗೆ ಅವಕಾಶ ಮಾಡಿಕೊಟ್ಟರೆ ಮತ್ತು ವಲಸಿಗರಿಗೆ ರಾಜ್ಯಗಳ ನಿವಾಸಿಗಳಂತೆ ಮತದಾನದ ಹಕ್ಕುಗಳನ್ನು ನೀಡಿದರೆ, ಅಂತಹ ಅನೇಕ ಸಮಸ್ಯೆಗಳನ್ನು ಪರಿಹರಿಸಬಹುದು.
* ಸಾಮಾನ್ಯವಾಗಿ ವಲಸೆ ಕಾರ್ಮಿಕರು ಮತ್ತು ನಿರ್ದಿಷ್ಟವಾಗಿ ತಮ್ಮ ಕೆಲಸದ ಸ್ವರೂಪದಿಂದಾಗಿ ಬೇರೆ ಬೇರೆ ರಾಜ್ಯಗಳಿಗೆ ಹೋಗಬೇಕಾದ ವಲಸೆ ಕಾರ್ಮಿಕರು ಪೂರ್ಣ ಮತ್ತು ಸಮಾನ ನಾಗರಿಕರಾಗಿ ತಮ್ಮ ಹಕ್ಕುಗಳನ್ನು ಚಲಾಯಿಸಲು ಹಲವಾರು ಅಡೆತಡೆಗಳನ್ನು ಎದುರಿಸುತ್ತಾರೆ. ಪ್ರತಿಕೂಲ ಮಾನಸಿಕ ಆರೋಗ್ಯದ ಸಮಸ್ಯೆಗಳಿಗೆ ಈಡಾಗುತ್ತಾರೆ. ಅವರು ತಾವು ಹುಟ್ಟಿ-ಬೆಳೆದ ರಾಜ್ಯದಲ್ಲೂ ಮತ್ತು ಕೆಲಸ ಮಾಡುವ ರಾಜ್ಯದಲ್ಲೂ 'ಹೊರಗಿನವರು' ಆಗುವ ಸಮಸ್ಯೆಯನ್ನೂ ಎದುರಿಸುತ್ತಾರೆ.

ಯಾವ ರಾಜ್ಯಗಳಿಂದ ಕಾರ್ಮಿಕರು ವಲಸೆ ಹೋಗುತ್ತಾರೋ ಆ ರಾಜ್ಯಗಳಲ್ಲಿ ಸಿಐಟಿಯು ಅಂತಹ ಕುಟುಂಬಗಳನ್ನು ತಲುಪಲು ಸಾಂಸ್ಥಿಕ ಜಾಲವನ್ನು ಸ್ಥಾಪಿಸಬಹುದು ಮತ್ತು ಸಂಪರ್ಕಕ್ಕೆ ಸಾಮಾಜಿಕ-ರಾಜಕೀಯ-ಸಾಂಸ್ಕೃತಿಕ ಬೆಂಬಲವನ್ನು ಒದಗಿಸಬಹುದು. ಸಂಬಂಧಿತರ ವಾನೆ ಮತ್ತು ಗಮ್ಯಸ್ಥಾನದ ರಾಜ್ಯಗಳ ರಾಜ್ಯ ಸಮಿತಿಗಳ ಜೊತೆ ಸಂಯೋಜಿಸಿಕೊಂಡು ಇದನ್ನು ಮಾಡ ಬೇಕಾಗಿದೆ. ಅವರು ಕೆಲಸ ಮಾಡುವ ರಾಜ್ಯಗಳಲ್ಲಿ ಅವರು ಸಿಐಟಿಯು ಯೂನಿಯನ್ ಗಳೊಂದಿಗೆ ಸೇರ್ಪಡೆಗೊಳ್ಳಲು ವಲಸೆ ಪ್ರೇರೇಪಿಸುವ ರೀತಿಯಲ್ಲಿ ಈ ಜಾಲಗಳನ್ನು ರಚಿಸಬೇಕು.

* ಭಾರತ ಸರ್ಕಾರವು "ಅಂತರ-ರಾಜ್ಯ ವಲಸೆ ಕಾರ್ಮಿಕರು (ಉದ್ಯೋಗದ ನಿಯಂತ್ರಣ ಮತ್ತು ಸೇವಾ ಷರತ್ತುಗಳು) ಕಾಯಿದೆ 1979" ಅನ್ನು ತಂದಿದೆ. ಆದರೆ ಅದು ಸಂಪೂರ್ಣವಾಗಿ ಆರಂಭದಿಂದಲೂ ಸರ್ಕಾರದ ಕಪಾಟಿನಲ್ಲೇ ಉಳಿದಿದೆ. ಈ ಕಾಯಿದೆಯ ಅನ್ವಯದ ಒಂದೇ ಒಂದು ನಿದರ್ಶನವೂ ಸಿಗಲಾರದಂತೆ ಸ್ಥಿತಿಯಿದೆ. ಈ ಕಾಯಿದೆಯ ನಿಬಂಧನೆಗಳನ್ನು ಅನುಷ್ಠಾನಗೊಳಿಸಿದ್ದರೆ, ವಲಸೆ ಕಾರ್ಮಿಕರು ಕೋವಿಡ್ ಕಾಲದಲ್ಲಿ ಅನುಭವಿಸಿದ ನೋವುಗಳನ್ನು ಭಾಗಶಃವಾದರೂ ಪರಿಹರಿಸಬಹುದಿತ್ತು. ಇಂತಹ ಒಂದು ಕಾಯಿದೆ ಇದೆ ಎಂಬುದೂ ಆಗಲೇ ಗಮನಕ್ಕೆ ಬಂದದ್ದು. ಬೆಳಕಿಗೆ ಬಂದಿತು. ಇದು ಸರಕಾರಗಳ ವರ್ಗ ಪಕ್ಷಪಾತವನ್ನು ಪ್ರದರ್ಶಿಸುತ್ತದೆ. ಅವರಿಗೆ ದೇಶೀಯ ಮತ್ತು ವಿದೇಶಿ ಬಂಡವಾಳಕ್ಕೆ ಲಭ್ಯಗೊಳಿಸಬಹುದಾದ ಅಗ್ಗದ ವಲಸೆ ಕಾರ್ಮಿಕರ ಒಂದು ದೊಡ್ಡ ಸಂಗ್ರಹ ಪ್ರಯೋಜನಕಾರಿ.

ವಲಸೆ ಕಾರ್ಮಿಕರ ಪ್ರಶ್ನೆಯನ್ನು ಎದುರಿಸಲು ಕೇರಳದಲ್ಲಿ ಕೈಗೊಂಡ ಕ್ರಮಗಳು ವಲಸೆ ಕಾರ್ಮಿಕರನ್ನು ಸಂಘಟಿಸುವಲ್ಲಿ ಸಿಐಟಿಯುಗೆ ಬಹಳಷ್ಟು ನೆರವಾಗಬಲ್ಲವು. ●

"ಬರುತಿದೆ ಬರುತಿದೆ ವಿಶ್ವ ಆರ್ಥಿಕ ಹಿಂಜರಿತ"..... ಪುಟ 13 ರಿಂದ

2022ರಲ್ಲಿ ಬ್ಯಾರೆಲ್‌ಗೆ 133.18 ಡಾಲರ್‌ಗಳ ಗರಿಷ್ಠ ಮಟ್ಟವನ್ನು ತಲುಪಿದವು, ನಿಜ. ಆದರೆ, ಆ ನಂತರ ಬೆಲೆಗಳು ತೀವ್ರವಾಗಿ ಇಳಿದದ್ದನ್ನು ನಾವು ನೋಡಿದೆವು. ಆದ್ದರಿಂದ, ಅನಿಷ್ಟಗಳಿಗೆ ಶನೀಶ್ವರನೇ ಹೊಣೆ ಎಂಬಂತೆ, ಬೆಲೆ ಏರಿಕೆಗೆ ಉಕ್ರೇನ್ ಯುದ್ಧದ ಮೇಲೆ ಗೂಬೆ ಕೂರಿಸುವ ಕ್ರಮವು ತಪ್ಪುದಾರಿಗೆಳೆಯುವ ಕೆಲಸವಾಗುತ್ತದೆ ಮಾತ್ರವಲ್ಲ (ಏಕೆಂದರೆ, ಬೆಲೆ ಏರಿಕೆಯಾದದ್ದು ಯುದ್ಧದಿಂದಲೇ ಅಲ್ಲ, ನಿರ್ಬಂಧಗಳ ಕಾರಣದಿಂದ ಆದದ್ದು) ದೋಷಪೂರ್ಣವೂ ಆಗುತ್ತದೆ (ಏಕೆಂದರೆ ನಿರ್ಬಂಧ-ಪ್ರೇರಿತ ಬೆಲೆಗಳು ತಗ್ಗಿದ ನಂತರ ಸರಕು ಸಾಮಗ್ರಿಗಳ ಬೆಲೆಗಳು ಇಳಿಕೆಯಾಗಬೇಕಿತ್ತು).

ಮೊಸಳೆ ಕಣ್ಣೀರು

ಬ್ರೆಟ್ಟನ್ ವುಡ್ಸ್ ಸಂಸ್ಥೆಗಳ (ಐಎಂಎಫ್ ಮತ್ತು ವಿಶ್ವ ಬ್ಯಾಂಕ್) ವಿಶ್ಲೇಷಣೆ ಮಾತ್ರವೇ ದೋಷಪೂರಿತವಾಗಿದೆ ಎನ್ನುವಂತಿಲ್ಲ. ಅದಕ್ಕಿಂತಲೂ ಹೆಚ್ಚು ಗಮನಾರ್ಹವಾದ ಸಂಗತಿಯೆಂದರೆ, ಈ ವಿಶ್ವ ಆರ್ಥಿಕಹಿಂಜರಿತವು ಹೇಗೆ ಕೊನೆಗೊಳ್ಳುತ್ತದೆ ಎಂಬುದರ ಬಗ್ಗೆ, ಅವರದ್ದೇ ವಿಶ್ಲೇಷಣಾ ಪರಿಭಾಷೆಯ ಪ್ರಕಾರವೇ, ಅವರಿಗೇ ಅರಿವಿಲ್ಲ ಎಂಬುದು. ಅವರು ನಂಬುವಂತೆ, ಒಂದು ವೇಳೆ ಆರ್ಥಿಕ ಹಿಂಜರಿತದ ಬಿಕ್ಕಟ್ಟಿಗೆ ಉಕ್ರೇನ್ ಯುದ್ಧವೇ ಕಾರಣವಾಗಿದ್ದರೆ, ಕನಿಷ್ಠ ಪಕ್ಷ, ಯುದ್ಧವು ಶೀಘ್ರವಾಗಿ ಕೊನೆಗೊಳ್ಳಬೇಕೆಂದು ಅವರು ಅಪೇಕ್ಷಿಸಬೇಕಾಗಿತ್ತು. ಇಂತಹ ಒಂದು ಅಪೇಕ್ಷೆಯು, ರಷ್ಯಾದ ನೆತ್ತರು ಹರಿಸಿ ಅದು ಶರಣಾಗುವವರೆಗೂ ಯುದ್ಧವನ್ನು ಎಳೆದೊಯ್ಯ ಬಯಸುವ ಪಾಶ್ಚಾತ್ಯ ಸಾಮ್ರಾಜ್ಯಶಾಹಿಗೆ ಸ್ವೀಕಾರಾರ್ಹವಲ್ಲ, ಆದುದ ➚

ಸಾಹಿತ್ಯದ ಪ್ರತಿರೋಧದ ಧ್ವನಿ – ಜನಸಾಹಿತ್ಯ ಸಮ್ಮೇಳನ

ಹಾವೇರಿಯಲ್ಲಿ ನಡೆದ 86 ನೇ ಸಾಹಿತ್ಯ ಸಮ್ಮೇಳನವು ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಗಳಿಗೆ ಸಂಬಂಧಿಸಿದಂತೆ ಹಲವು ಪ್ರಶ್ನೆಗಳನ್ನು ಹುಟ್ಟು ಹಾಕಿತು. ರಾಜ್ಯದ ಅನೇಕ ಲೇಖಕರು ಮತ್ತು ಕಲಾವಿದರಿಂದ ಅಸಮಾಧಾನ ಹೊರಹೊಮ್ಮಿ ಜನಸಾಹಿತ್ಯ ಸಮ್ಮೇಳನದ ಮೂಲಕ ಪ್ರತಿರೋಧ ವ್ಯಕ್ತಪಡಿಸಿದರು. ಆ ಮೂಲಕ ಹಾದಿ ತಪ್ಪುತ್ತಿರುವ ಕಸಾಪಕ್ಕೆ ಎಚ್ಚರಿಕೆ ನೀಡಿದ್ದಾರೆ.

ಗುರುರಾಜ ದೇಸಾಯಿ

ರಾಜ್ಯದ ಮೂಲೆ ಮೂಲೆಯಿಂದ ಅತ್ಯಧಿಕ ಸಂಖ್ಯೆಯಲ್ಲಿ ಆಗಮಿಸಿದ್ದ ಸಾಹಿತಿ, ಕಲಾವಿದರು, ಜನಪರ ಚಳುವಳಿಗಾರರು ಜನಸಾಹಿತ್ಯ ಸಮ್ಮೇಳನಕ್ಕೆ ಸಾಕ್ಷಿಯಾಗಿದ್ದರು. ನಾಡಗೀತೆ ಮೂಲಕ ಆರಂಭವಾದ ಜನಸಾಹಿತ್ಯ ಸಮ್ಮೇಳನ, ಪಾಯಸ, ಗೀರೈಸ್, ಅನ್ನ ಸಾಂಬರ್, ಚಿಕನ್ ಕಬಾಬ್, ಮೀನ್ಸಾರು ಸವಿದ ಸಭಿಕರ ನಡುವೆ ಆಹಾರದ ರಾಜಕಾರಣ ಬಿಸಿಬಿಸಿಯಾಗಿತ್ತು. ಆಡಳಿತವನ್ನು ಎಚ್ಚರಿಸುವ, ಸೌಹಾರ್ದತೆಯ ಹೂವನ್ನು ಹೊಸಕಿ ಹಾಕುವವರ ವಿರುದ್ದ ಪ್ರತಿರೋಧದ ಕವಿತೆಗಳು ಕವಿಗೋಷ್ಠಿಯಿಂದ ಬಂದವು. "ಕಟ್ಟುತ್ತೇವ ನಾವು ಕಟ್ಟುತ್ತೇವ" ಕ್ರಾಂತಿಗೀತೆಯೊಂದಿಗೆ ಜನಸಾಹಿತ್ಯ ಸಮ್ಮೇಳನ ಸಮಾರೋಪಗೊಂಡಿತು.

ಗಮನ ಸೆಳೆದ ಬಂಡಾಯದ ಗೆರೆಗಳು:

ಜನಸಾಹಿತ್ಯ ಸಮ್ಮೇಳನದಲ್ಲಿ 'ಬಂಡಾಯದ ಗೆರೆಗಳು' ವ್ಯಂಗ್ಯಚಿತ್ರ ಮತ್ತು ಪೋಸ್ಟರ್ ಗಳ ಪ್ರದರ್ಶನ ನೋಡುಗರ ಗಮನ ಸೆಳೆಯಿತು. ದೊಡ್ಡದಾದ ಕ್ಯಾನ್ವಾಸ್ ಮೇಲೆ ಆರಂಭದಲ್ಲಿ ರೈತ ನಾಯಕ ಎಚ್.ಆರ್. ನವೀನ್ ಕುಮಾರ್ ಎಲ್ಲವನ್ನೂ ಪ್ರಶ್ನಿಸುವ ಅರ್ಥದಲ್ಲಿ ? ಚಿಹ್ನೆಯ ಗೆರೆ ಎಳೆದರು. ಅದರ ಕೆಳಗೆ ಚಿತ್ರನಟ ಪ್ರಕಾಶ್ ರೈ 'ಜಸ್ಟ್ ಆಸ್ಕಿಂಗ್' ಎಂದು ಬರೆದರು. ನಾನು ಕನ್ನಡಿಗ, ಒಳಮೀಸಲಾತಿ ಜಾರಿಯಾಗಲಿ, ಸಮಾನತೆಯ ಹೂ ಎಲ್ಲಡೆ ಅರಳಲಿ ಎಂಬುದು ಸೇರಿದಂತೆ ಅವರವರ ಅಭಿವ್ಯಕ್ತಿ ಹೊರಹೊಮ್ಮಿತ್ತು. ಮೂರನೇ ತರಗತಿಯ ಸಾನ್ವಿ "ಮಾನವ ಸರಪಳಿ" ರಚಿಸಿ ಸೌಹಾರ್ದ ಕರ್ನಾಟಕ ರಕ್ಷಿಸುವ ಭರವಸೆ ನೀಡಿದರೆ, 6ನೇ ತರಗತಿಯ ಸಾಕ್ಷಿ "ಒಗ್ಗಟ್ಟಿನಲ್ಲಿ ಬಲವಿದೆ" ಎಂದು ಬರೆಯುವ ಮೂಲಕ ಗೆಲ್ಲಲೊಂದು ಜಗತ್ತಿದೆ ಎಂಬ ಭರವಸೆ ಮೂಡಿಸಿದರು.

ಖ್ಯಾತ ವ್ಯಂಗ್ಯಚಿತ್ರಗಾರ ಚಿತ್ರಗಳು ನೋಡುಗರನ್ನು ಸೆಳೆಯುವಲ್ಲಿ ಯಶಸ್ವಿಯಾದವು, ಪಿ.ಮಹಮ್ಮದ್, ದಿನೇಶ್ ಕುಕ್ಕುಜಡ್ಕ, ಸತೀಶ್ ಆಚಾರ್ಯ, ಚೇತನ್ ಪುತ್ತೂರು, ಕಲಾವಿದ ಬಾದಲ್ ನಂಜುಂಡಸ್ವಾಮಿ, ಚಂದ್ರಶೇಖರ್ ಶೆಟ್ಟಿ, ಸರೋವರ್ ಬೆಂಕಿಕೆರೆ, ಉದಯ ಗಾಂವ್ಕರ್, ನವೀನ್ ಹಾಸನ, ವಿಶ್ವವಿನ್ಯಾಸ, ಸುನೈಫ್, ರೂಮಿ ಹರೀಶ್, ರೂಪಶ್ರೀ ಕಲ್ಲಿಗನೂರು, ಚರಿತಾ ಮೈಸೂರು, ನಭಾ ಒಕ್ಕುಂದ ಸೇರಿ ಹಲವು ಮಂದಿ ಕಲಾವಿದರ ವ್ಯಂಗ್ಯಚಿತ್ರ ಮತ್ತು ಪೋಸ್ಟರ್ ಗಳು ಪ್ರದರ್ಶನದಲ್ಲಿ ಕಂಡುಬಂದವು.

ಡಾ. ಮೂಡ್ನಾಕೂಡು ಚಿನ್ನಸ್ವಾಮಿ, ಸಾಹಿತ್ಯದ ಗಟ್ಟಿತನ ಎಂತದ್ದು ಎಂಬುದನ್ನು ವಿವರಿಸುತ್ತಾ ಮಾತುಗಳನ್ನು ಆರಂಭಿಸಿದರು.

ಕನ್ನಡ ಸಾಹಿತ್ಯ ಪರಿಷತ್ತು ಹಳಿ ತಪ್ಪಿದಾಗಲೆಲ್ಲಾ ಜನರೇ ಎಚ್ಚರಿಸುತ್ತಾ ಬಂದ ಪರಿಪಾಠವಿದೆ. ಕನ್ನಡ ಭಾಷೆಗೆ ಸುಮಾರು 2000 ವರ್ಷಗಳ ಇತಿಹಾಸವಿದೆ. ಕವಿರಾಜಮಾರ್ಗಕಾರನ ಮತ್ತೆ ಮತ್ತೆ ನೆನೆಯಬೇಕಾದ ಮಾತು 'ಕಸವರನೆಂಬುದು ನೆರೆ ಸೈರಿಸಲಾರ್ಪೊಡೆ ಪರ ಧರ್ಮಮುಮಂ, ಪರ ವಿಚಾರಮುಮಂ.' ಚಿನ್ನವೆಂದರೆ ಯಾವುದು? ಪರಧರ್ಮವನ್ನು ಪರರ ವಿಚಾರವನ್ನು ಗೌರವಿಸುವುದು. ಇಂತಹ ಭವ್ಯ ಇತಿಹಾಸವುಳ್ಳ ಕನ್ನಡ ಧರ್ಮಕ್ಕೆ ಅಪಚಾರವಾಗುವಂತೆ ಸಾಹಿತ್ಯ ಪರಿಷತ್ತು ಮುಸಲ್ಮಾನ ಬರಹಗಾರರನ್ನು ಬಹುತೇಕ ಹೊರಗಿಟ್ಟಿರುವುದು, ಕರ್ನಾಟಕದ ಭಾಷೆಗಳಾದ ತುಳು, ಕೊಡವ, ಅರೆಭಾಷೆ, ಕೊಂಕಣಿ ಭಾಷೆಗಳಿಗೆ ಅವಕಾಶ ನೀಡಿ ಬ್ಯಾರಿ ಭಾಷೆಗೆ ನಿರಾಕರಿಸಿರುವುದು ವಿಷಾದನೀಯ ಎಂದರು.

ವಿವಿಧ ಗೋಷ್ಠಿಗಳು:

ಜನಸಾಹಿತ್ಯ ಸಮ್ಮೇಳನದಲ್ಲಿ 7 ಗೋಷ್ಠಿಗಳು ನಡೆದವು ಗೋಷ್ಠಿಯಲ್ಲಿ ಪಾಲ್ಗೊಂಡಿದ್ದವರ ಅನಿಸಿಕೆಗಳು ಹೀಗಿವೆ..

ಇದು ಪ್ರತಿಭಟನೆ ಅಲ್ಲ, ಪ್ರತಿರೋಧ ಎಂದು ಪ್ರಕಾಶ್ ರೈ ಕವಿತೆ ವಾಚಿಸಿ ಜನಸಾಹಿತ್ಯ ಸಮ್ಮೇಳನಕ್ಕೆ ಧ್ವನಿಯಾದರು. ಮುಸ್ಲಿಮರನ್ನು ಹೊರಗಟ್ಟಲಿಕ್ಕೆ ಇಷ್ಟು ಹುನ್ನಾರ ಬೇಕಿತ್ತೆ? ಎಂದು ಲೇಖಕಿ ಬಾನು ಮುಷ್ತಾಕ್ ಕಸಾಪದ ನಡೆಯನ್ನು ಪ್ರಶ್ನಿಸಿದರು. ನಮ್ಮನ್ನು ವೇಶ್ಯೆಯರು ಎನ್ನುತ್ತೀರಿ. ತಮ್ಮನ್ನು ತಾವೇ ಇನ್ನೊಂದು ಪಕ್ಷಕ್ಕೆ ಮಾರಿಕೊಂಡವರನ್ನು ಏನೆಂದು ನಿಂದಿಸಲಿ ಹೇಳಿ ಎಂದು ಅಕ್ಕೈ ಪದ್ಮಶಾಲಿ ಆಕ್ರೋಶ ಹೊರಹಾಕಿದರು. ಸಂಘ ಪರಿವಾರ ಹಂತಹಂತವಾಗಿ ಸೌಹಾರ್ದ ಮರವನ್ನು ಕಡಿಯುತ್ತಿದೆ ಎಂದು ಹಿರಿಯ ಪತ್ರಕರ್ತ ಅಗ್ನಿ ಶ್ರೀಧರ್ ಎಚ್ಚರಿಸಿದರು. ಕರ್ನಾಟಕ ಹಲವು ಭಾಷೆಗಳನ್ನೊಳಗೊಂಡ ರಂಗೋಲಿ. ಇದರಲ್ಲಿ ಒಂದು ಬಣ್ಣ ಮಾಸಿದರೂ ಕರ್ನಾಟಕ ಬಡವಾಗಲಿದೆ ಎಂಬ ಹಿರಿಯ ಸಾಹಿತಿ ಪ್ರೊ.ಪುರುಷೋತ್ತಮ ಬಿಳಿಮಲೆ ಆಕ್ರೋಶಿತ ಮಾತುಗಳು, ಟಿಪ್ಪು ಈ ನಾಡಿನ ಹೆಮ್ಮೆ ಎಂದು ಪತ್ರಕರ್ತ ಟಿ.ಗುರುರಾಜ್ ಟಿಪ್ಪು ಮಹತ್ವವನ್ನು ಸಾರಿದರು.

ಆಹಾರದ ಮೇಲಿನ ರಾಜಕಾರಣ ಮತ್ತು ದೌರ್ಜನ್ಯ ಹೇಗೆ ನಡೆಯುತ್ತಿದೆ ಎಂದು ಚಿಂತಕ ರಂಗನಾಥ ಕಂಟನಕುಂಟೆ, ಲೇಖಕಿ ಪಲ್ಲವಿ ಇಡೂರು ವಿವರಿಸಿದರು. ಸಭೀಕರು ಊಟ ಸವಿಯುತ್ತ ಗೋಷ್ಠಿಯನ್ನು ಆಲಿಸಿದ್ದು ವಿಶೇಷವಾಗಿತ್ತು.

ಅಲ್ಪಸಂಖ್ಯಾತರು ಮತ್ತು ದಲಿತರ ಮೇಲಿನ ದಾಳಿ ಸಾಹಿತ್ಯ ಲೋಕದ ಜವಾಬ್ದಾರಿಗಳು ಎಂಬ ವಿಚಾರದ ಕುರಿತು ಮಾವಳ್ಳಿ ಶಂಕರ್ ಹಾಗೂ ಮುನೀರ್ ಕಾಟಿಪಳ್ಳ ವಿಷಯವನ್ನು ಮಂಡಿಸಿದರು. ಕನ್ನಡವನ್ನು ಬೆಳಗಿಸಿದ ಕ್ರೈಸ್ತ ಮಿಷನರಿಗಳು ಕುರಿತು ಡಾ. ಕುಮಾರಸ್ವಾಮಿ ಬೆಜ್ಜಿಹಳ್ಳಿ, ವಿಷಯ ಮಂಡಿಸಿದರು.

ಬೀದಿಗೆ ಬರಲಿ ಕಲೆ–ಸಾಹಿತ್ಯ ಎಂಬ ಅರ್ಥದೊಂದಿಗೆ ಸಮುದಾಯ ಬೆಂಗಳೂರು ತಂಡದಿಂದ ಮೂರು ಮಗ್ಗುಲ ಮುಳ್ಳು ಎಂಬ ಬೀದಿ ನಾಟಕ ಪ್ರದರ್ಶನಗೊಂಡಿತು. ಮುಸ್ಲಿಮರನ್ನು ಬೇಡವೆನ್ನುವುದು ಆಧುನಿಕ ಅಸ್ಪೃಶ್ಯತೆ ಎಂದು ಡಾ. ಜಿ.ರಾಮಕೃಷ್ಣ ಖಾರವಾಗಿಯೇ ಕಸಾಪ ನಡೆ ಹಾಗೂ ಮಹೇಶ್ ಜೋಷಿಯ ಉದ್ಧಟತನವನ್ನು ಟೀಕಿಸಿದರು.

ಸಾಹಿತ್ಯ ಸಮ್ಮೇಳನಗಳು ಸೇರಿದಂತೆ ಕನ್ನಡ ಸಾಹಿತ್ಯ ಪರಿಷತ್ ನಡೆಸುವ ಎಲ್ಲ ಕಾರ್ಯಕ್ರಮಗಳಲ್ಲಿ ಎಲ್ಲ ಸಮುದಾಯಗಳ ಒಳಗೊಳ್ಳಬೇಕು. ಹಿಂದಿ ಹೇರಿಕೆ ಹಾಗೂ ಕನ್ನಡದಲ್ಲೇ ಪ್ರಾಥಮಿಕ ಶಿಕ್ಷಣ, ಸಮಗ್ರ ಭಾಷಾ ನೀತಿಯನ್ನು ರೂಪಿಸಬೇಕು ಎಂಬುದು ಸೇರಿದಂತೆ 9 ನಿರ್ಣಯಗಳೊಂದಿಗೆ ಸಮಾರೋಪ ಗೊಂಡಿತು.



ಕವಿಗೋಷ್ಠಿ:

ಯುವಜನರೇ ತುಂಬಿದ್ದ ಕವಿಗೋಷ್ಠಿಯಲ್ಲಿ ಆಡಳಿತವನ್ನು ಎಚ್ಚರಿಸುವ, ಸೌಹಾರ್ದತೆಯ ಹೂವನ್ನು ಹೊಸಕಿ ಹಾಕುವವರ ವಿರುದ್ದ ಪ್ರತಿರೋಧದ ಕವಿತಗಳು ಹೊರಹೊಮ್ಮಿದವು. ನಿನ್ನ ದಾಖಲೆ ಯಾವಾಗ ನೀಡುತ್ತು ಎಂದು ಕೊಪ್ಪಳದ ಯುವಕವಿ ಸಿರಾಜ್ ಬಿಸರಳ್ಳಿ ದಾಖಲೆ ಕೇಳಿದವನ ಉದ್ದೇಶವನ್ನು ಪ್ರಶ್ನಿಸಿದರು. ದೀಪದ ಮಲ್ಲಿ ನಾನು ಹರಿಯುತ್ತಿರುವ ನದಿ ಎಂದರೆ, ದಾದಾಪೀರ್ ಜೈಮನ್ ಬಣ್ಣಗಳನ್ನು ಕಂಪಿಸಿದರು. ಈರಪ್ಪ ತಾಳದವರ "ಎದೆಯೊಳಗಿನ ಬ್ಯಾನಿ" ಕವಿತೆಯಾಗಿ ಬಂತು. ರೈತ ಕವಿ ಚಂಸು ಪಾಟೀಲ್ ಕವಿತೆಗೆ ಬೆಂಕಿಬಿತ್ತು ಎಂದರೆ, ಚಾಂದ್ ಪಾಷಾ "ಪಂಚರ್ ಹಾಕುವವರ" ಎದೆ ಸೀಳಿದರೆ ಮನುಷ್ಯತ್ವದ ಹೂವಿದೆ ಎಂದರು. ಚಾಂದಿನಿ ರಂಗೋಲಿಯ ಅಂಕುಡೊಂಕು ನಂಗಿಷ್ಟ ಎಂದರು. ಪ್ರಕಾಶ್ ಮಂಟೇದಾ, ಟೀನಾ ಶಶಿಕಾಂತ್ ಫಾತಿಮಾ ರಾಲಿಯಾ, ಹಾಜಿರ ಖಾನಂ, ಶಿವರಾಜ್ ಮೋತಿ, ಪಂಚಮಿ ಎಸ್, ಸಂಘಮಿತ್ರೆ, ಮಂಜುನಾಥ್ ಮಾಗೊದಿ, ಪುನೀತ್, ಧನಂಜಯ ದೇವರಹಳ್ಳಿ, ವಿಕಾಸ್ ಮೌರ್ಯ, ರೂಮಿ ಹರೀಶ್, ಪ್ರವೀಣ್ ಬಿ ಎಂ ಕವಿತೆ ವಾಚಿಸಿದರು.

ಯಾವುದೇ ಒಬ್ಬ ಬರಹಗಾರ ಹಾಗೂ ಕವಿ ಕಾಲಕ್ಕೆ ಕೊರಳಾಗಬೇಕು ಎಂದು ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಚಿಂತಕ ಡಾ.ಬಂಜಗೆರೆ ಜಯಪ್ರಕಾಶ್ ಹೇಳಿದರು.

ಯುವಜನರ ದಂಡು:

ಸಮ್ಮೇಳನದ ಆಯೋಜನೆ, ಗೋಷ್ಠಿ, ಭಾಗವಹಿಸಿದ್ದ ಸಭಿಕರಲ್ಲಿ ಹೆಚ್ಚು ಕಂಡು ಬಂದಿದ್ದು ಯುವಜನತೆ. 'ಹೊಸ ಚಿಗುರು ಹಳೆ ಬೇರು ಕೂಡಿರಲು ಮರ ಸೊಬಗು ಎಂಬಂತೆ ಜನ ಸಾಹಿತ್ಯ ಸಮ್ಮೇಳನದ ಯಶಸ್ಸಿನ ಹಿಂದೆ ಯವಕರ ದಂಡೆ ಇತ್ತು. ಕನ್ನಡ ಸಾಹಿತ್ಯ ಪರಿಷತ್ ಹಾಗೂ ಸರಕಾರದ ಅನುದಾನ ಪಡೆದ ನಡೆಸುವ ಕಾರ್ಯಕ್ರಮಗಳಲ್ಲಿ ದಲಿತರು, ದಮನಿತರು, ಆದಿವಾಸಿಗಳು, ಮಹಿಳೆಯರು, ಲೈಂಗಿಕ ಅಲ್ಪಸಂಖ್ಯಾತರು ಮತ್ತು ಅಲ್ಪಸಂಖ್ಯಾತ ಸಮುದಾಯಗಳ ಒಳಗೊಳ್ಳುವಿಕೆ ಬೇಕು' ಎಂಬ ಘೋಷಣೆಯನ್ನು ಮೊಳಗಿಸಿದರು.

➘ ರಿಂದಾಗಿಯೇ ಈ ಅವಳಿ ಸಂಸ್ಥೆಗಳು ಯುದ್ಧವನ್ನು ಕೊನೆಗೊಳಿಸುವ ಅಗತ್ಯದ ಬಗ್ಗೆ ಯಾವುದೇ ಅಭಿಪ್ರಾಯವನ್ನು ವ್ಯಕ್ತಪಡಿಸುವುದಿಲ್ಲ. ಯುದ್ಧವನ್ನು ಕೊನೆಗೊಳಿಸುವ ಬಗ್ಗೆ ಈ ಸಂಸ್ಥೆಗಳು ಮೌನ ತಳೆಯಲು ನಿರ್ಧರಿಸಿದ್ದರೂ ಸಹ, ಆರ್ಥಿಕ ಹಿಂಜರಿತವನ್ನು ಉಂಟುಮಾಡದ ರೀತಿಯ ಮತ್ತು ಬಡ್ಡಿ ದರಗಳ ಏರಿಕೆಯ ಮೂಲಕವಲ್ಲದೆ ಬೇರೆ ಯಾವುದೇ ವಿಧಾನದ ಮೂಲಕ ಹಣದುಬ್ಬರ ಬಿಕ್ಕಟ್ಟನ್ನು ನಿಭಾಯಿಸುವ ಬಗ್ಗೆ ಕೆಲವು ಅಭಿಪ್ರಾಯಗಳನ್ನಾದರೂ ಅವು ವ್ಯಕ್ತಪಡಿಸಬಹುದಿತ್ತು. ಆದರೆ, ಐಎಂಎಫ್ ಮತ್ತು ವಿಶ್ವ ಬ್ಯಾಂಕ್ ಸಂಸ್ಥೆಗಳು ಮುಕ್ತ ಮಾರುಕಟ್ಟೆ ವ್ಯವಸ್ಥೆಗೆ ಎಷ್ಟರಮಟ್ಟಿಗೆ ಬದ್ಧವಾಗಿವೆ ಎಂದರೆ, ಬಡ್ಡಿದರ ಹೆಚ್ಚಳದ ಪರಿಣಾಮವಾಗಿ ಉಂಟಾಗುವ ಆರ್ಥಿಕ ಹಿಂಜರಿತದ ಬಗ್ಗೆ ಮೊಸಳೆ ಕಣ್ಣೀರು ಸುರಿಸುವ ಈ ಸಂಸ್ಥೆಗಳು ಹಣದುಬ್ಬರದ ನಿಯಂತ್ರಣಕ್ಕಾಗಿ ಬೇರೆ ಯಾವುದೇ ಕ್ರಮವನ್ನು (ನೇರ ಬೆಲೆ ನಿಯಂತ್ರಣದಂತಹ) ಯೋಚಿಸುವುದೂ ಸಾಧ್ಯವಿಲ್ಲ.

ಅಂತೆಯೇ, ವಿಶ್ವಬ್ಯಾಂಕ್ ಅಧ್ಯಕ್ಷ ಡೇವಿಡ್ ಮಾಲ್ಪಾಸ್ ಅವರು ಮುಂಬರುವ ತಿಂಗಳುಗಳಲ್ಲಿ ತೀವ್ರ ಹೊಡೆತಕ್ಕೆ ಒಳಗಾಗಲಿರುವ ಸಾಲದ ಹೊರೆ ಹೊತ್ತ ಮೂರನೇ ಜಗತ್ತಿನ ದೇಶಗಳೊಂದಿಗೆ ಮರುಕ ತೋರುತ್ತರಾದರೂ, ಮತ್ತು, ಈ ದೇಶಗಳ ಸಾಲದ ಹೊರೆಯ ಹೆಚ್ಚಿನ ಭಾಗವು ಹೆಚ್ಚಿನ ಬಡ್ಡಿ ದರಗಳಿಂದಾಗಿ ಉದ್ಭವಿಸಿದೆ ಎಂಬುದನ್ನು ಹೇಳುತ್ತಾರಾದರೂ, ಬಡ್ಡಿ ದರಗಳನ್ನು ಇಳಿಕೆ ಮಾಡುವ ಬಗ್ಗೆ ಅವರ ತುಟಿ ಪಿಟಕ್ ಎನ್ನುವುದಿಲ್ಲ. ವಿಷಯವನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, ವಿಶ್ವದ ಬಡವರಿಗೆ ಸಹಾಯ ಮಾಡುವ ಸಂದರ್ಭ ಬಂದಾಗ, ಎರಡೂ ಬ್ರೆಟ್ಟನ್ ವುಡ್ಸ್ ಸಂಸ್ಥೆಗಳು ಬಾಯಿ ತುಂಬಾ ಅಯ್ಯೊ ಪಾಪ ಎನ್ನುತ್ತವೆ, ಕೈ ಬಿಚ್ಚಬೇಕಾದ ಸಮಯ ಬಂದಾಗ ಕೈ ಕೊಡುತ್ತವೆ.

ಸಂಕ್ಷಿಪ್ತವಾಗಿ ಹೇಳುವುದಾದರೆ, ಇದು ಬ್ರೆಟ್ಟನ್ ವುಡ್ಸ್ ಸಂಸ್ಥೆಗಳ ಪುಕ್ಕಲುತನದ ವಿಷಯವಲ್ಲ. ವಿಷಯ ಬಹಳ ಗಹನವಾಗಿದೆ. ಅಂದರೆ, ವಿಶ್ವ ಬಂಡವಾಳಶಾಹಿಯು ಇಂದು ಪಾರಾಗಲು ಸಾಧ್ಯವಿಲ್ಲದ ಒಂದು ನೈಜ ಬಿಕ್ಕಟ್ಟಿನಲ್ಲಿ ಸಿಲುಕಿದೆ. ನೂರಾರು ವರ್ಷಗಳ ಕಾಲಾವಧಿಯಲ್ಲಿ ವಿಕಸನಗೊಂಡ ಪಾಶ್ಚಾತ್ಯ ಸಾಮ್ರಾಜ್ಯಶಾಹಿ ವ್ಯವಸ್ಥೆಯು ಹಾಗೆಯೇ ಉಳಿಯಬೇಕು ಎಂದಾದರೆ, ಮೆಟ್ರೋಪಾಲಿಟನ್ ಬಂಡವಾಳಶಾಹಿ ದೇಶಗಳು ಉಕ್ರೇನ್ ಯುದ್ಧವನ್ನು ಮುಂದುವರಿಸಲೇಬೇಕಾಗುತ್ತದೆ. ಹಾಗಾಗಿ, ಇಂತಹ ಪರಿಸ್ಥಿತಿಯಲ್ಲಿ, ಚತುರತೆಯಿಂದ ವ್ಯವಸ್ಥೆಗೊಳಿಸಿದ ಒಂದು ಆರ್ಥಿಕ ಹಿಂಜರಿತ ಉಂಟಾಗದಿದ್ದರೆ, ಪ್ರಸಕ್ತ ವೇಗದ ಹಣದುಬ್ಬರ ಮತ್ತು ಅದರ ಪರಿಣಾಮವಾಗಿ ಸೃಷ್ಟಿಯಾಗುವ ನಿರುದ್ಯೋಗ ಇವು ಅನಿವಾರ್ಯವಾಗುತ್ತವೆ. ಹಾಗಾಗಿ, ವಿಶ್ವ ಬಂಡವಾಳಶಾಹಿಯು ಈ ಮಾರ್ಗವನ್ನು ಆಯ್ಕೆ ಮಾಡಿಕೊಳ್ಳುವ ಸಂಗತಿಯು ಯಾವ ಆಶ್ಚರ್ಯವನ್ನೂ ಉಂಟುಮಾಡಬಾರದು. ಬಹಳ ಮುಖ್ಯವಾದ ವಿಷಯವೆಂದರೆ, ಅದನ್ನು ಪ್ರತಿರೋಧಿಸುವುದೇ ಆಗಿದೆ.

NEW No. MAG(3)/NPP/205/2021-2022
JANASHAKTHI KANNADA VARA PATRIKE January 23-29, 2023 Price: Rs. 10/- Date of Publication: 20 January 2023 RNI No. KARKAN /2006/17926 Posted on 24-01-2023
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21 **Posted at Periodical Rate** - Rs. 2



ಬಾಗೇಪಲ್ಲಿ: ಶೋಷಿತರ ಗಟ್ಟಿ ಧ್ವನಿ ಸಂಕಷ್ಟಗಳಿಗೆ ಪರಿಹಾರ

ಅಲಿಡಾ ಚೆಗೆವಾರ, ಎಸ್ತೆಫಾನಿಯಾರವರಿಗೆ ಸಂಭ್ರಮದ ಸ್ವಾಗತ ಹೃದಯಸ್ಪರ್ಶಿ ಅಭಿನಂದನೆ

ಶೋಷಿತರ, ದಮನಿತರ ಧ್ವನಿ ಎಲ್ಲಿ ಗಟ್ಟಿಯಾಗಿರುತ್ತದೆಯೋ ಅಂಥ ಕಡೆ ಜನರ ಸಂಕಷ್ಟಗಳು ಪರಿಹಾರವಾಗುತ್ತವೆ. ಜನರ ಸಂಕಷ್ಟಗಳ ಪರಿಹಾರಕ್ಕೆ ಹೋರಾಡುವವರು ಎಂದೆಂದಿಗೂ ಅಜರಾಮರಾಗಿರುತ್ತಾರೆ ಎಂದು ಕ್ಯೂಬಾದ ಕ್ರಾಂತಿಕಾರಿ ಚೆ ಗೆವಾರ ಅವರ ಮಗಳು ಡಾ. ಅಲಿಡಾ ಚೆ ಗೆವಾರ ಪ್ರತಿಪಾದಿಸಿದರು."

ಪಟ್ಟಣದ ಹೊರವಲಯ ಟಿ.ಬಿ. ಕ್ರಾಸ್ನಲ್ಲಿ ಗುರುವಾರ ಹಮ್ಮಿಕೊಂಡಿದ್ದ 'ಚೆ ಹಬ್ಬ' ದಲ್ಲಿ ನಾಗರಿಕ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

'ಕ್ಯೂಬಾದ ಮಹಾನ್ ಕ್ರಾಂತಿಕಾರಿ ಚೆ ಗೆವಾರ ನನ್ನ ತಂದೆ ಎಂದು ಹೇಳಲು ಹೆಮ್ಮೆಯಾಗುತ್ತದೆ. ಕ್ಯೂಬಾದಿಂದ ಬಂದ ನಮಗೆ ನೀವು ನೀಡಿದ ಈ ಗೌರವವನ್ನು ಎಂದಿಗೂ ಮರೆಯಲಾಗದು. ಇದು ಇಡೀ ಕ್ಯೂಬಾನ್ನರಿಗೆ ಸಂದ ಗೌರವ.

ನನ್ನ ತಂದೆ ಜೀವನ ಉದ್ದಕ್ಕೂ ಶೋಷಿತರು, ದಮನಿತರ ಪರ ಹೋರಾಟ ಮಾಡಿದರು. ಅವರ ಹೋರಾಟದ ಹಾದಿ, ಆದರ್ಶಗಳನ್ನು ಇಂದಿನ ಯುವ ಜನಾಂಗ ಮತ್ತು ಮಹಿಳೆಯರು ರೂಢಿಸಿಕೊಳ್ಳಬೇಕು' ಎಂದರು.

'ಸಾಮ್ರಾಜ್ಯಶಾಹಿ ಜತೆ ಎಂದಿಗೂ ರಾಜಿಯಾಗದೆ ಚೆ ಗೆವಾರ ಅವರು ನಿರಂತರ ಹೋರಾಟ ಮಾಡಿದ್ದರು. ನಮ್ಮ ದೇಶದಲ್ಲಿಯ ಕೋಮುದಳ್ಳುರಿ ವಿರುದ್ಧ ಸಮಾನತೆ, ಸಹೋದರತೆ, ಸೌಹಾರ್ದತೆ ಗಟ್ಟಿಗೊಳಿಸಲು ಚೆ ಗೆವಾರ ಮಗಳು; ಅಲಿಡಾ ಮತ್ತು ಮೊಮ್ಮಗಳು; ಎಸ್ತೆಫಾನಿಯಾ ಬಾಗೇಪಲ್ಲಿಗೆ ಬಂದು ಜಾಗೃತಿ ಮೂಡಿಸುತ್ತಿದ್ದಾರೆ' ಎಂದು ಮಾಧ್ಯಮ ತಜ್ಞ ಜಿ.ಎನ್. ಮೋಹನ್ ಹೇಳಿದರು. ಸೌಹಾರ್ದತೆ ಹಾಗೂ ಸಹಬಾಳ್ವೆಯ ಬಗ್ಗೆ ಜಾಗೃತಿ ಮೂಡಿಸಲು ಡಾ.ಅಲಿಡಾ ಮತ್ತು ಎಸ್ತೆಫಾನಿಯಾ ಬಂದಿದ್ದಾರೆ. ಸಾಮ್ರಾಜ್ಯಶಾಹಿ ವಿರುದ್ಧ ಹೋರಾಡಿದ ಚೆ ಗೆವಾರ ಅವರನ್ನು ಯುವ ಜನಾಂಗ ಆದರ್ಶವಾಗಿ ಸ್ವೀಕರಿಸಬೇಕು ಎಂದು; ಬಾಗೇಪಲ್ಲಿ ವಿಧಾನಸಭಾಕ್ಷೇತ್ರ ಸಿಪಿಐ(ಎಂ) ಅಭ್ಯರ್ಥಿ ಡಾ. ಅನಿಲ್ ಕುಮಾರ್ ಹೇಳಿದರು.



ಮೈಸೂರು ರಂಗ ಕಲಾವಿದರು ಚೆ ಜೀವನ ಆಧಾರಿತ ನಾಟಕ ಪ್ರದರ್ಶಿಸಿದರು. ಅಲಿಡಾ, ಎಸ್ತೆಫಾನಿಯಾ ಅವರಿಗೆ ಚೆ ಗೆವಾರ ಭಾವಚಿತ್ರ ಹಾಗೂ ಚರಕವನ್ನು ನೆನಪಿನ ಕಾಣಿಕೆ ನೀಡಲಾಯಿತು.

ಕೋವಿಡ್ ಸಂದರ್ಭದಲ್ಲಿ ಶ್ರಮಿಸಿದವರಿಗೆ ಅಭಿನಂದಿಸಲಾಯಿತು. ಡಾ. ರವೀಂದ್ರ, ಪೊಲೀಸ್ ಇನ್ಸ್‌ಪೆಕ್ಟರ್ ಡಿ.ಆರ್. ನಾಗರಾಜ್, ಔಷಧ ವಿತರಕರು, ಅಂಗನವಾಡಿ, ಆಶಾ ಕಾರ್ಯಕರ್ತೆಯರು ಮತ್ತು ಕೂಲಿ ಕಾರ್ಮಿಕ ಸಂಘಟನೆಯ ಸೇವಾಕರ್ತರನ್ನು ಇದೇ ಸಂದರ್ಭದಲ್ಲಿ ಗೌರವಿಸಲಾಯಿತು.

ಕ್ಯೂಬಾ ಸೌಹಾರ್ದ ಸಮಿತಿ ಹಾಗೂ ಕೇರಳ ಮಾಜಿ ಸಚಿವ ಎಂ.ಎ. ಬೇಬಿ, ಸಿಪಿಐ(ಎಂ) ರಾಜ್ಯ ಸಮಿತಿ ಕಾರ್ಯದರ್ಶಿ ಯು. ಬಸವರಾಜು, ಜಿಲ್ಲಾ ಕಾರ್ಯದರ್ಶಿ ಎಂ.ಪಿ. ಮುನಿವೆಂಕಟಪ್ಪ, ಪ್ರಾಂತ ಕೃಷಿಕೂಲಿಕಾರರ ಸಂಘಟನೆ ಜಿಲ್ಲಾ ಕಾರ್ಯದರ್ಶಿ ಎಚ್.ಪಿ. ಲಕ್ಷ್ಮಿನಾರಾಯಣ, ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಸಿದ್ದಗಂಗಪ್ಪ, ಪ್ರಸೂತಿ ವೈದ್ಯೆ ಡಾ. ಮಂಜುಳ ಪ್ರಸಾದ್, ಜನವಾದಿ ಮಹಿಳಾ ಸಂಘಟನೆಯ ತಾಲ್ಲೂಕು ಅಧ್ಯಕ್ಷೆ ಬಿ. ಸಾವಿತ್ರಮ್ಮ, ಎಂ.ಎನ್. ರಘುರಾಮರೆಡ್ಡಿ, ನಾಗರಾಜ್, ಜಿ. ಮುಸ್ತಾಫ, ಗೋವರ್ಧನಚಾರಿ ಇದ್ದರು.

ರಾರಾಜಿಸಿದ ಕ್ಯೂಬಾ ಕ್ರಾಂತಿಕಾರಿ ಚಿಕ್ಕಬಳ್ಳಾಪುರದ ಕಡೆಯಿಂದ ವರ್ಲಕೊಂಡ, ಬೀಚಗಾನಹಳ್ಳಿ, ಚೆಂಡೂರು, ಪರಗೋಡು, ಟಿ.ಬಿ. ಕ್ರಾಸ್‌ಗಳಲ್ಲಿ ಅಭಿಮಾನಿಗಳು, ಯುವಕರು ಲಾಲ್ ಸಲಾಂ ಮೂಲಕ ಅಲಿಡಾ ಮತ್ತು ಎಸ್ತೆಫಾನಿಯಾ ಅವರನ್ನು ಸ್ವಾಗತಿಸಿದರು. ಜತೆಗೆ ಸ್ಕೂಟರ್, ಬೈಕ್ ರ್‍ಯಾಲಿ ನಡೆಸಲಾಯಿತು. ಯುವಕರು, ರೈತರು ಚೆ ಗೆವಾರ ಭಾವಚಿತ್ರವುಳ್ಳ ಕೆಂಪು ಟೀ ಷರ್ಟ್ ಧರಿಸಿದ್ದರು. ವಾಹನಗಳಿಗೆ ಚೆ ಗೆವಾರ ಬಾವುಟ ಕಟ್ಟಿ ರ್‍ಯಾಲಿ ನಡೆಸಿದರು. ಟಿ.ಬಿ. ಕ್ರಾಸ್ನಿಂದ ನ್ಯಾಷನಲ್ ಕಾಲೇಜಿನವರಿಗೆ ನಡೆದ ಬೈಕ್ ರ್‍ಯಾಲಿಗೆ ದಾರಿಯುದ್ದಕ್ಕೂ ಅಭಿಮಾನಿಗಳು ಹೂ ಚೆಲ್ಲಿ ಸ್ವಾಗತಿಸಿದರು.



ಬೆಂಗಳೂರಿನಲ್ಲಿ ಅಲಿಡಾ ಚೆಗೆವಾರ, ಎಸ್ತೆಫಾನಿಯಾ ರವರಿಗೆ ಅಭೂತಪೂರ್ವ ನಾಗರಿಕ ಸನ್ಮಾನ





JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**